

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 9 ಗುರುವಾರ 2022

ಸಂಪುಟ: 43 | ಸಂಚಿಕೆ: 54 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com



ನವ ಕರ್ನಾಟಕದ ಮೂಲಕ ನವ ಭಾರತಕ್ಕೆ ಮುನ್ನುಡಿ

ಮೈಸೂರಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ

- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ
- ಕೌಶಲ್ಯವುಳ್ಳ ಮಾನವ ಸಂಪನ್ಮೂಲ ರೂಪಿಸಲು ಕ್ರಮ


ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ರಾಜ್ಯ ಬಿಜೆಪಿ ನಾಯಕರ ಶಕ್ತಿ ಪ್ರದರ್ಶನ.

ಮೈಸೂರು, ಜೂ.8 (ಎಂಟಿವೈ)– ನವ ಕರ್ನಾಟಕದ ಮೂಲಕ ನವ ಭಾರತ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬೆಂಗಳೂರಿನ ನಂತರ ದೊಡ್ಡ ನಗರವಾಗಿ ಬೆಳೆಯುತ್ತಿರುವ ಮೈಸೂರು ಸೇರಿದಂತೆ ಐದು ಮಹಾನಗರಗಳಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರ ಚುನಾವಣಾ ಪ್ರಚಾರ ಸಭೆಯನ್ನು ಉದ್ಘಾಟಿಸಿ, ಮಾತನಾಡಿದ ಅವರು, ಬೆಂಗಳೂರು ನಂತರದ ಎರಡನೇ ನಗರಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಐದು ಮಹಾನಗರಗಳನ್ನು ▶ 5ನೇ ಪುಟಕ್ಕೆ

ಕರ್ನಾಟಕದ ಪ್ರಗತಿ ಹಿಂದೆ ಮೈಸೂರು ಮಹಾರಾಜರ ಕೊಡುಗೆಗಳಿವೆ...

ಮೈಸೂರು ಪ್ರತಿಭಾವಂತರು, ಪ್ರತಿಭಾನ್ವಿತ ನಾಯಕರು, ಜನಪ್ರತಿನಿಧಿಗಳು, ಜನರು ಇರುವ ನಗರವಾಗಿದೆ. ಇದಕ್ಕೆ ತನ್ನದೇ ಆದ ಇತಿಹಾಸ ವಿದೆ. ಕರ್ನಾಟಕ ಹೆಸರಿಗೂ ಮುನ್ನ ಮೈಸೂರು ರಾಜ್ಯವಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಕಿರುವ ಅಡಿಪಾಯದಿಂದಾಗಿ ಕರ್ನಾಟಕವನ್ನು ಸುಂದರವಾಗಿ ಕಟ್ಟಲು ಸಾಧ್ಯವಾಯಿತು. ಕರ್ನಾಟಕ ಪ್ರಗತಿಪರ ರಾಜ್ಯವಾಗಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ದಾವೋಸ್‌ಗೆ ತೆರಳಿದ್ದಾಗ ಅಮೆರಿಕಾದ ಪತ್ರಕರ್ತರೊಬ್ಬರು ಕರ್ನಾಟಕ ತಾಂತ್ರಿಕತೆಯಲ್ಲಿ ಮುಂದು ವರಿಯಲು ಕಾರಣ ಏನು ▶ 5ನೇ ಪುಟಕ್ಕೆ

ನವ ಭಾರತ ನಿರ್ಮಾಣಕ್ಕೆ ಪದವೀಧರರು ಒತ್ತಾಸೆಯಾಗಿ

ನವ ಕರ್ನಾಟಕದ ಮೂಲಕ ನವ ಭಾರತ ನಿರ್ಮಿಸುವ ಭಾರತೀಯ ಜನತಾ ಪಕ್ಷದ ಆಶಯಕ್ಕೆ ಮೈಸೂರು ವಿಭಾಗದ ಪ್ರಜ್ಞಾವಂತ ಪದವೀಧರ ಮತದಾರರು ಬೆಂಬಲ ಸೂಚಿಸಲಿದ್ದಾರೆ. ಪ್ರತಿ ಮತದಾರನು ತಮ್ಮ ಮತ ಗೆಲ್ಲಬೇಕು ಎಂದು ಬಯಸುತ್ತಾರೆ. ಪ್ರತಿ ಮತದಾರನ ಅಭಿಪ್ರಾಯ ಬಹಳ ಮುಖ್ಯ ಎಂದು ಸಿಎಂ ಬೊಮ್ಮಾಯಿ ಹೇಳಿದರು. ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಜಿಲ್ಲೆಗಳ ಮತದಾರರು ಜಾಗೃತರಾಗಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಮೈ.ವಿ.ರವಿಶಂಕರ್ ಪರವಾದ ಅಲೆ ಇದೆ. ಜಾತಿ, ಮತ, ಪಂಥ ಮೀರಿ ಚುನಾವಣೆ ನಡೆಯುತ್ತಿದೆ. ರಾಷ್ಟ್ರ ಪ್ರೇಮಿ ಮೋದಿ ದಕ್ಷ ಆಡಳಿತವನ್ನು ಪದವೀಧರರು ಮೆಚ್ಚಿದ್ದಾರೆ. ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಪರಾಭವಗೊಂಡಿರುವ ರವಿಶಂಕರ್ ಅವರು ಹೆಚ್ಚಿನ ಮತಗಳ ಅಂತರದಿಂದ ಜಯಶೀಲರಾಗಲಿದ್ದಾರೆ. ಬಿಜೆಪಿಯ ಅಭಿವೃದ್ಧಿ ಪರ್ವಕ್ಕೆ ಬಲ ತುಂಬಲಿದ್ದಾರೆ ಎಂದರು.

ಮೈಸೂರು ರೇಷ್ಮೆ ಸ್ಯಾರಿಗೆ ಮಾರುಹೋದ ಗಡ್ಕರಿ ದಂಪತಿ...



ಮೈಸೂರು ವಿದ್ಯಾರಣ್ಯಪುರಂನ ಕರ್ನಾಟಕ ಸಿಲ್ಕ್ ಇಂಡಸ್ಟ್ರಿಯಲ್ ಕಾರ್ಪೋರೇಷನ್‌ನ ಮಳಿಗೆಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರು ತಮ್ಮ ಪತ್ನಿ ಕಾಂಚನ ಗಡ್ಕರಿ ಅವರೊಂದಿಗೆ ಬುಧವಾರ ಭೇಟಿ ನೀಡಿ, ಮೈಸೂರು ರೇಷ್ಮೆ ಸೀರೆ ಅಂದಕ್ಕೆ ಮಾರುಹೋದರು. ಈ ವೇಳೆ ಸೀರೆ ಸೆಲೆಕ್ಷನ್‌ಗೆ ಪತ್ನಿಗೆ ನೆರವಾದರು.

ಮೈಸೂರು-ನಂಜನಗೂಡು ಹೆದ್ದಾರಿ ಆರು ಪಥ ರಸ್ತೆಯಾಗಿ ಮೇಲ್ದರ್ಜೆಗೆ



- ಸಂಸದ ಪ್ರತಾಪ್ ಸಿಂಹ ಮನವಿಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಅಸ್ತು
- ಕುಕ್ಕರಹಳ್ಳಿ ಕೆರೆ ಬಳಿ ರೈಲ್ವೆ ಕೆಳ ಸೇತುವೆಯೂ ಸೇರಿದಂತೆ ಹಲವು ರಸ್ತೆ ಯೋಜನೆಗೂ ಅನುಮೋದನೆ

ಮೈಸೂರು,ಜೂ.8(ಪಿಎಂ)– ರಾಷ್ಟ್ರೀಯ ಹೆದ್ದಾರಿ–212ರ ಮೈಸೂರು–ನಂಜನಗೂಡು ರಸ್ತೆಯನ್ನು 4 ಪಥದಿಂದ 6 ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಲು ಕೇಂದ್ರ ರಸ್ತೆ ಸಾರಿಗೆ, ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅನುಮೋದನೆ ನೀಡಿದ್ದು, ವಿಮಾನ ನಿಲ್ದಾಣಕ್ಕೆ ಸಂಪರ್ಕ ಹಾಗೂ ಕಡಕೊಳ ಮತ್ತು ತಾಂಡವಪುರ ಕೈಗಾರಿಕಾ ಪ್ರದೇಶಗಳಿಗೆ ಉತ್ತೇಜನ ನೀಡಲು ಈ ರಸ್ತೆ ಅಭಿವೃದ್ಧಿ ಸಹಕಾರಿಯಾಗಲಿದೆ. ಬುಧವಾರ ಮೈಸೂರಿಗೆ ▶ 5ನೇ ಪುಟಕ್ಕೆ

ಇಂದಿನಿಂದ ಪಿಯು ತರಗತಿ ಪ್ರಾರಂಭ

ಬೆಂಗಳೂರು: 2022–23ನೇ ಸಾಲಿನ ಪದವಿ ಪೂರ್ವ ಕಾಲೇಜುಗಳು ನಾಳೆ (ಜೂ.9)ಯಿಂದ ಪ್ರಾರಂಭವಾಗಲಿವೆ. ತರಗತಿಗಳ ಪ್ರಾರಂಭಕ್ಕೆ ಪದವಿ ಪೂರ್ವ ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಕೊರೊನಾ 3 ಅಲೆಗಳ ಬಳಿಕ 2 ವರ್ಷಗಳ ಕೊರೊನಾ ಆತಂಕದ ನಡುವೆ ಪೂರ್ಣ ಪ್ರಮಾಣದಲ್ಲಿ ಭೌತಿಕ ತರಗತಿಗಳು ಪ್ರಾರಂಭವಾಗುತ್ತಿವೆ. ಕೊರೊನಾ ಹಿನ್ನೆಲೆಯಲ್ಲಿ ಕಾಲೇಜುಗಳಿಗೆ ರಜೆ ನೀಡಿ, ಆನ್‌ಲೈನ್ ತರಗತಿಗಳನ್ನು ನಡೆಸಲಾಗಿತ್ತು. ಕೊರೊನಾ ನಿಯಂತ್ರಣದಲ್ಲಿ ಇರುವುದರಿಂದ ಕಾಲೇಜು ಪ್ರಾರಂಭಕ್ಕೆ ಸರ್ಕಾರ ಗ್ರೀನ್ ಸಿಗ್ನಲ್ ನೀಡಿದೆ. ಈಗಾಗಲೇ ಕಾಲೇಜು ಪ್ರಾರಂಭಕ್ಕೆ ಪಿಯುಸಿ ಬೋರ್ಡ್ ಮಾರ್ಗಸೂಚಿ ಮತ್ತು ವೇಳಾಪಟ್ಟಿ ಪ್ರಕಟ ಮಾಡಿದೆ. ಹಿಜಾಬ್ ಸಂಘರ್ಷದ ಹಿನ್ನೆಲೆಯಲ್ಲಿ ಈ ವರ್ಷ ಸರ್ಕಾರ ಎಚ್ಚೆತ್ತುಕೊಂಡಿದೆ. ಕಾಲೇಜುಗಳಲ್ಲಿ ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು ಅಂತ ಮಾರ್ಗಸೂಚಿಯಲ್ಲೇ ತಿಳಿಸಿದೆ. ಈ ವರ್ಷದಿಂದ ಕಡ್ಡಾಯವಾಗಿ ಸಮವಸ್ತ್ರ ನಿಯಮ ಪಾಲನೆ ಮಾಡಬೇಕು ಎಂದು ಆದೇಶಿಸಿದೆ.

ಹಿಜಾಬ್ ನಿಷೇಧ

ರುಂಡ ಮುಂಡ ಬೇರ್ಪಟ್ಟ ಮಹಿಳೆಯರ ದೇಹ ಪತ್ತೆ

ಪ್ರತ್ಯೇಕ ಸ್ಥಳಗಳಲ್ಲಿ ನಾಲೆಯಲ್ಲಿ ತೇಲಿ ಬಂದ ದೇಹಗಳು

ಶ್ರೀರಂಗಪಟ್ಟಣ, ಜೂ. 8– ದುಷ್ಕರ್ಮಿಗಳು ಇಬ್ಬರು ಮಹಿಳೆಯರನ್ನು ಭೀಕರವಾಗಿ ಹತ್ಯೆಗೈದು, ಮೃತದೇಹಗಳನ್ನು ತುಂಡರಿಸಿ, ಹೊಟ್ಟೆಯಿಂದ ಕೆಳಭಾಗವನ್ನು ಮಾತ್ರ ನಾಲೆಗೆ ಬಿಸಾಕಿರುವ ಬಗ್ಗೆ ವರದಿಯಾಗಿದ್ದು, ಶ್ರೀರಂಗಪಟ್ಟಣ ಉಪವಿಭಾಗದ ಪಾಂಡವಪುರ ಠಾಣಾ ವ್ಯಾಪ್ತಿಯ ನಾಲೆಯಲ್ಲಿ ಒಂದು ಮೃತದೇಹ ಪತ್ತೆಯಾದರೆ, ಅರಕೆರೆ ಠಾಣಾ ವ್ಯಾಪ್ತಿಯ ನಾಲೆಯಲ್ಲಿ ಮತ್ತೊಂದು ದೇಹ ಪತ್ತೆಯಾಗಿದೆ.

ಇಬ್ಬರೂ ಮಹಿಳೆಯರನ್ನು ಕೊಂದು, ಗುರುತು ಸಿಗಬಾರದೆಂದು ಹೊಟ್ಟೆಯ ಮೇಲ್ಭಾಗವನ್ನು ಬೇರ್ಪಡಿಸಿ, ಕೆಳಭಾಗವನ್ನು ಮಾತ್ರ ನಾಲೆಗೆ ಬಿಸಾಕಿದ್ದು, ಇಬ್ಬರೂ ಮಹಿಳೆಯರ ಕಾಲುಗಳನ್ನು ತೊಡೆಗೆ ಸೇರಿಸಿ ಕಟ್ಟಲಾಗಿದೆ. ಪಾಂಡವಪುರ ಠಾಣೆ ವ್ಯಾಪ್ತಿಯಲ್ಲಿ ದೊರೆತಿರುವ ಮಹಿಳೆಗೆ 30ರಿಂದ 32 ಹಾಗೂ ಅರಕೆರೆ ಬಳಿ ದೊರೆತಿರುವ ಮಹಿಳೆಗೆ 40ರಿಂದ 45 ವರ್ಷ ವಯಸ್ಸಾಗಿರಬಹುದು ಎಂದು ಪೊಲೀಸರು ಅಂದಾಜಿಸಿದ್ದಾರೆ.

ಪಾಂಡವಪುರ ಠಾಣಾ ಸರಹದ್ದಿನ ಚಿನಕುರುಳಿ ಗ್ರಾಮದ ಜಿ.ಹೆಚ್.ಇಬ್ರಾಹಿಂ ಅವರು ಬೇಬಿ ಗ್ರಾಮ–ಕೆ.ಬೆಟ್ಟಹಳ್ಳಿ ರಸ್ತೆಯಲ್ಲಿ ತೆರಳುತ್ತಿದ್ದಾಗ ಅಲ್ಲಿನ ಗೌರಮ್ಮ ಎಂಬುವರ ಜಮೀನಿನ ಎದುರು ಭಾಗ ▶ 5ನೇ ಪುಟಕ್ಕೆ

10 ಸಾವಿರ ಶಾಲಾ ಮಕ್ಕಳಿಗೆ ಪ್ರಧಾನಿ ಮೋದಿಯೊಂದಿಗೆ ಯೋಗಾ ಯೋಗ

ಮೈಸೂರು ನಗರ ಶಾಲಾ ಮಕ್ಕಳಿಗೆ ಆರಂಭವಾಗಿದೆ ಯೋಗಾಭ್ಯಾಸ

ಮೈಸೂರು,ಜೂ.8(ಎಂಟಿವೈ)– ಜೂ.21ರಂದು ಮೈಸೂರು ಅರಮನೆ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳುವ ಅಂತಾರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ವಿವಿಧ ಶಾಲೆಗಳಿಂದ 10 ಸಾವಿರ ಅತ್ಯುತ್ತಮ ಯೋಗಪಟುಗಳನ್ನು ಆಯ್ಕೆ ಮಾಡುವಂತೆ ಸೂಚಿಸಲಾಗಿದ್ದು, ಅದಕ್ಕಾಗಿ ಮೈಸೂರಿನ ಶಾಲೆಗಳಲ್ಲಿ ಯೋಗಾಭ್ಯಾಸ ಆರಂಭವಾಗಿದೆ.

ಅರಮನೆ ಮುಂಭಾಗದ ಪ್ರಾಂಗಣದಲ್ಲಿ ನಡೆಯುವ ಯೋಗ ಪ್ರದರ್ಶನದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದು, ಭದ್ರತಾ ದೃಷ್ಟಿಯಿಂದ ಅರಮನೆ ಆವರಣದಲ್ಲಿ ಪ್ರಧಾನಿ ಅವರೊಂದಿಗೆ 15 ಸಾವಿರ ಮಂದಿಯಷ್ಟೇ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅದರಲ್ಲೂ 10 ಸಾವಿರ ಶಾಲಾ ಮಕ್ಕಳಿಗೆ ಅವಕಾಶ ಕಲ್ಪಿಸುವಂತೆ ಪ್ರಧಾನಮಂತ್ರಿಗಳ ಕಚೇರಿಯ ಆದೇಶವಾಗಿರುವುದರಿಂದ ಇದೀಗ ಮೈಸೂರು ನಗರ ವ್ಯಾಪ್ತಿಗೆ ಒಳಪಡುವ ಶಾಲೆಗಳಿಗೆ ಡಿಡಿಪಿಐ ರಾಮರಾಜೇಅರಸ್ ಸೂಚನೆ ನೀಡಿದ್ದು, ▶ 5ನೇ ಪುಟಕ್ಕೆ


ಫೈಲ್ ಚಿತ್ರ

ಕನಿಷ್ಠ ಬೆಂಬಲ ಬೆಲೆ ಏರಿಕೆಗೆ ಕೇಂದ್ರ ಅಸ್ತು

ನವದೆಹಲಿ: ಮುಂಗಾರು ಬೆಳೆಗಳ ಕನಿಷ್ಠ ಬೆಂಬಲ ಬೆಲೆ ಏರಿಕೆ ಮಾಡಲು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಮಾಡಲಾಗಿದೆ.

ಸಂಪುಟ ಸಭೆ ಬಳಿಕ ಕೇಂದ್ರ ಸಚಿವ ಅನುರಾಗ್ ಠಾಕೂರ್ ಮಾತನಾಡಿ, ಮುಂಗಾರಿನಲ್ಲಿ ಬೆಳೆಯುವ ಬೆಳೆಗಳ ಬೆಂಬಲ ಬೆಲೆ ಏರಿಕೆಗೆ ನಿರ್ಧರಿಸಲಾಗಿದೆ. ಕ್ವಿಂಟಾಲ್ ಬೇಳೆ ಬೆಂಬಲ ಬೆಲೆ 480 ರೂ ಹೆಚ್ಚಳ. ಕ್ವಿಂಟಾಲ್ ಎಳ್ಳು 523 ರೂ ಹೆಚ್ಚಳ. ಸೂರ್ಯಕಾಂತಿ ಬೀಜದ ಬೆಂಬಲ ಬೆಲೆ 385 ರೂ. ಹೆಸರುಕಾಳು ಕ್ವಿಂಟಾಲ್‌ಗೆ 300 ರೂ ಏರಿಕೆ ಮಾಡಲು ತೀರ್ಮಾನಿಸಲಾಗಿದೆ. ತೊಗರಿ ಮೇಲಿನ ಬೆಂಬಲ ಬೆಲೆ ಕ್ವಿಂಟಾಲ್‌ಗೆ 300 ರೂ, ಹೆಸರುಕಾಳಿಗೆ 300 ರೂ. ರಾಗಿ ಬೆಂಬಲ ಬೆಲೆ 201 ರೂ. ಶೇಂಗಾ 300 ರೂ, ಹತ್ತಿ ಬೆಂಬಲ ಬೆಲೆ 354 ರೂ ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ.

ಗಣಪತಿ ಸಚ್ಚಿದಾನಂದ ಶ್ರೀಗಳ ಕೋಟಿ ಜಪ, ಲಕ್ಷಕ್ಕೂ ಹೆಚ್ಚು ಮಹಾಲಕ್ಷ್ಮಿಮಂತ್ರ ರಾಜ್ಯದ ಶ್ರೇಯೋಭಿವೃದ್ಧಿಗೆ ಪೂರಕ: ಸಿಎಂ


ಗಣಪತಿ ಆಶ್ರಮಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಗೌರವಿಸಿ, ಆಶೀರ್ವಾದ ಪಡೆದರು.


ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಬುಧವಾರ ಆಶ್ರಮದಲ್ಲಿ ಲೋಕ ಕಲ್ಯಾಣಕ್ಕಾಗಿ ಒಂದು ಕೋಟಿ ದತ್ತ ಯಜ್ಞ ಮತ್ತು ಲಕ್ಷ ಶ್ರೀ ಸೂಕ್ತ ಹೋಮ ನೆರವೇರಿಸಿದರು. ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಹಾಗೂ ಇತರ ಪುರೋಹಿತರು ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಂಡರು. ಮತ್ತೊಂದು ಚಿತ್ರದಲ್ಲಿ ನೂರಾರು ಭಕ್ತರು ಯಜ್ಞದಲ್ಲಿ ಪಾಲ್ಗೊಂಡಿರುವುದು.

ಮೈಸೂರು, ಜೂ. 8(ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠದಲ್ಲಿ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಲೋಕಕಲ್ಯಾಣಕ್ಕಾಗಿ 1 ಕೋಟಿ ಜಪ, 1 ಲಕ್ಷಕ್ಕೂ ಹೆಚ್ಚು ಮಹಾಲಕ್ಷ್ಮೀ ಮಂತ್ರ ಜಪ ನಡೆಸಿದ್ದು, ರಾಜ್ಯದ ಅಭಿವೃದ್ಧಿಗೆ ಪೂರಕವಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಇತ್ತೀಚೆಗೆ ದತ್ತಪೀಠದಲ್ಲಿ ನಡೆದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ಜನ್ಮ ದಿನಾಚರಣೆಗೆ ಮುಖ್ಯಮಂತ್ರಿಗಳು ಬರಬೇಕಿತ್ತು. ಆದರೆ ಕಾರಣಾಂತರದಿಂದ ಬರಲಾಗಿರಲಿಲ್ಲ. ಹಾಗಾಗಿ ಬುಧವಾರ ಆಶ್ರಮಕ್ಕೆ ಭೇಟಿ ನೀಡಿದ್ದ ಅವರು ಶ್ರೀಗಳಿಂದ ಆಶೀರ್ವಚನ ಸ್ವೀಕರಿಸಿ, ಬಳಿಕ ಮಾತನಾಡಿದರು. ಲೋಕಕಲ್ಯಾಣಕ್ಕಾಗಿ, ಶ್ರೀಗಳು ಕೈಗೊಂಡಿರುವ ಯಜ್ಞ, ಯಾಗಾದಿ, ಮಂತ್ರ, ಜಪಗಳು ನಮ್ಮ ರಾಜ್ಯದ ಅಭಿವೃದ್ಧಿಯಲ್ಲಿ ಉತ್ತಮ ಪರಿಣಾಮ ಬೀರುತ್ತವೆ ಎಂಬುದು ವೈಯಕ್ತಿಕವಾಗಿ ನನಗೆ ನಂಬಿಕೆ ಇದೆ ಎಂದು ಹೇಳಿದರು.

ದೇವರಲ್ಲಿ ಅಪಾರ ಭಕ್ತಿ ಹೊಂದಿರುವ ಶ್ರೀಗಳು ವಿವಿಧ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಅವರ ಶಕ್ತಿ ಮತ್ತು ಭಕ್ತಿ ಇಡೀ ರಾಜ್ಯದ ಜನರ ಒಳಿತಿಗೆ ನೆರವಾಗಲಿದೆ ಎಂದು ಆಶಿಸಿದರು.

ತಾವೂ ಕೂಡ ಭಗವಾನ್ ದತ್ತಾತ್ರೇಯನ ಭಕ್ತ ಎಂದು ಬಹಿರಂಗಪಡಿಸಿದ ಅವರು, ಭಕ್ತಿ ಎಂದರೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸದೆ ಬೇಷರತ್ತಾಗಿ ದೇವರಲ್ಲಿ ಪ್ರೀತಿ ಕಾಣುವುದು. ನಾವು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದೇವರನ್ನು ಪ್ರಾರ್ಥಿಸಬೇಕು. ಏಕೆಂದರೆ ನಮಗೆ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಭಗವಂತ ತಿಳಿಸಿರುತ್ತಾನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ಸತ್ಯವೇ ಜೀವನ, ಸತ್ಯವೇ ಪ್ರಾಣ. ಮನುಷ್ಯ ಹೆಚ್ಚಿನ ಪಾಪ ಮಾಡಿ ಅಧೋಗತಿಗೆ ಹೋಗುತ್ತಾನೆ. ಹಾಗಾಗಿ ದತ್ತನ ಅವತಾರವಾಗುತ್ತದೆ. ದತ್ತಾತ್ರೇಯನಿಗೆ ಮೂರು ತಲೆಗಳಿವೆ. ಇದು ಸೃಷ್ಟಿ, ಸಂರಕ್ಷಣೆ ಮತ್ತು ವಿನಾಶದ ಮೂರು ವಿಭಿನ್ನ ಅಂಶಗಳನ್ನು ಸೂಚಿಸುತ್ತದೆ. ಎಲ್ಲಾ ಅವತಾರಗಳಲ್ಲಿ ಅತೀ ಶ್ರೇಷ್ಠ ಅವತಾರವೇ ದತ್ತಾತ್ರೇಯನ ಅವತಾರ ಎಂದರು. ದತ್ತ ಪೀಠದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಸಂಸದ ಪ್ರತಾಪ್‌ಸಿಂಹ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೇಯರ್ ಸುನಂದಾ ಪಾಲನೇತ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಇನ್ನಿತರರು ಉಪಸ್ಥಿತರಿದ್ದರು.









ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕರಾದ ಎಸ್.ಎ.ರಾಮದಾಸ್, ಬಿ.ಹರ್ಷವರ್ಧನ್ ಹಾಗೂ ಇತರರನ್ನು ಕಾಣಬಹುದು.

ದಕ್ಷಿಣ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಚುನಾವಣೆ

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡಗೆ ವಿಶ್ರಾಂತ ಕುಲಪತಿಗಳ ಬಳಗ ಬೆಂಬಲ

ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಪದವೀಧರ ಮತದಾರರಲ್ಲಿ ಕೋರಿಕೆ

ಮೈಸೂರು,ಜೂ.8(ಪಿಎಂ)– ದಕ್ಷಿಣ ಪದವೀಧರರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಬೆಂಬಲ ಸೂಚಿಸಿರುವ ವಿಶ್ರಾಂತ ಕುಲಪತಿಗಳ ಬಳಗವು, ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವಂತೆ ಪದವೀಧರ ಮತದಾರರಲ್ಲಿ ಮನವಿ ಮಾಡಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿಯೂ ಆದ ಮೈಸೂರು ವಿವಿ ಪಿಎಂಇ ಬೋರ್ಡ್ ಸದಸ್ಯ ಡಾ.ಕೆ.ಮಹದೇವ್ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಸಿದ ವಿಶ್ರಾಂತ ಕುಲಪತಿಗಳ ಬಳಗದವರು ತಮ್ಮ ಬೆಂಬಲ ವ್ಯಕ್ತಪಡಿಸಿದರು.

ಡಾ.ಕೆ.ಮಹದೇವ್ ಮಾತನಾಡಿ, ಜಿ.ಮಾದೇಗೌಡ ಅವರನ್ನು ಮಂಡ್ಯದ ಗಾಂಧಿ ಎಂದೇ ಕರೆಯಲಾಗಿದೆ. ಅವರು ಕೆಎಂ ದೊಡ್ಡಿ ಎಂಬ ಗ್ರಾಮೀಣ ಪ್ರದೇಶವನ್ನು ಭಾರತೀನಗರ ಎಂಬ ಹೆಸರಿನಲ್ಲಿ ಅಭಿವೃದ್ಧಿಪಡಿಸಿದವರು. ಶಾಸಕರು, ಸಚಿವರು, ಸಂಸದರೂ ಆಗಿ ಅವರ ಕೊಡುಗೆ ರಾಜ್ಯಕ್ಕೆ ಅಪಾರವಾಗಿದೆ. ಇವರ ಪುತ್ರ ಮಧು ಜಿ.ಮಾದೇಗೌಡ ತಂದೆ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಅವರಿಗೆ ಮತದಾರರು ಬೆಂಬಲ ನೀಡಬೇಕು ಎಂದು ಕೋರಿದರು.

ಹಾಸನದ ಹಲವು ಮಂದಿ ಜೆಡಿಎಸ್‌ನವರು ಮಾದೇಗೌಡರ ಪುತ್ರ ಮಧು ಅವರಿಗೆ ತಮ್ಮ ಬೆಂಬಲ ಇರುವುದಾಗಿ ನನ್ನೊಂದಿಗೆ ಹೇಳಿಕೊಂಡಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಮಧು ಅವರಿಗೆ ಹೆಚ್ಚಿನ ಬೆಂಬಲ ವ್ಯಕ್ತವಾಗುತ್ತಿದೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಮಾತನಾಡಿ, ನಾವೆಲ್ಲಾ ವಿಶ್ರಾಂತ ಕುಲಪತಿಗಳು, ಮಧು ಅವರಿಗೆ ರಾಜಕೀಯ ದೃಷ್ಟಿಕೋನದಿಂದ ಬೆಂಬಲ ನೀಡುತ್ತಿಲ್ಲ. ಕಲುಷಿತ ರಾಜಕೀಯ ವ್ಯವಸ್ಥೆಯಲ್ಲಿ ಉತ್ತಮರು ಬರಬೇಕೆಂಬ ಹಿನ್ನೆಲೆಯಲ್ಲಿ ಬೆಂಬಲ ನೀಡುತ್ತಿದ್ದೇವೆ. ಅವರಿಗೆ ಎಲ್ಲಾ ಪದವೀಧರರು ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ವಿವಿಧ ವಿವಿಗಳ ವಿಶ್ರಾಂತ ಕುಲಪತಿಗಳು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಬೆಂಬಲ ಸೂಚಿಸಿದರು.

ಸರ್ಕಾರದಿಂದ ನಿರುದ್ಯೋಗಿ ಪದವೀಧರರಿಗೆ ಭ್ರಮನಿರಸನ

"ಶಿಕ್ಷಣ ಕ್ಷೇತ್ರದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಿ, ಎನ್‌ಪಿಎಸ್ ಅನ್ನು ರದ್ದುಗೊಳಿಸಿ, ಹಳೇ ಪಿಂಚಣಿ ಯೋಜನೆ ಜಾರಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆಂಬ ಮೋದಿಯವರ ಭರವಸೆ ಹುಸಿಯಾಗಿದೆ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳಿಂದ ನಿರುದ್ಯೋಗಿ ಪದವೀಧರರಿಗೆ ಭ್ರಮನಿರಸನ ಉಂಟಾಗಿದೆ.

–ಮಧು ಜಿ.ಮಾದೇಗೌಡ

ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಡಾ.ಎನ್.ಎಸ್.ರಾಮೇಗೌಡ ಮಾತನಾಡಿ, ಜಿ.ಮಾದೇಗೌಡ ಅವರ ಸಂಸ್ಥೆಯಲ್ಲಿ ಪ್ರಾಂಶುಪಾಲನಾಗಿ ಕೆಲಸ ಮಾಡಿರುವ ನಾನು, ಅವರ ಮೇರು ವ್ಯಕ್ತಿತ್ವವನ್ನು ನೇರವಾಗಿ ಕಂಡಿದ್ದೇನೆ. ತಂದೆ ದಾರಿಯಲ್ಲೇ ಸಾಗುತ್ತಿರುವ ಮಧು ಅವರಂತಹ ಉತ್ತಮರು ರಾಜಕೀಯ ಕ್ಷೇತ್ರದಲ್ಲಿ ಯಶಸ್ವಿಯಾಗಿ ಮುನ್ನಡೆಯಬೇಕು. ಇದರಿಂದ ಸಮಾಜಕ್ಕೆ ಒಳ್ಳೆಯದಾಗಲಿದ್ದು, ಇದೇ ಕಾರಣಕ್ಕೆ ವಿಶ್ರಾಂತ ಕುಲಪತಿಗಳ ಬಳಗ ಅವರಿಗೆ ಬೆಂಬಲ ನೀಡುತ್ತಿದೆ ಎಂದು ತಿಳಿಸಿದರು.

ಗುಲ್ಬರ್ಗ ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಆರ್.ನಿರಂಜನ ಮಾತನಾಡಿ, ಮಧು ಅವರು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಕಳೆದ 20 ವರ್ಷಗಳಿಂದ ವಿವಿಗಳಲ್ಲಿ ಬೋಧಕರ ಹುದ್ದೆಗಳು ಖಾಲಿ ಉಳಿದಿದ್ದು, ಅವುಗಳಿಗೆ ನೇಮಕಾತಿ ಮಾಡದೇ ಅತಿಥಿ ಉಪನ್ಯಾಸಕರಿಂದ ಬೋಧನೆ ಮಾಡಿಸಲಾಗುತ್ತಿದೆ. ಹಾಗಾಗಿ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಕೆಲಸ ಮಾಡಲು ಮಧು ಅವರು ಬದ್ಧತೆ ಹೊಂದಿದ್ದಾರೆ. ಶಿಕ್ಷಣ ಕ್ಷೇತ್ರ ಸದೃಢಗೊಳಿಸುವ ಶಕ್ತಿ ಅವರಿಗಿದೆ ಎಂದು ಹೇಳಿದರು.

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಶೇಖರ್ ಮಾತನಾಡಿ, ನಮಗೆ ಪಕ್ಷ ಮುಖ್ಯವಲ್ಲ, ವ್ಯಕ್ತಿ ಮುಖ್ಯವಾಗಿದ್ದಾರೆ. ಮಧು ಅವರನ್ನು ಬಹಳ ವರ್ಷದಿಂದ ಬಲ್ಲವಳಾಗಿದ್ದು, ಅವರು ಶೈಕ್ಷಣಿಕ ಮತ್ತು ಪ್ರಾಮಾಣಿಕತೆಯ ಹಿನ್ನೆಲೆ ಹೊಂದಿದ್ದಾರೆ. ಇವರು ಗೆದ್ದರೆ ಪದವೀಧರರ ನಿರೀಕ್ಷೆಗಳು ಈಡೇರಲಿವೆ ಎಂದರು. ಮಧು ಜಿ.ಮಾದೇಗೌಡ, ಮೈಸೂರು ವಿವಿ ಜೈವಿಕ ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಪ್ರೊ.ಶೇಖರ್ ಶೆಟ್ಟಿ ಮತ್ತಿತರರು ಹಾಜರಿದ್ದರು.

ಮೈಸೂರು ಶಕ್ತಿಪೀಠ ತೊರೆಯಲು ಗಣಪತಿ ಸಚ್ಚಿದಾನಂದ ಶ್ರೀಗಳ ಇಂಗಿತ

ಪೀಠ ತೊರೆಯದಂತೆ ಸಿಎಂ ಮನವಿ



ಮೈಸೂರು, ಜೂ. 8–ಇತ್ತೀಚೆಗೆ 80 ವರ್ಷದ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿಕೊಂಡ ನಂತರ ತಾವು ಶಕ್ತಿಪೀಠ ತೊರೆಯುವ ಇಂಗಿತವನ್ನು ಗಣಪತಿ ಸಚ್ಚಿದಾನಂದ ಸ್ವಾಮೀಜಿ ವ್ಯಕ್ತಪಡಿಸಿದ್ದು, ಪೀಠ ತೊರೆಯದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಮನವಿ ಮಾಡಿದರು.

ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಬುಧವಾರ ಮುಖ್ಯಮಂತ್ರಿಗಳು ಭೇಟಿ ನೀಡಿದಾಗ ಶ್ರೀಗಳು, ತಾವು 80 ವರ್ಷ ಪೂರೈಸಿದ್ದು, ದೊಡ್ಡ ಧಾರ್ಮಿಕ ಕ್ಷೇತ್ರವಾಗಿ ಬೆಳೆದಿರುವ ಮೈಸೂರಿನ ಶಕ್ತಿಪೀಠವನ್ನು ತೊರೆಯಲು ಬಯಸಿರುವುದಾಗಿ ತಿಳಿಸಿದರು. ಆದರೆ ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೂ ಮೈಸೂರು ಶಕ್ತಿಪೀಠ ತೊರೆಯಬಾರದೆಂದು ಶ್ರೀಗಳಿಗೆ ಮನವಿ ಮಾಡಿದಾಗ ಅದಕ್ಕೆ ಸ್ಪಂದಿಸಿದ ಶ್ರೀಗಳು ಈ ಬಗ್ಗೆ ಆಲೋಚನೆ ಮಾಡುವುದಾಗಿ ತಿಳಿಸಿದರು.

ಸಂಸದ ಸಿಂಹ ವಿರುದ್ಧ ಕಾಂಗ್ರೆಸ್ ಕಾನೂನು ವಿಭಾಗದ ಪ್ರತಿಭಟನೆ



ಮೈಸೂರು, ಜೂ.8(ಆರ್‌ಕೆಬಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಕೀಲ ವೃಂದವನ್ನು ನಿಂದಿಸಿ ಅವಮಾನಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಬಾಬು ಜಗಜೀವನರಾಂ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿ, ಸಂಸದ ಪ್ರತಾಪ್‌ಸಿಂಹ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿಯ ಜಿಲ್ಲಾ ಘಟಕದ ಆಶ್ರಯದಲ್ಲಿ ನಡೆದ ಪ್ರತಿಭಟನೆಯಲ್ಲಿ ಪ್ರತಾಪ್‌ಸಿಂಹ ವಿರುದ್ಧ ಘೋಷಣೆ ಕೂಗಿದರು.

ಸಿದ್ದರಾಮಯ್ಯ ರಾಜ್ಯ ಕಂಡ ಅಪರೂಪದ ವ್ಯಕ್ತಿತ್ವದ ಕಳಂಕರಹಿತ ರಾಜಕಾರಣಿ. ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಹಣಕಾಸು ಸಚಿವರಾಗಿ 13 ಜನಪರ ಬಜೆಟ್ ಮಂಡಿಸಿ, ರಾಜ್ಯದ ಆರ್ಥಿಕ ಸುಧಾರಣೆ, ಅಭಿವೃದ್ಧಿಗೆ ಭದ್ರ ಬುನಾದಿ ಹಾಕಿದವರು. ಸಮರ್ಥ ಆಡಳಿತಗಾರ. ತೆರಿಗೆ ವ್ಯವಸ್ಥೆಯ ಕುರಿತು ಕನಿಷ್ಠ ಜ್ಞಾನವೂ ಇಲ್ಲದ ಪ್ರತಾಪ್‌ಸಿಂಹ ಜನಪರ ನಾಯಕ ಸಿದ್ದರಾಮಯ್ಯರ ಬಗ್ಗೆ ಕೇವಲ ಪ್ರಚಾರದ ಗೀಳಿಗಾಗಿ ಅನಗತ್ಯ ಹೇಳಿಕೆ ನೀಡಿದ್ದಾರೆ. ಸಂವಿಧಾನದಡಿ ಸರ್ವಶ್ರೇಷ್ಠವಾದ ನ್ಯಾಯಾಂಗ ಕ್ಷೇತ್ರದಲ್ಲಿ ವಕೀಲ ಸಮುದಾಯದ ಬಗ್ಗೆ ಹಗುರವಾಗಿ ಮಾತನಾಡಿ, ನ್ಯಾಯಾಂಗ ವ್ಯವಸ್ಥೆಗೆ ಅಪಮಾನ ಮಾಡಿದ್ದಾರೆ. ಹೀಗಾಗಿ ಅವರು ಸಂಸದರಾಗಿ ಮುಂದುವರಿಯಲು ಯೋಗ್ಯರಲ್ಲ. ಕೂಡಲೇ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಸಿದ್ದರಾಮಯ್ಯ ಮತ್ತು ವಕೀಲ ಸಮುದಾಯದ ಮುಂದೆ ಬಹಿರಂಗ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್ ಇನ್ನಿತರರರು ಭಾಗವಹಿಸಿದ್ದರು.



ಸಮಾಜ ಸೇವಕರೂ ಆದ ಮೈಸೂರು 44ನೇ ವಾರ್ಡ್ ಮುಖಂಡರಾದ ಸುರೇಶ್ ಅವರ ಹುಟ್ಟುಹಬ್ಬಕ್ಕೆ ಕೆ.ಚಂದ್ರಶೇಖರ್, ವಕೀಲ ಸಿದ್ದರಾಜು, ಬೋಗಾದಿ 2ನೇ ಹಂತದ ದುರ್ಗಾ ಗ್ರೂಪ್‌ನ ಸ್ನೇಹಿತರು ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಪದವೀಧರರ ಶ್ರೇಯೋಭಿವೃದ್ಧಿಗೆ ಯಾವ ಯೋಜನೆ ರೂಪಿಸಿದ್ದೀರಿ?

ಬಹಿರಂಗ ಚರ್ಚೆಗೆ ಬರುವಂತೆ ಆಡಳಿತರೂಢ ಬಿಜೆಪಿ ಸೇರಿ ಕಾಂಗ್ರೆಸ್, ಜೆಡಿಎಸ್‌ಗೆ ಎಸ್‌ಡಿಪಿಐ ಆಹ್ವಾನ

ಮೈಸೂರು,ಜೂ.8(ಪಿಎಂ)– ಆಡಳಿತರೂಢ ಬಿಜೆಪಿ ಸೇರಿದಂತೆ ರಾಜ್ಯದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ಪದವೀಧರರ ಶ್ರೇಯೋಭಿವೃದ್ಧಿಗೆ ಯಾವುದಾದರೂ ಯೋಜನೆ ರೂಪಿಸಿವೆಯೇ? ಎಂದು ಪ್ರಶ್ನಿಸಿದ ಸೋಶಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಈ ಸಂಬಂಧ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.



ಅಬ್ದುಲ್ ಮಜೀದ್

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಷ್ಟು ವರ್ಷಗಳ ಕಾಲ ಪದವೀಧರರನ್ನು ಪ್ರತಿನಿಧಿಸಿದಂತಹ ಈ ಪಕ್ಷದವರು ಪರಿಷತ್‌ನಲ್ಲಿ ಪದವೀಧರರ ಪರವಾಗಿ ಪ್ರಾಮಾಣಿಕವಾಗಿ ದನಿ ಎತ್ತಿದ್ದಾರೆಯೇ? ಎಂಬುದನ್ನು ಪದವೀಧರ ಮತದಾರರು ಪ್ರಶ್ನೆ ಮಾಡಬೇಕು ಎಂದು ಅಬ್ದುಲ್ ಮಜೀದ್ ಒತ್ತಾಯಿಸಿದರು.

ಇವರು ತಮ್ಮ ಆಡಳಿತಾವಧಿಯಲ್ಲಿ ಉದ್ಯೋಗ ಖಾತ್ರಿಗಾಗಿ ಏನು ಮಾಡಿದ್ದಾರೆ? ನಿರುದ್ಯೋಗಿ ಪದವೀಧರರಿಗೆ ಮಾಸಿಕ ಗೌರವಧನ ಕೊಟ್ಟಿದ್ದಾರಾ? ಖಾಲಿಯಿರುವ ಲಕ್ಷಾಂತರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿದ್ದಾರಾ? ಎಂದು ಪ್ರಶ್ನಿಸಿದರು.

ಜನಸಾಮಾನ್ಯರ ರಾಜಕಾರಣ ಮತ್ತು ಸಂವಿಧಾನದ ಆಶಯ ಜಾರಿಯೇ ಎಸ್‌ಡಿಪಿಐ ಅಜೆಂಡಾವಾಗಿದೆ. ಜನತೆ ಬಗ್ಗೆ ನೈಜ ಕಾಳಜಿ ಹೊಂದಿರುವ ಪಕ್ಷ ನಮ್ಮದು. ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಗೆ ನಮ್ಮ ಎಸ್‌ಡಿಪಿಐ ಪಕ್ಷದ ಅಭ್ಯರ್ಥಿ ರಫತ್ ಉಲ್ಲಾ ಖಾನ್ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಜನತೆ ನಡುವೆ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕೆಂದು ಕೋರಿದರು. ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಪ್ರಸಾದ್, ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ, ರಾಜ್ಯ ಸಮಿತಿ ಸದಸ್ಯ ಅಮ್ಜದ್ ಖಾನ್, ಅಭ್ಯರ್ಥಿ ರಫತ್ ಉಲ್ಲಾ ಖಾನ್ ಗೋಷ್ಠಿಯಲ್ಲಿದ್ದರು.

ಅರಣ್ಯ ಆದಿವಾಸಿ ಸಮುದಾಯಗಳಿಗೆ ಶೇ.4ರಷ್ಟು ಒಳಮೀಸಲಾತಿಗೆ ಆಗ್ರಹ

ಮೈಸೂರು,ಜೂ.8(ಪಿಎಂ)–ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಳ ಮಾಡಿ, ಇದರಲ್ಲಿ ಶೇ.4ರಷ್ಟು ಒಳ ಮೀಸಲಾತಿಯನ್ನು ಅರಣ್ಯ ಆದಿವಾಸಿ ಸಮುದಾಯಗಳಿಗೆ ನೀಡಬೇಕೆಂದು ಬುಡಕಟ್ಟು (ಗಿರಿಜನ) ಸುರಕ್ಷಾ ವೇದಿಕೆ ಮತ್ತು ಬಿರ್ಸಾಮುಂಡ ಅಭಿವೃದ್ಧಿ ಸೇವಾ ಒಕ್ಕೂಟ ಆಗ್ರಹಿಸಿವೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ಮತ್ತು ಬಿರ್ಸಾಮುಂಡ ಅಭಿವೃದ್ಧಿ ಸೇವಾ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಿ.ಎಂ.ನಟರಾಜು, ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಸಮಿತಿ ವರದಿಯಂತೆ ಪರಿಶಿಷ್ಟ ಜಾತಿಗೆ ಶೇ.17ರಷ್ಟು ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು. ಅಂತೆಯೇ ಪರಿಶಿಷ್ಟ ಪಂಗಡಕ್ಕೆ ಹೆಚ್ಚಿಸುವ ಶೇ.7.5ರಷ್ಟು ಮೀಸಲಾತಿಯಲ್ಲಿ ಅರಣ್ಯ ಆದಿವಾಸಿ ಸಮುದಾಯಗಳಿಗೆ ಶೇ.4ರಷ್ಟು ಒಳಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು.

ಪ್ರೊ.ಮುಜಾಫರ್ ಅಸಾದಿ ಅವರ ವರದಿಯಂತೆ ಅರಣ್ಯ ಆದಿವಾಸಿಗಳಿಗೆ ಒಳಮೀಸಲಾತಿ ನೀಡಬೇಕೆಂದು ಈಗಾಗಲೇ ಹೈಕೋರ್ಟ್ ಕೂಡ ಸರ್ಕಾರಕ್ಕೆ ಸೂಚನೆ ನೀಡಿದೆ. ಆದ್ದರಿಂದ ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳು ಅರಣ್ಯ ಆದಿವಾಸಿ ಸಮುದಾಯಗಳಿಗೆ ಶೇ.4ರಷ್ಟು ಮೀಸಲಾತಿ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಕೋರಿದರು. ಬಿಕೆಎಸ್ ಸಂಘಟನೆ ನಿರ್ದೇಶಕ ಡಾ.ಗಣೇಶ್ ಕಲ್ಕರ್, ಹಾಡಿ ಅರಣ್ಯ ಹಕ್ಕು ಸಮಿತಿ ನಿರ್ದೇಶಕ ದೇವದಾಸ್ ಗೋಷ್ಠಿಯಲ್ಲಿದ್ದರು.

ಪರಿಷತ್ ಚುನಾವಣೆ: ಮೈಕ್ರೋ ಅಬ್ಸರ್‌ವರ್‌ಗಳಿಗೆ ತರಬೇತಿ





ಮೈಸೂರು, ಜೂ.8(ಆರ್‌ಕೆ)– ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ನಡೆಯಲಿರುವ ಚುನಾವಣಾ ಮೈಕ್ರೋ ಅಬ್ಸರ್‌ವರ್ (ಸೂಕ್ಷ್ಮ ಪರಿವೀಕ್ಷಕರು)ಗಳಿಗೆ ಜಿಪಂ ಕಚೇರಿ ಸಭಾಂಗಣದಲ್ಲಿ ಮತದಾನ ಮತ್ತು ಮತ ಎಣಿಕೆ ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಅಂಶಗಳ ಬಗ್ಗೆ ತರಬೇತಿ ನೀಡಲಾಯಿತು.

ಚುನಾವಣಾ ವೀಕ್ಷಕರಾದ ಹಿರಿಯ ಐಎಎಸ್ ಅಧಿಕಾರಿ ಪೊನ್ನುರಾಜ್ ಮಾರ್ಗದರ್ಶನದಂತೆ ಜಿಲ್ಲಾಧಿಕಾರಿ ಹಾಗೂ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಅವರು ಮೈಕ್ರೋ ಅಬ್ಸರ್‌ವರ್‌ಗಳ ಜವಾಬ್ದಾರಿಗಳ ಬಗ್ಗೆ ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ವಯ ಮಾಹಿತಿ ನೀಡಿದರು.

ಮತಗಟ್ಟೆಗೊಬ್ಬರಂತೆ ನೇಮಕವಾಗಿರುವ 66 ಹಾಗೂ ಹೆಚ್ಚುವರಿ ನಾಲ್ವರು ಸೇರಿದಂತೆ 70 ಮಂದಿ ಅಧಿಕಾರಿಗಳು ನ್ಯಾಯ ಸಮ್ಮತ ಹಾಗೂ ಮುಕ್ತ ಮತದಾನಕ್ಕೆ ಅನುವಾಗುವಂತೆ ಪರಿಸ್ಥಿತಿ ಅವಲೋಕಿಸಿ, ಆಗಿಂದಾಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ನಿಯಮಾನುಸಾರ ಪ್ರಕ್ರಿಯೆಯನ್ನು ಮತಗಟ್ಟೆ ಅಧಿಕಾರಿಗಳು ನಡೆಸುತ್ತಿದ್ದಾರೆಯೇ ಎಂಬುದನ್ನು ಗಮನಿಸಿ ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಡಾ.ಮಂಜುನಾಥಸ್ವಾಮಿ ತಿಳಿಸಿದರು.

ಮತದಾರರ ಪಟ್ಟಿಯಲ್ಲಿರುವವರು ಮತ ಚಲಾಯಿಸಲು ಬಂದಾಗ ಗುರುತಿನ ಬಗ್ಗೆ ಖಚಿತಪಡಿಸಿಕೊಳ್ಳಲು ಇರುವ ಮಾನದಂಡಗಳ ಬಗ್ಗೆಯೂ ನಿಗಾ ವಹಿಸಿ, ಒಂದು ವೇಳೆ ತಾಂತ್ರಿಕ ತೊಂದರೆ ಇದ್ದಲ್ಲಿ ನಿವಾರಿಸಲು ವೀಕ್ಷಕರ ನಿರ್ದೇಶನ, ಸಲಹೆ ಪಡೆಯಬಹುದು ಎಂದರು. ಪ್ರತಿಯೊಬ್ಬರಿಗೂ ನೀಡಿರುವ ಜವಾಬ್ದಾರಿಯಂತೆ ಚುನಾವಣಾ ಆಯೋಗದ ಮಾಹಿತಿಯನ್ನು ಸಂಪೂರ್ಣವಾಗಿ ಓದಿ ಅರ್ಥ ಮಾಡಿಕೊಂಡು ಯಾವುದೇ ಲೋಪವಾಗದಂತೆ ಮತದಾನ ನಡೆಯಲು ಸಹಕರಿಸಬೇಕು. ಆರಂಭದಲ್ಲಿ ವೀಕ್ಷಕರಾದ ಪೊನ್ನುರಾಜ್ ಅವರು ತರಬೇತಿಗೆ ಅಗತ್ಯವಿರುವ ಅಂಶಗಳನ್ನು ತಿಳಿಸಿ ನಿರ್ಗಮಿಸಿದರೆ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಉಪಸ್ಥಿತರಿದ್ದು, ಮೈಕ್ರೋ ಅಬ್ಸರ್‌ವರ್‌ಗಳಿಗೆ ಮಾರ್ಗದರ್ಶನ ಮಾಡಿದರು. ಮುಡಾ ವಿಶೇಷ ತಹಸೀಲ್ದಾರ್‌ಗಳಾದ ಗುರುಪ್ರಸಾದ್ ಮತ್ತು ನಿಶ್ಚಯ್ ಇನ್ನಿತರರು ಹಾಜರಿದ್ದರು.



ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರ ಮತ ಯಾಚಿಸಲಾಯಿತು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬಸವಣ್ಣ, ಯುವ ಜನತಾದಳದ ಅಧ್ಯಕ್ಷ ಗಂಗಾಧರಗೌಡ, ಮೈಮುಲ್ ಮಾಜಿ ಅಧ್ಯಕ್ಷ ಸಿದ್ದೇಗೌಡ, ಮುಖಂಡರಾದ ಮಾದೇಗೌಡ, ಕೆಂಪನಾಯಕ, ಮುತ್ತು, ಶಿವಕುಮಾರ್, ರಮ್ಮನಹಳ್ಳಿ ಶಿವು ಇನ್ನಿತರರು ಉಪಸ್ಥಿತರಿದ್ದರು.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿಮಾ ನೌಕರರು, ಅಧಿಕಾರಿಗಳ ಪ್ರತಿಭಟನೆ

ಜೂ.20ರಿಂದ ದೇಶಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರದ ಎಚ್ಚರಿಕೆ

ಮೈಸೂರು,ಜೂ.8(ಆರ್‌ಕೆಬಿ)–ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಮೈಸೂರು ಜಿಲ್ಲಾ ಸಾರ್ವಜನಿಕ ವಲಯ ಸಾಮಾನ್ಯ ವಿಮಾ ನೌಕರರ ಮತ್ತು ಅಧಿಕಾರಿಗಳ ಜಂಟಿ ಕ್ರಿಯಾ ಸಮಿತಿ ಆಶ್ರಯದಲ್ಲಿ ಬುಧವಾರ ಮೈಸೂರಿನ ಸರಸ್ವತಿಪುರಂನಲ್ಲಿರುವ ದಿ ಓರಿಯಂಟಲ್ ಇನ್ಶೂರೆನ್ಸ್ ಕಂಪನಿಯ ವಿಭಾಗೀಯ ಕಚೇರಿ ಮುಂಭಾಗ ಮತ ಪ್ರದರ್ಶನ ನಡೆಸಲಾಯಿತು.



ಮಧ್ಯಾಹ್ನ 12.30ರಿಂದ 1.30ರವರೆಗೆ ಕಚೇರಿಯಿಂದ ಹೊರ ಬಂದು ಮತಪ್ರದರ್ಶನ ನಡೆಸಿದ ಅವರು ಕೇಂದ್ರ ಸರ್ಕಾರ ಕೂಡಲೇ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಜೂ.20ರಂದು ದೇಶಾದ್ಯಂತ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಎಚ್ಚರಿಸಿದರು. ಸಾರ್ವಜನಿಕ ವಲಯ ಸಾಮಾನ್ಯ ವಿಮಾ ರಾಷ್ಟ್ರೀಕರಣ ಕಾಯ್ದೆ 2021 ಹಿಂಪಡೆಯಬೇಕು. ಸಾರ್ವಜನಿಕ ವಲಯ ಸಾಮಾನ್ಯ ವಿಮಾ ಸಂಸ್ಥೆಗಳಾದ ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ., ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ., ಓರಿಯಂಟಲ್ ಇನ್ಶೂರೆನ್ಸ್ ಕಂಪನಿಗಳನ್ನು ವಿಲೀನಗೊಳಿಸಬೇಕು. 2017 ಆಗಸ್ಟ್‌ನಿಂದ ನನೆಗುದಿಗೆ ಬಿದ್ದಿರುವ ವೇತನ ಪರಿಷ್ಕರಣೆಯ ಮಾತುಗಳು ಕೂಡಲೇ ಆರಂಭಿಸಬೇಕು. ರಾಷ್ಟ್ರೀಯ ವೇತನ ಯೋಜನೆ (ಎನ್‌ಪಿಎಸ್) ಕೂಡಲೇ ಹಿಂಪಡೆಯಬೇಕು. ಕೌಟುಂಬಿಕ ಪಿಂಚಣಿಯನ್ನು ಶೇ.30ಕ್ಕೆ ಏರಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಜಂಟಿ ಕ್ರಿಯಾ ವೇದಿಕೆಯ ಮಹೇಶ್, ರವಿಕುಮಾರ್, ವಾಸುದೇವ್, ಗಣೇಶ್ ಶೆಣೈ, ಸೋಮಣ್ಣ, ಭಾರತಿ, ಸಂಚಾಲಕ ಎಸ್.ಬಿ.ಬಲರಾಂ, ಶ್ಯಾಮಲಾಂಬಿಕಾ ಭಾಗವಹಿಸಿದ್ದರು.

ಇಂದು ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜೂ.8–ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಜೂ.9ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ನಡೆಸಲಾಗುತ್ತದೆ. ಕ್ಯಾನ್ಸರ್ ರೋಗದ ಲಕ್ಷಣವಿರುವವರು ಶಿಬಿರದಲ್ಲಿ ಪಾಲ್ಗೊಳ್ಳಬಹುದಾಗಿದ್ದು, ವಿವರಗಳಿಗಾಗಿ ದೂ. 0821-4259259ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕ ಪ್ರಜಾ ರಕ್ಷಣಾ ಸಮಿತಿಗೆ ನೇಮಕ

ಮೈಸೂರು, ಜೂ.8– ಕರ್ನಾಟಕ ಪ್ರಜಾ ರಕ್ಷಣಾ ಸಮಿತಿ ಮೈಸೂರು ಜಿಲ್ಲಾ ಕಾರ್ಯಾಧ್ಯಕ್ಷರನ್ನಾಗಿ ಎಂ.ಮಲ್ಲೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಯನ್ನಾಗಿ ದ್ಯಾವಪ್ಪ ಆಲನಹಳ್ಳಿ ಅವರನ್ನು ನೇಮಕ ಮಾಡಲಾಗಿದೆ.

ನಿಧನ



ಎಂ.ಜಿ.ಶ್ರೀಕಂಠ

ಮೈಸೂರು, ಜೂ. 8– ಮೈಸೂರು ಜಿಲ್ಲೆ ಸರಗೂರು ತಾಲೂಕು ಬಿಡುಗಲು ಗ್ರಾಮದ ಕಮಲಮ್ಮ ಮತ್ತು ಗಂಗಾಧರಪ್ಪನವರ ಮಗನಾದ ಎಂ.ಜಿ.ಶ್ರೀಕಂಠ ಅವರು ಮಂಗಳವಾರ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಬುಧವಾರ ಮಧ್ಯಾಹ್ನ ಬಿಡುಗಲು ಗ್ರಾಮದಲ್ಲಿ ಅಂತ್ಯಸಂಸ್ಕಾರ ನೆರವೇರಿತು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಸಹೋದರ, ಸಹೋದರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರು ಪ್ರಗತಿಪರ ಕೃಷಿಕರಾಗಿದ್ದರು.

ಶ್ರೀಕಂಠಾರಾಧ್ಯ



ಮೈಸೂರಿನ ಅರವಿಂದನಗರ 20ನೇ ಕ್ರಾಸ್ ನಿವಾಸಿ ಶ್ರೀಕಂಠಾರಾಧ್ಯ (83) ಅವರು ಮಂಗಳವಾರ ನಿಧನರಾದರು. ಮೃತರು ಪತ್ನಿ ಸುಂದರಮ್ಮ, ಪುತ್ರರಾದ ಪತ್ರಕರ್ತ ಹೆಚ್.ಎಸ್.ದಿನೇಶ್‌ಕುಮಾರ್, ಹೆಚ್.ಎಸ್.ಉಮೇಶ್, ಪುತ್ರಿ ಪುಷ್ಪಾ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ಮಂಗಳವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾ ಪರಂಪರೆ–ಮಾಲಿಕೆ, ಲೇಖನ ಪ್ರಸ್ತುತಿ– ಡಾ. ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಸಿ.ವಿಶ್ವನಾಥ್ ಮತ್ತು ಸಂಗೀತಾ ವಿಶ್ವನಾಥ್ ಮತ್ತು ಎಸ್. ಸಂಗೀತಾ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ", 10.00 ಎಂ.ಜಿ.ಶ್ರೀಧರ್–ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 11.15 ಯೋಗದತ್ತ ಜಗತ್ತು–ವಿಶೇಷ ಸರಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ–ಕೆ.ಎಲ್.ಯತಿರಾಜ್, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಅಂತಾ ರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮ "ಎಲ್ಲರಿಗಾಗಿ ಯೋಗ", 3.00 ರಾಗಲಹರಿ–ವರ್ಷದ ಸಂಭ್ರಮ, ಪ್ರಸ್ತುತಿ–ಜಿ. ಪುಷ್ಪಲತಾ, 4.00 ಹಳ್ಳಿ ಹಾಡು–ಭಾಗವಹಿಸುವವರು ಮಾದಿಗಹಳ್ಳಿಯ ಚಿಕ್ಕತಾಯಮ್ಮ ಮತ್ತು ತಂಡ, 4.30ರಸಮಂಜರಿ–ಸಂಸ್ಕೃತ ಶಿಕ್ಷಣ, ಮಾತನಾಡುತ್ತಾರೆ ವಿದ್ವಾನ್ ಹೇರಂಭ ಆರ್.ಭಟ್, 6.50 ಕೃಷಿರಂಗ–ಕಿಸಾನ್‌ವಾಣಿ, ಕೃಷಿ ಬೀಜೋತ್ಪಾದನೆಯಲ್ಲಿ ಆರ್ಥಿಕ ಅಭಿವೃದ್ಧಿ ಕುರಿತು ಕಾಳಪ್ಪ ಅವರೊಡನೆ ಮಾತುಕತೆ, 9.00 ಯುವವಾಣಿ–ಚಿತ್ರಚಿತ್ತಾರ, ಪ್ರಸ್ತುತಿ–ಮೈಸೂರಿನ ಮಹಾರಾಣಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ರಾವಣಿ ಜಿ, 9.30 ಕನ್ನಡ ಭಾರತಿ 10.00 ನಾಟಕ 10.30 ಸವಿನೆನಪು

ಇಂದಿನ ಪಂಚಾಂಗ

9.06.2022 ಗುರುವಾರ, ಮಳೆ ನಕ್ಷತ್ರ : ಮೃಗಶಿರ 08.06.2022 ರಿಂದ 21.06.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ
ತಿಥಿ: ದಶಮಿ, ನಕ್ಷತ್ರ : ಹಸ್ತ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 80ನೇ ಜಯಂತ್ಯುತ್ಸವ, ಬೆಳಗ್ಗೆ 9.30 ರಿಂದ ಬ್ರಹ್ಮ ರಥೋತ್ಸವ, ಸಂಜೆ ಡೋಲೋತ್ಸವ, ಶಯನೋತ್ಸವ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ವಿ.ವಿ. ಮೊಹಲ್ಲಾ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 80ನೇ ಜನ್ಮ ದಿನೋತ್ಸವ, ಲಕ್ಷ ಶ್ರೀಸೂಕ್ತ ಮಹಾಯಾಗ ಮತ್ತು ಕೋಟಿ ದತ್ತ ಹೋಮ, ಶ್ರೀ ದತ್ತ ವೆಂಕಟೇಶ್ವರ ಕ್ಷೇತ್ರದ 23ನೇ ಬ್ರಹ್ಮೋತ್ಸವ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಊಟಿ ರಸ್ತೆ.

■ **ದಿ ಆರ್ಗನೈಜೇಷನ್ ಫಾರ್ ದ ಡೆವಲಪ್‌ಮೆಂಟ್ ಆಫ್ ಪೀಪಲ್ (ಒಡಿಪಿ), ಭೂಮಿ ಡೆವಲಪ್‌ಮೆಂಟ್ ಫೌಂಡೇಷನ್:** ವಿಶ್ವ ಪರಿಸರ ದಿನಾಚರಣೆ–2022, "ಇರುವುದೊಂದೇ ಭೂಮಿ–ಸಂರಕ್ಷಣೆಯಲ್ಲಿ ರೈತರು", ಅಧ್ಯಕ್ಷತೆ: ಧರ್ಮಾಧ್ಯಕ್ಷ ಡಾ.ಕೆ.ಆಂಟನಿ ವಿಲಿಯಂ, ಉದ್ಘಾಟನೆ: ಕೃಷಿ ಉಪ ನಿರ್ದೇಶಕ ಡಾ. ಜಿ.ಹೆಚ್.ಯೋಗೇಶ್, ಮುಖ್ಯ ಅತಿಥಿಗಳು: ಸ್ವಾಮಿ ಅಲ್ಫ್ರೆಡ್ ಮೆಂಡೋನ್ಸಾ, ಪಾಲಿಕೆ ಉಪಆಯುಕ್ತ ನಂಜುಂಡಯ್ಯ, ಡಾ. ಸಿ.ರಾಮಚಂದ್ರ, ಸ್ಥಳ: ಒಡಿಪಿ ಆವರಣ, ಬನ್ನಿಮಂಟಪ, ಬೆಳಗ್ಗೆ 11ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ:** ವಿಮಾನ ಗೋಪುರ ಮತ್ತು ರಾಜಗೋಪುರ ಮಹಾ ಕುಂಭಾಭಿಷೇಕ ಮಹೋತ್ಸವ, ಬೆಳಗ್ಗೆ 8 ರಿಂದ ಪುಣ್ಯಾಹವಾಚನ, ಪಂಚಗವ್ಯಾಸಾದನ ಪ್ರಧಾನ ಕಲಶಾರ್ಚನೆ, ಪ್ರತಿಷ್ಠಾಂಗ ಹೋಮ, ಕಲಾತತ್ವ ಹೋಮ, ನಾಡೀ ಸಂಧಾನ, ಪೂರ್ಣಾಹುತಿ ಕಲಶೋದ್ವಾಹನ ಪೂರ್ವಕ ಮಹಾಕುಂಭಾಭಿಷೇಕ, ಪಂಚಾಮೃತಾದಿ ದ್ರವ್ಯಾಭಿಷೇಕ, ಅರ್ಚನಾ, ಮಹಾನಿವೇದನ ಪೂರ್ವಕ ಮಹಾಮಂಗಳಾರತಿ, ರಾಜೋಪಚಾರ, ರಾಷ್ಟ್ರಾಶೀರ್ವಾದ ತೀರ್ಥಪ್ರಸಾದ ವಿನಿಯೋಗ, ಪ್ರತಿಷ್ಠಾಫಲ ಸ್ವೀಕಾರ, ಆಚಾರ್ಯಾದಿ ಋತ್ವಿಕ್ಪೂಜಾ, ಸಂಭಾವನಾ ಸಮರ್ಪಣ ಆಶೀರ್ವಾದ, ಸ್ಥಳ: ದೇವಸ್ಥಾನ, ವಿಶ್ವೇಶ್ವರನಗರ.

■ **ಪಿಆರ್‌ಕೆ ಮ್ಯೂಸಿಕ್ ಆರ್ಕೆಸ್ಟ್ರಾ :** ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಅವರ 76ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಡಾ. ಎಸ್.ಪಿ.ಬಿ. ಸಂಭ್ರಮ ಸಂಗೀತ ಸಂಜೆ, ಮುಖ್ಯ ಅತಿಥಿಗಳು : ಪರ್ವಿನ್ ರಘುಬೀರ್ ಸಿಂಗ್, ಡಾ. ವೈ.ಡಿ. ರಾಜಣ್ಣ, ಡಾ. ಕೆ. ರಘುರಾಂ ವಾಜಪೇಯಿ, ಉದಯಕುಮಾರ್, ಆರ್. ಮಹದೇವ್, ಸ್ಥಳ: ಟೌನ್‌ಹಾಲ್ ಸಭಾಂಗಣ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಧರ್ಮಶಾಸ್ತ ಪೂಜಾ ಸಮಿತಿ :** 8ನೇ ಪ್ರತಿಷ್ಠಾಪನಾ ದಿನದ ಪ್ರಯುಕ್ತ ಆಚರಣೆಗಳು, ವಿವಿಧ ಪೂಜಾ ಕೈಂಕರ್ಯ, ಸ್ಥಳ: ಶ್ರೀ ಧರ್ಮಶಾಸ್ತ ಪೂಜಾ ಸಮಿತಿ, ಮೇಟಗಳ್ಳಿ.

■ **ವಿಶ್ವವಿದ್ಯಾನಿಲಯ ಸಂಜೆ ಕಾಲೇಜು:** ಡಾ.ಬಿ.ಆರ್.ಅಂಬೇಡ್ಕರ್‌ರವರ 131ನೇ ಜನ್ಮ ದಿನಾಚರಣೆ, ಉದ್ಘಾಟನೆ: ಪ್ರಾಧ್ಯಾಪಕ ಪ್ರೊ.ಸೋಮಶೇಖರ್, ಅಧ್ಯಕ್ಷತೆ: ಸಂಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ. ದೇವರಾಜೇಗೌಡ, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ವಿಜಯಕುಮಾರಿ ಕರಿಕಲ್, ಉಪಸ್ಥಿತರು: ಡಾ.ರಾಚಯ್ಯ, ಸ್ಥಳ: ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಸಂಜೆ 6ಕ್ಕೆ.

ಮೈಸೂರು ಮಿತ್ರ

ಕೋಮು ಗಲಭೆ ತಣ್ಣಗಾಗಲು, ಜಾತಿಯತೆ, ಅಸ್ಪೃಶ್ಯತೆ ತೊಡೆಯಲು

ದ್ರಾವಿಡ ಪರಿಕಲ್ಪನೆಯ ಪುನರೋತ್ಥಾನದಿಂದ ದೊಡ್ಡ ಶಕ್ತಿ

ದ್ರಾವಿಡರು, ಮುಸ್ಲಿಮರು, ಕ್ರೈಸ್ತರ ಸೌಹಾರ್ದ ಕೂಟ ಉದ್ಘಾಟಿಸಿ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಮತ



ಮೈಸೂರಿನ ಚಾಮುಂಡಿಬೆಟ್ಟದ ಪಾದದ ಚಿತಾಗಾರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸಹಪಂಕ್ತಿ ಭೋಜನದಲ್ಲಿ ಪಾಲ್ಗೊಂಡಿದ್ದ ಸಾಹಿತಿಗಳು ಹಾಗೂ ಮುಖಂಡರನ್ನು ಚಿತ್ರದಲ್ಲಿ ಕಾಣಬಹುದು.

> ಅಂಡಮಾನ್‌ಗೆ ಭೇಟಿ ನೀಡಿದ್ದೆ. ಅಲ್ಲಿ ಎಲ್ಲಾ ಜಾತಿ ಧರ್ಮದವರು ಇದ್ದಾರೆ. ಅಲ್ಲಿ ಅವರು ಜಾತಿ-ಧರ್ಮ ಪರಿಗಣಿಸದೇ ಯಾರನ್ನು ಬೇಕಾದರೂ ವಿವಾಹವಾಗುವುದು ರೂಢಿಯಲ್ಲಿದೆ. ಇತ್ತೀಚೆಗೆ ಕೆಜಿಎಫ್‌ಗೆ ಹೋಗಿದ್ದಾಗ ಹಿಂದೂ, ಕ್ರೈಸ್ತ, ಮುಸಲ್ಮಾನ ಸಮುದಾಯದ ಸ್ಮಶಾನಗಳು ಪ್ರತ್ಯೇಕವಾಗಿದ್ದರೂ ಒಂದೇ ಕಡೆ ಇರುವುದನ್ನು ನೋಡಿದೆ. ಈ ಎರಡೂ ಸಾಮರಸ್ಯದ ಸಂಕೇತಗಳಿಗೆ ಬ್ರಿಟಿಷರು ಕಾರಣ. ಅವರು ಅನೇಕ ಒಳ್ಳೆಯ ಕೆಲಸಗಳನ್ನೂ ಮಾಡಿ ಹೋಗಿದ್ದಾರೆ.
>
> -ಅರವಿಂದ ಮಾಲಗತ್ತಿ

ಮೈಸೂರು,ಜೂ.8(ಪಿಎಂ)- ದ್ರಾವಿಡ ಭಾಷೆ ಮತ್ತು ಜನಾಂಗ ಇಂದು ಒಂದಾದರೆ ದೇಶದಲ್ಲಿ ನಡೆಯುತ್ತಿರುವ ಜಾತಿ-ಕೋಮು ಗಲಭೆಗಳು ತಣ್ಣಗಾಗಲಿವೆ. ಜಾತೀಯತೆ, ಅಸ್ಪೃಶ್ಯತೆ ತೊಡೆಯಲು ದ್ರಾವಿಡ ಪರಿಕಲ್ಪನೆಯ ಪುನರೋತ್ಥಾನವು ದೊಡ್ಡ ಶಕ್ತಿ ಕೊಡಬಲ್ಲದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷರೂ ಆದ ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟರು.

ಮೈಸೂರಿನ ಚಾಮುಂಡಿಬೆಟ್ಟದ ಪಾದದ ಅನಿಲ ಚಿತಾಗಾರ ಮತ್ತು ಸುಡುವ ಸ್ಮಶಾನದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಅವರ ಜನ್ಮದಿನದ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಸಾಮರಸ್ಯಕ್ಕಾಗಿ ದ್ರಾವಿಡರು, ಮುಸ್ಲಿಮರು ಹಾಗೂ ಕ್ರೈಸ್ತರ ಸೌಹಾರ್ದ ಕೂಟ ಮತ್ತು ಸಹಪಂಕ್ತಿ ಭೋಜನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಯರಿಗೆ ಅಭದ್ರತೆ ಕಾಡುವ ಹಿನ್ನೆಲೆಯಲ್ಲಿ ಕೋಮು ಗಲಭೆ ಸೃಷ್ಟಿಸುತ್ತಾರೆ ಎಂಬುದನ್ನು ಇತಿಹಾಸ ಹೇಳುತ್ತದೆ. ದ್ರಾವಿಡರು ಈ ನೆಲದ ಮೂಲನಿವಾಸಿಗಳು ಎಂಬ ಜನಪ್ರಿಯ ವಾದವಿದೆ. ಅಲ್ಲದೆ, ಅನೇಕ ವಾದಗಳು ಆರ್ಯರು ಮತ್ತು ದ್ರಾವಿಡರಿಗೆ ಸಂಬಂಧಿಸಿದಂತೆ ಇವೆ. ದ್ರಾವಿಡರು ಈ ನೆಲದ ಮೂಲನಿವಾಸಿಗಳೆಂದು ಮೊದಲು ವಿಲಿಯಮ್ ಜೋನ್ಸ್ ಪ್ರತಿಪಾದಿಸಿದ. ಬಳಿಕ ಮ್ಯಾಕ್ಸ್ ಮುಲ್ಲರ್ ಅದನ್ನು ವಿಸ್ತರಿಸಿದ ಎಂದು ಹೇಳಲಾಗಿದೆ. ದ್ರಾವಿಡರನ್ನು ಯುದ್ಧದಲ್ಲಿ ಸೋಲಿಸಿ ದಕ್ಷಿಣಕ್ಕೆ ಓಡುವಂತೆ ಮಾಡಿದರು. ಹೀಗಾಗಿ ದಕ್ಷಿಣದಲ್ಲಿ ದ್ರಾವಿಡರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎನ್ನುವ ಮತ್ತೊಂದು ವಾದವಿದೆ. ಆದರೆ ಯುದ್ಧದಲ್ಲಿ ಸೋತು ಓಡಿದರು ಎಂಬುದನ್ನು ಡಾ.ಅಂಬೇಡ್ಕರ್ ಒಪ್ಪುವುದಿಲ್ಲ ಎಂದು ತಿಳಿಸಿದರು.

'ಎಲ್ಲರೂ ಇಲ್ಲಿಯವರೇ' ಎಂದು ಸಾವರ್ಕರ್ ವಾದ ಮಂಡಿಸಿದ್ದಾರೆ. ಎಲ್ಲರೂ ವಲಸಿಗರೇ ಎನ್ನುವ ವಾದವೂ ಇದೆ. ದ್ರಾವಿಡರು ಬಹಳ ಶ್ರೀಮಂತರು ಮತ್ತು ಜ್ಞಾನವಂತರು. ಅವರದು ಶ್ರೀಮಂತ ಸಂಸ್ಕೃತಿ ಎಂಬ ಮತ್ತೊಂದು ವಾದವಿದೆ. ಆರ್ಯರು, ದ್ರಾವಿಡರ ಡಿಎನ್‌ಎ ಪರಿಶೀಲಿಸಿದರೆ ಎಲ್ಲರದ್ದೂ ಒಂದೇ ಇದೆ ಎಂದು ಇತ್ತೀಚಿಗೆ ಸುಬ್ರಹ್ಮಣಿಯನ್‌ಸ್ವಾಮಿ ಎಂದು ಹೇಳಿದ್ದಾರೆ ಎಂದರು.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಮಾತನಾಡಿ, ಇದು ಸ್ಮಶಾನವಲ್ಲ, ರುದ್ರಭೂಮಿ. ಇದು ಶಿವನ ಆವಾಸಸ್ಥಾನ. ಈ ಸಮಾವೇಶ ಸಾಮಾಜಿಕ ಪರಿವರ್ತನೆಯ ದೊಡ್ಡ ಹೆಜ್ಜೆ. ಇಂತಹ ಸಮಾವೇಶಗಳು ಎಲ್ಲೆಡೆ ನಡೆದು, ಮಾನವೀಯತೆ ತಳಹದಿ ಮೇಲೆ ಸಮಾಜ ಕಟ್ಟಬೇಕಿದೆ ಎಂದು ಹೇಳಿದರು. ಪ್ರಗತಿಪರ ಚಿಂತಕ ಪ್ರೊ.ಮಹೇಶ್ ಚಂದ್ರಗುರು ಮಾತನಾಡಿ, ಹಿಂದುತ್ವದ ದಬ್ಬಾಳಿಕೆಗೆ ಸಿಲುಕಿದವರ ಪರವಾಗಿ ನಾವು ದನಿ ಎತ್ತಬೇಕು. ವೇದಪೂರ್ವ ಕಾಲದಲ್ಲಿ ಇಲ್ಲಿ ಮಹಿಳೆಯರು ನಾಯಕರು, ಮಾತೆಯರಾಗಿ ಉನ್ನತ ಸ್ಥಾನಮಾನ ಹೊಂದಿದ್ದರು. ಆಗ ವೃತ್ತಿಗಳಿದ್ದವೇ ಹೊರತು ಜಾತಿಗಳು ಇರಲಿಲ್ಲ. ಇಂತಹ ಸಮಾಜದಲ್ಲಿ ಬೇಧ ಹುಟ್ಟು ಹಾಕಿದವರು ಹಿಂದೂತ್ವ ವಾದಿಗಳು. ಬ್ರಾಹ್ಮಣಶಾಹಿ ವಿರುದ್ಧ ಮಾತ್ರವೇ ನಮ್ಮ ಹೋರಾಟವೇ ಹೊರತು ಬ್ರಾಹ್ಮಣರ ವಿರುದ್ಧವಲ್ಲ ಎಂದು ತಿಳಿಸಿದರು. ಬಳಿಕ ಸಹಪಂಕ್ತಿ ಭೋಜನಾ ನಡೆಯಿತು. ಮುಸ್ಲಿಂ ಧರ್ಮಗುರು ಹರ್ಷದ್ ಮೌಲಾನ, ಮೈಸೂರು ಧರ್ಮ ಕ್ಷೇತ್ರದ ಕೋಶಾಧಿಕಾರಿ ಫಾದರ್ ಜೇಮ್ಸ್ ಡೋಮಿನಿಕ್, ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಕಾಂಗ್ರೆಸ್ ಮುಖಂಡ ಕೆ.ಮರೀಗೌಡ, ಮಾಜಿ ಮೇಯರ್ ಪುರುಷೋತ್ತಮ್, ಮುಸ್ಲಿಂ ಫೆಡರೇಷನ್‌ನ ಎಂ.ಎಫ್.ಕಲೀಂ, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಕೆ.ಎಸ್.ಶಿವರಾಮು ಮತ್ತಿತರರು ಹಾಜರಿದ್ದರು.

ಜಯ ಸಾಧಿಸುವ ಸಂಪೂರ್ಣ ವಿಶ್ವಾಸ: ಹೆಚ್.ಕೆ.ರಾಮು

ಮೈಸೂರು, ಜೂ.8(ಎಂಕೆ)- ಶಿಕ್ಷಕರು, ಉಪನ್ಯಾಸಕರು, ಸರ್ಕಾರಿ ನೌಕರರು, ನಿರುದ್ಯೋಗಿ ಪದವೀಧರರು, ಅಸಕ್ತ ಮಹಿಳೆಯರ ಪರವಾಗಿ ಕೆಲಸ ಮಾಡುವ ಹಂಬಲದಿಂದ ದಕ್ಷಿಣ ಪದವೀಧರ ಕ್ಷೇತ್ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ಪ್ರಜ್ಞಾವಂತ ಮತದಾರರ ಬೆಂಬಲದಿಂದ ಜಯಗಳಿಸುವ ಸಂಪೂರ್ಣ ಭರವಸೆ ಇದೆ ಎಂದು ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ವಿಶ್ವಾಸ ವ್ಯಕ್ತಪಡಿಸಿದರು.

ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಜೂ.13ರಂದು ನಡೆಯುವ ಚುನಾವಣೆ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ'ನೊಂದಿಗೆ ತಮ್ಮ ಗೆಲುವಿನ ಲೆಕ್ಕಾಚಾರ, ಚುನಾವಣಾ ಪ್ರಚಾರ ಹಾಗೂ ಮತದಾರರ ಬೆಂಬಲ ಕುರಿತು ಪ್ರತಿಕ್ರಿಯಿಸಿದ ಅವರು, ದಕ್ಷಿಣ ಪದವೀಧರ ಕ್ಷೇತ್ರದ ನಾಲ್ಕು ಜಿಲ್ಲೆಗಳಲ್ಲಿಯೂ ಜೆಡಿಎಸ್‌ಗೆ ಭಾರೀ ಬೆಂಬಲವಿದೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡ, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಹೆಚ್.ಡಿ.ರೇವಣ್ಣ, ಸಾ.ರಾ.ಮಹೇಶ್, ಶಾಸಕರಾದ ಸಿ.ಎಸ್.ಪುಟ್ಟರಾಜು, ಕೆ.ಮಹದೇವ್, ಅಶ್ವಿನ್‌ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಸಂಸದ ಪ್ರಜ್ವಲ್ ರೇವಣ್ಣ ಸೇರಿದಂತೆ ಪಕ್ಷದ ಹಿರಿಯ ನಾಯಕರ ಮಾರ್ಗದರ್ಶನ, ಮುಖಂಡರ ಹಾಗೂ ಕಾರ್ಯಕರ್ತರ ಪೂರ್ಣ ಸಹಕಾರವಿದೆ. ಈಗಾಗಲೇ ನಾಲ್ಕು ಜಿಲ್ಲೆಗಳಲ್ಲಿಯೂ ಪ್ರಚಾರ ನಿರಂತರವಾಗಿ ನಡೆಯುತ್ತಿದ್ದು, ಬಹುತೇಕ ಮತದಾರರನ್ನು ಖುದ್ದು ಭೇಟಿ ಮಾಡಿ ಮತಯಾಚನೆ ಮಾಡಿದ್ದೇವೆ. ಎಲ್ಲೆಡೆ ಸಕಾರಾತ್ಮಕ ಸ್ಪಂದನೆ ದೊರೆತಿದೆ ಎಂದರು.



> **ಮರಿತಿಬ್ಬೇಗೌಡರು ಜೆಡಿಎಸ್ ಪರ ಇದ್ದಾರೆ..!**
>
> ಜೆಡಿಎಸ್‌ನಲ್ಲಿದ್ದವರಿಗೆ ಮೊದಲು ಪಕ್ಷ ಎಂಬುದನ್ನು ಮೊದಲಿನಿಂದಲೂ ನೋಡಿಕೊಂಡು ಬಂದಿದ್ದೇನೆ. ಮರಿತಿಬ್ಬೇಗೌಡರು ಕಾಂಗ್ರೆಸ್ ಪರ ಪ್ರಚಾರ ಮಾಡುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ಅವರು ಇಂದಿಗೂ ಜೆಡಿಎಸ್ ಪರವಿದ್ದು, ನನಗೆ ಮತ ನೀಡಲಿದ್ದಾರೆ.
>
> - ಹೆಚ್.ಕೆ.ರಾಮು, ಜೆಡಿಎಸ್ ಅಭ್ಯರ್ಥಿ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ನಾಲ್ಕು ಬಾರಿ ಆಯ್ಕೆಯಾಗಿದ್ದೇನೆ. ರಾಜ್ಯ ಉಪಾಧ್ಯಕ್ಷನಾಗಿ, ಅಧ್ಯಕನಾಗಿ ಹಾಗೂ ಗೌರವಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಸರ್ಕಾರಿ ನೌಕರರಿಗೆ 5 ಮತ್ತು 6ನೇ ವೇತನವನ್ನು ಕೊಡಿಸುವಲ್ಲಿ ಹೋರಾಟ ಮಾಡಿದ್ದು, ಸುಮಾರು ಒಂದೂವರೆ ಲಕ್ಷ ಮಂದಿ ನೌಕರರನ್ನು ಸೇರಿಸಿ ಬೃಹತ್ ಸಮ್ಮೇಳನ ಮಾಡುವ ಮೂಲಕ ಶೇ.28 ರಷ್ಟು ಸಂಬಳ ಹೆಚ್ಚಳಕ್ಕೆ ಶ್ರಮಿಸಿದ್ದೇನೆ. ಕೊಡಗಿನಲ್ಲಾದ ಪ್ರವಾಹಕ್ಕೆ ಸಂಬಂಧಿಸಿದಂತೆ ನೆರೆ ಸಂತ್ರಸ್ತರಿಗೆ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಂಬಳ ಕೊಡಿಸುವಲ್ಲಿ ಶ್ರಮವಹಿಸಿ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

7ನೇ ವೇತನ ಆಯೋಗ ಜಾರಿಗೆ ತರುವುದು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪದವಿ ಪಡೆದರೂ ಉದ್ಯೋಗವಿಲ್ಲದೆ ಇರುವವರಿಗೆ ಸ್ಟೇ ಫಂಡ್ ಕೊಡಿಸುವುದು. ಶಿಕ್ಷಕರು, ಉಪನ್ಯಾಸಕರು, ಸರ್ಕಾರಿ ನೌಕರರು, ನಿರುದ್ಯೋಗಿಗಳು ಹಾಗೂ ಪದವೀಧರ ಸಮಸ್ಯೆಗಳನ್ನು ಬಗೆಹರಿಸುವುದು ಸೇರಿದಂತೆ ಹತ್ತು-ಹಲವು ಯೋಜನೆಗಳನ್ನು ರೂಪಿಸಿಕೊಂಡಿದ್ದೇನೆ. ಜೆಡಿಎಸ್ ಭದ್ರಕೋಟೆಯಾಗಿರುವ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ನನ್ನ ಗೆಲುವು ನಿಶ್ಚಿತ ಎಂದರು.


ಬ್ಯೂಟಿಷಿಯನ್ ಮನೆಯಲ್ಲಿ 2.16 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಕೆ.ಆರ್.ನಗರ, ಜೂ.8- ಬ್ಯೂಟಿಷಿಯನ್‌ವೊಬ್ಬರ ಮನೆ ಬಾಗಿಲು ಮುರಿದು ಚಿನ್ನಾಭರಣ ದೋಚಿರುವ ಘಟನೆ ಕೆ.ಆರ್.ನಗರ ಟೌನ್‌ನ ಬನ್ನಿಮಂಟಪ ಬಡಾವಣೆಯಲ್ಲಿ ನಡೆದಿದೆ. ಇಲ್ಲಿನ ಸಿ.ಎಂ. ರಸ್ತೆಯಲ್ಲಿ ಬ್ಯೂಟಿ ಪಾರ್ಲರ್ ನಡೆಸುತ್ತಿರುವ ಸೌಮ್ಯ(31) ಅವರು ಜೂ.5 ರಂದು ಮಧ್ಯಾಹ್ನ ಮಕ್ಕಳೊಂದಿಗೆ ಇಲವಾಲದಲ್ಲಿ ರುವ ತಮ್ಮ ಅಕ್ಕನ ಮನೆಗೆ ತೆರಳಿದ್ದು, ಜೂ.6ರಂದು ಬೆಳಗ್ಗೆ ಪಕ್ಕದ ಮನೆಯವರು ಕರೆ ಮಾಡಿ ಇವರ ಮನೆ ಬಾಗಿಲು ಮುರಿದಿರುವ ಬಗ್ಗೆ ತಿಳಿಸಿದ್ದಾರೆ.

ಬೀಗ ಮುರಿದು ಒಳ ನುಗ್ಗಿರುವ ಖದೀಮರು 12 ಗ್ರಾಂನ ಚೈನು, 10 ಗ್ರಾಂನ ಓಲೆ-ಜುಮುಕಿ, 10 ಗ್ರಾಂನ ಹ್ಯಾಂಗಿಂಗ್, 12 ಗ್ರಾಂನ 4 ಉಂಗುರ, 4 ಗ್ರಾಂನ ಓಲೆ, 2 ಗ್ರಾಂ ಜುಮುಕಿ ಸೇರಿದಂತೆ ಒಟ್ಟು 2.16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ಕೆ.ಆರ್. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿ ಸೋಲಿಸಲು ಕಾಂಗ್ರೆಸ್‌ಗೆ ಓಪನ್ ಆಫರ್

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲಿಸಲು ನಮಗೆ ಜೆಡಿಎಸ್ ಬೆಂಬಲಿಸಲಿ ಎಂದು ಕಾಂಗ್ರೆಸ್ ನಾಯಕರು ನೀಡು ತ್ತಿರುವ ಹೇಳಿಕೆಗೆ ಟಾಂಗ್ ನೀಡಿರುವ ಮಾಜಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಯಾವುದೇ ಕಾರಣಕ್ಕೂ ಅಭ್ಯರ್ಥಿ ಹಿಂಪಡೆಯಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಬೆಂಗಳೂರಿನಲ್ಲಿ ಈ ಕುರಿತು ಮಾತನಾಡಿರುವ ಹೆಚ್.ಡಿ ಕುಮಾರಸ್ವಾಮಿ, ಇವತ್ತಿನಿಂದಲೇ ಹಳೆಯದನ್ನು ಮರೆತು ಬಿಡುತ್ತೇನೆ. ಬಿಜೆಪಿ ಸೋಲಿಸಲು ಓಪನ್ ಆಫರ್ ಕೊಟ್ಟಿದ್ದೇನೆ. ವೈಷಮ್ಯ ಬಿಡ್ತೇನೆ. ಎಲ್ಲದಕ್ಕೂ ಸಿದ್ಧ. ನಾಳೆ ಮಧ್ಯಾಹ್ನ ಸರಿಯಾದ ತೀರ್ಮಾನ ಆಗುತ್ತೆ ಎಂದರು.



ಶಾಸಕರು ರೆಸಾರ್ಟ್‌ಗೆ ಶಿಫ್ಟ್?: ರಾಜ್ಯಸಭೆ ಚುನಾವಣೆ ರೋಚಕ ಘಟ್ಟಕ್ಕೆ ತಲುಪಿದೆ. ಇದೇ ತಿಂಗಳ ಜೂನ್ 10ರಂದು ರಾಜ್ಯಸಭಾ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅಡ್ಡ ಮತದಾನದ ಭೀತಿ ಎದುರಾಗಿದ್ದು, ಜೆಡಿಎಸ್ ಶಾಸಕರನ್ನು ರೆಸಾರ್ಟ್‌ಗೆ ಶಿಫ್ಟ್ ಮಾಡಲು ಸಿದ್ಧತೆ ನಡೆದಿದೆ. ಜೆಡಿಎಸ್‌ನ ಎಲ್ಲ ಶಾಸಕರನ್ನು ದೇವನಹಳ್ಳಿ ಬಳಿಯಿರುವ ಖಾಸಗಿ ರೆಸಾರ್ಟ್‌ಗೆ ಶಿಫ್ಟ್ ಮಾಡಲು ವರಿಷ್ಠರು ಚಿಂತನೆ ನಡೆಸಿದ್ದಾರೆ. ಇಂದು ರಾತ್ರಿ ಅಥವಾ ನಾಳೆ ಬೆಳಗ್ಗೆ ವೇಳೆಗೆ ಶಿಫ್ಟ್ ಮಾಡುವ ಸಾಧ್ಯತೆಯಿದೆ. ಈಗಾಗಲೇ ರೆಸಾರ್ಟ್‌ಗೆ ಬರಲು ಸೂಚನೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರ ಸೂಚನೆ ಮೇರೆಗೆ ಇಂದು ಮತ್ತು ನಾಳೆ ಎರಡು ದಿನ ರೆಸಾರ್ಟ್‌ನಲ್ಲೇ ಉಳಿಯಲಿದ್ದು, ರಾಜ್ಯಸಭೆ ಚುನಾವಣೆ ದಿನದಂದು ನೇರವಾಗಿ ಮತದಾನಕ್ಕೆ ಹಾಜರಾಗಲು ನಿರ್ಧರಿಸಲಾಗಿದೆ.

ಜೆಡಿಎಸ್ ಅಭ್ಯರ್ಥಿ ನಿವೃತ್ತಿಯೇ ಸಂಧಾನ

ಧಾರವಾಡ: ರಾಜ್ಯಸಭೆ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಜೊತೆ ಜೆಡಿಎಸ್ ಒಪ್ಪಂದ ಅಥವಾ ಹೊಂದಾಣಿಕೆ ಮಾಡಿಕೊಳ್ಳುವುದಾದರೆ ಜೆಡಿಎಸ್ ತನ್ನ ಅಭ್ಯರ್ಥಿ ಯನ್ನು ಕಣದಿಂದ ಹಿಂದೆ ಸರಿಸಿ ನಮ್ಮ ಅಭ್ಯರ್ಥಿಗೆ ಮತ ಹಾಕಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಅವರು ಕುಮಾರಸ್ವಾಮಿ ಅವರಿಗೆ ಪ್ರತ್ಯುತ್ತರ ನೀಡಿದರು. ಸಂಧಾನ ಮಾಡಿಕೊಳ್ಳುವಂತೆ ಹೆಚ್‌ಡಿಕೆ ಆಹ್ವಾನ ಮಾಡಿದ್ದಾರೆ ಎಂಬ ಸುದ್ದಿ ಇದೆ. ಜೆಡಿಎಸ್ ಅಭ್ಯರ್ಥಿಯನ್ನು ಕಣದಿಂದ ನಿವೃತ್ತಿ ಮಾಡುವುದೇ ಈಗ ಸಂಧಾನ. ಅವರು ನಮಗೆ ಮತ ಹಾಕಬೇಕು ಅದೇ ಸಂಧಾನ. ಈ ಹಿಂದೆ ದೇವೇಗೌಡರ ವಿರುದ್ಧ ನಾವು ಅಭ್ಯರ್ಥಿಯನ್ನು ಹಾಕಿರಲಿಲ್ಲ, ಅವರು ಈಗ ಯಾಕೆ ಅಭ್ಯರ್ಥಿಯನ್ನು ಹಾಕಿದ್ದಾರೆ. ಬಿಜೆಪಿಯನ್ನು ಸೋಲಿಸುವುದೇ ಗುರಿಯಾದರೆ ಜೆಡಿಎಸ್‌ನವರು ನಮಗೆ ಬೆಂಬಲ ಕೊಡಲಿ. ನಮ್ಮ ಪಕ್ಷಕ್ಕೆ ಹೈಕಮಾಂಡ್ ಇದೆ, ಅವರ ಪಕ್ಷಕ್ಕೆ ಇಲ್ಲ ಎಂದು ಧಾರವಾಡದಲ್ಲಿ ಸುದ್ದಿಗಾರರಿಗೆ ತಿಳಿಸಿದರು.



ನಮ್ಮ ಹೈಕಮಾಂಡ್ ಇರೋದು ದೆಹಲಿಯಲ್ಲಿ, ಅವರ ಹೈಕಮಾಂಡ್ ಇರೋದು ಪದ್ಮನಾಭನಗರದಲ್ಲಿ. ರಾಜ್ಯದ ಉಸ್ತುವಾರಿ ಹೇಳಿದಂತೆ ಎರಡನೇ ಅಭ್ಯರ್ಥಿ ಹಾಕಿದ್ದೇವೆ. ಈಗ ಏನೂ ಆಗೋದಿಲ್ಲ, ಏನೇ ಆಗೋದಿದ್ರೂ ಮತದಾನದ ದಿನವೇ ತೀರ್ಮಾನ ಆಗುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ವಿದ್ಯುತ್ ತಂತಿ ತಗುಲಿ ಹಸು ಸಾವು

ರಕ್ಷಿಸಲೆತ್ನಿಸಿದ ಮಾಲೀಕನಿಗೂ ಶಾಕ್

ಮೈಸೂರು,ಜೂ 8(ಜಿಎ)- ವಿದ್ಯುತ್ ತಂತಿ ತಗುಲಿ ಹಸುವೊಂದು ಸಾವನಪ್ಪಿದ್ದು, ಹಸುವನ್ನು ರಕ್ಷಿಸಲೆತ್ನಿಸಿದ ಮಾಲೀಕ ಕೂಡ ವಿದ್ಯುತ್ ಶಾಕ್‌ಗೊಳಗಾಗಿರುವ ಘಟನೆ ಮೈಸೂರಿನ ಸಾತಗಳ್ಳಿ ಗ್ರಾಮದಲ್ಲಿ ನಡೆದಿದೆ.



ಇಲ್ಲಿನ ನಿವಾಸಿ ಶಿವನಂಜಪ್ಪ ಅವರಿಗೆ ಸೇರಿದ 2 ವರ್ಷದ ಹಸು ಮೇಯಲು ಬಿಟ್ಟಿದ್ದಾಗ ಅದು ಮೇಯುತ್ತ ಪಕ್ಕದಲ್ಲಿದ್ದ ಬೀದಿ ದೀಪದ ಕಂಬಕ್ಕೆ ಆಸರೆಯಾಗಿ ಅಳವಡಿಸಿರುವ ತಂತಿ ಬಳಿ ತೆರಳಿತು. ಈ ವೇಳೆ ಹಸುವಿಗೆ ಅದರಿಂದ ವಿದ್ಯುತ್ ತಗುಲಿ ಹಸು ಒದ್ದಾಡಲೂ ಆರಂಭಿಸಿತು.

ಇದನ್ನು ಗಮನಿಸಿದ ಮಾಲೀಕ ಹಸು ಬಳಿ ತೆರಳಿ ಅದನ್ನು ಕಾಪಾಡಲು ಪ್ರಯತ್ನಿಸಿ ಅವರಿಗೂ ವಿದ್ಯುತ್ ಶಾಕ್ ಹೊಡೆದ ಪರಿಣಾಮ ಅವರು ದೂರ ಎಸೆಯಲ್ಪಟ್ಟರು.

ಈ ವಿಚಾರವನ್ನು ಕೆಇಬಿಗೆ ತಿಳಿಸಿದ ತಕ್ಷಣ ಬಂದ ಲೈನ್ ಮ್ಯಾನ್ ವಿದ್ಯುತ್ ಲೈನ್ ಆಫ್ ಮಾಡಿ ಮುಂದಾಗ ಬಹುದಾದ ಅನಾಹುತ ತಪ್ಪಿಸಿದರು. ಸ್ಥಳೀಯರು ತಿಳಿಸಿರುವಂತೆ ಈ ಘಟನೆಗೆ ಕೆಇಬಿ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ದೂರಿದರು ಹಾಗೂ ರೈತ ಶಿವನಂಜಪ್ಪ ಅವರಿಗೆ ಕೆಇಬಿಯಿಂದಲೇ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಚಿನ್ನದ ನೆಕ್ಲೇಸ್ ಕಳವು: ಸಂಬಂಧಿ ಮೇಲೆ ಅನುಮಾನ, ದೂರು ದಾಖಲು

ವಿರಾಜಪೇಟೆ, ಜೂ.8-ವಿರಾಜಪೇಟೆ ತಾಲೂಕು ನಂಗಲಾ ಗ್ರಾಮದ ಮನೆವೊಂದರಲ್ಲಿ 20 ಗ್ರಾಂ ತೂಕದ ಚಿನ್ನದ ನೆಕ್ಲೇಸ್ ಕಳುವಾಗಿದ್ದು, ಸಂಬಂಧಿಕರ ಮೇಲೆ ಅನುಮಾನ ವ್ಯಕ್ತಪಡಿಸಿ ಗೃಹಿಣಿಯೊಬ್ಬರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ನಂಗಲಾ ಗ್ರಾಮದ ಗೃಹಿಣಿ ಕೆ.ಬಿ.ಟಿನಿ ದೂರು ಸಲ್ಲಿಸಿದ್ದು, ಗ್ರಾಮದಲ್ಲಿ ಮೇ 15 ರಂದು ಬೇಡು ಹಬ್ಬ ನಡೆದಿದ್ದು, ಈ ಹಬ್ಬಕ್ಕಾಗಿ ತನ್ನ ತಾಯಿ ಕಮಲಾಕ್ಷಿ, ಅಣ್ಣ ದಿಲೀಪ್, ಅತ್ತಿಗೆ ಸಂಚಿತಾ, ಸಂಬಂಧಿಕರಾದ ಸಹನಾ, ಶನಿತ್ ಮತ್ತು ನೈಲಾ ಎಂಬುವರು ಬಂದಿದ್ದು, ಮೇ 18ರವರೆಗೆ ಸಂಜೆವರೆಗೆ ತಮ್ಮ ಮನೆಯಲ್ಲೇ ಇದ್ದರು. ಮೇ 22ರಂದು ಸಂಬಂಧಿಕರ ಮದುವೆಗೆ ಹೋಗಲು ಸೂಟ್‌ಕೇಸ್‌ನಲ್ಲಿಟ್ಟಿದ್ದ ಚಿನ್ನಾಭರಣ ನೋಡಿದಾಗ 20 ಗ್ರಾಂ ತೂಕದ ನೆಕ್ಲೇಸ್ ಕಳುವಾಗಿರುವುದು ಗೊತ್ತಾಗಿದೆ. ತಮ್ಮ ಮನೆಗೆ ಹಬ್ಬಕ್ಕಾಗಿ ಬಂದಿದ್ದ ನಂತರ ಮೇಲೆ ತಮಗೆ ಅನುಮಾನವಿದೆ ಎಂದು ಗೃಹಿಣಿ ನೀಡಿದ ದೂರಿನ ಮೇರೆಗೆ ಆಕೆಯ ತಾಯಿ ಸೇರಿದಂತೆ 6 ಮಂದಿ ವಿರುದ್ಧ ಭಾರತೀಯ ದಂಡ ಸಂಹಿತೆ 380ರಡಿ ಪ್ರಕರಣ ದಾಖಲಿಸಿಕೊಂಡಿರುವ ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಬಸವಮಾರ್ಗ ಫೌಂಡೇಶನ್ ಸಾಧನೆಗೆ ಧ್ರುವ ಶ್ಲಾಘನೆ



ಮೈಸೂರು, ಜೂ.8(ಎಂಕೆ)- ಕುಡಿತ(ಮದ್ಯಪಾನ) ದಿಂದ ಆರೋಗ್ಯದ ಮೇಲೆ ಭಾರೀ ದುಷ್ಪರಿಣಾಮ ಬೀರಲಿದ್ದು, ಕುಡಿತ ಚಟದಿಂದ ವಿಮುಕ್ತರಾಗುವಂತೆ ಮಾಜಿ ಸಂಸದ ಆರ್.ಧ್ರುವನಾರಾಯಣ ಕಿವಿ ಮಾತು ಹೇಳಿದರು.

ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಬಸವಮಾರ್ಗ ಫೌಂಡೇಶನ್‌ನಲ್ಲಿ ಆಯೋಜಿಸಿರುವ ಮದ್ಯವರ್ಜನ ಶಿಬಿರಕ್ಕೆ ಭೇಟಿ ನೀಡಿದ ಅವರು, ತಾವು ಕುಡಿತದಿಂದ ವಿಮುಕ್ತರಾಗಿ ಇತರರು ಕೂಡ ಕುಡಿತದಿಂದ ಬಿಟ್ಟು ಸನ್ಮಾರ್ಗ ದತ್ತ ನಡೆಯುವಂತೆ ಬಸವರಾಜು ಈ ಸಂಸ್ಥೆ ಸ್ಥಾಪಿಸಿ, ಮದ್ಯವರ್ಜನ ಶಿಬಿರ ನಡೆಸುವ ಮೂಲಕ ಸಮಾಜಕ್ಕೆ ಒಳಿತಾಗುವ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮನುಷ್ಯ ಜನ್ಮ ಬಹಳ ಶ್ರೇಷ್ಠ ಜನ್ಮವಾಗಿದೆ. ಪುನರ್ ಜನ್ಮ ಎನ್ನುವುದೆಲ್ಲಾ ಸುಳ್ಳು. ಶ್ರೇಷ್ಠ ಜನ್ಮ ಸಿಕ್ಕಾಗ ಅದರ ಸಾರ್ಥಕತೆ ಆಗಬೇಕು. ಈ ನಿಟ್ಟಿನಲ್ಲಿ ನಾವು ನಮ್ಮ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ. ಶಿಬಿರಾರ್ಥಿಗಳು ಕುಡಿತ ಬಿಟ್ಟು ಒಳ್ಳೆಯ ದಾರಿಯಲ್ಲಿ ಸಾಗಿ ತಮ್ಮ ಜೀವನವನ್ನು ಸುಖಕರವನ್ನಾಗಿಸಿಕೊಳ್ಳುವತ್ತಾ ಸಾಗಬೇಕು ಎಂದು ಸಲಹೆ ನೀಡಿದರು.

ಯುವಜನ ಕೈ ಜೋಡಿಸಿದರೆ ಪ್ಲಾಸ್ಟಿಕ್ ಮುಕ್ತ ಅಭಿಯಾನ ಯಶಸ್ವಿ

ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ವಿಶ್ವಾಸ



ಮೈಸೂರು, ಜೂ.8(ಎಂಕೆ)- ಪ್ಲಾಸ್ಟಿಕ್ ಮುಕ್ತ ಅಭಿಯಾನಕ್ಕೆ ಯುವಜನರು ಕೈ ಜೋಡಿಸಬೇಕು. ಯುವಶಕ್ತಿ ಮನಸ್ಸು ಮಾಡಿದರೆ ಈ ಕೆಲಸ ಸುಲಭ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ ಜಿ. ಹೇಮಂತಕುಮಾರ್ ಹೇಳಿದರು.

ಮೈಸೂರು ವಿವಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವತಿಯಿಂದ ಮಾನಸ ಗಂಗೋತ್ರಿ ಆವರಣದಲ್ಲಿ ಆಯೋಜಿಸಿದ್ದ 'ಪ್ಲಾಸ್ಟಿಕ್ ಮುಕ್ತ ಅಭಿಯಾನ'ಕ್ಕೆ ಗಿಡ ನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಪ್ಲಾಸ್ಟಿಕ್‌ನ ಬಳಕೆ ಮತ್ತು ಉತ್ಪಾದನೆಯಿಂದ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗುತ್ತಿದೆ. ಇದಕ್ಕೆ ಬದಲಾಗಿ ಪ್ಲಾಸ್ಟಿಕ್‌ಗೆ ಪರ್ಯಾಯ ವಸ್ತುಗಳನ್ನು ಬಳಸಬೇಕು ಮತ್ತು ಉತ್ಪಾದಿಸಬೇಕು. ವಿಶ್ವವಿದ್ಯಾನಿಲಯದ ಎಲ್ಲಾ ವಿದ್ಯಾರ್ಥಿಗಳು ಅಭಿಯಾನಕ್ಕೆ ಕೈಜೋಡಿಸಿ ಯಶಸ್ವಿಗೊಳಿಸಬೇಕು ಎಂದು ಹೇಳಿದರು.

ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಪ್ರತಿಭಟನೆಗಳು, ಆಂದೋಲನಗಳು ನಡೆಯುತ್ತಿದ್ದ ಸ್ಥಳದಲ್ಲಿ ಇಂತಹ ಒಂದು ಉತ್ತಮ ಕಾರ್ಯಕ್ರಮ ನಡೆಯುತ್ತಿರುವುದು ಆದರ್ಶನೀಯವಾದುದು. ಸಂಶೋಧನಾ ವಿದ್ಯಾರ್ಥಿಗಳು ಇಂತಹ ಕಾರ್ಯವನ್ನು ಕೈಗೊಂಡಿರುವುದು ಅತ್ಯಂತ ವಿಶೇಷ ಮತ್ತು ಉತ್ತಮ ಬೆಳವಣಿಗೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪರಿಸರ ಸಂರಕ್ಷಣಾ ಸಮಿತಿಯ ರಾಜ್ಯಾಧ್ಯಕ್ಷೆ ಭಾನು ಮೋಹನ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಗಪ್ಪಣ್ಣ, ಡಾ ಚೈತ್ರಾ ನಾರಾಯಣ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ. ವಿಜಯಕುಮಾರಿ ಕರಿಕಲ್, ಹಿಂದುಳಿದ ವರ್ಗಗಳ ಘಟಕದ ಸಂಯೋಜಕ ಪ್ರೊ.ಬಿ.ವಿ. ಸುರೇಶ್ ಕುಮಾರ್, ಸಂಶೋಧನಾ ವಿದ್ಯಾರ್ಥಿಗಳ ಸಂಘದ ಪವಿತ್ರ ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : "ಗುಂಡ, ನಿನಗೆ ಯಾವ ಪ್ರಾಣಿ ಇಷ್ಟ?"
ಗುಂಡ : "ನನಗೆ ಬೆಕ್ಕು ಎಂದರೆ ತುಂಬಾ ಇಷ್ಟ"
ಟೀಚರ್ : "ಯಾಕೆ?"
ಗುಂಡ : "ಬೆಕ್ಕು ಅಡ್ಡ ಬಂದರೆ ನಮ್ಮಜ್ಜಿ ನನ್ನ ಶಾಲೆಗೆ ಹೋಗ್ಬೇಡ ಅಂತಾರೆ ಅದಕ್ಕೆ!"

ಮೈಸೂರು ಮಿತ್ರ

ಗುರುವಾರ, 9 ಜೂನ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮನೆಯುವರ ಮನಸ್ಸು ಅರಿಯದೆ, ಮನೆಯ ಜವಾಬ್ದಾರಿಯನ್ನು ಹೊರದೆ, ಮನೆಯ ಯಜಮಾನ ಗೌರವ ಪಡೆಯಲಾರ. ಅಧಿಕಾರ ಚಲಾಯಿಸಿ ಯಜಮಾನನಾಗುವುದು ಸಾಧ್ಯವಿಲ್ಲ. –ಕೃಷ್ಣಮೂರ್ತಿ ಪುರಾಣಿಕ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಚಿಂತೆಯಿಲ್ಲದವನಿಗೆ ಸಂತೆಯಲ್ಲೂ ನಿದ್ದೆ

ನಿಮ್ಮ ಪತ್ರಗಳು

ಒಡೆದ ಒಳಚರಂಡಿ ಪೈಪ್ ಸರಿಪಡಿಸಿ



ಮಾನ್ಯರೆ,

ಮೈಸೂರಿನ ವಿ.ವಿ.ಮೊಹಲ್ಲಾದ 2ನೇ ಮುಖ್ಯರಸ್ತೆಯ (ಬಾಟಾ ಶೋರೂಂ ರಸ್ತೆ) ಕನ್ಸರ್‌ವೆನ್ಸಿ ಜಾಗದಲ್ಲಿ ಒಳಚರಂಡಿ ಪೈಪ್ ಒಡೆದುಹೋಗಿ ಹಲವಾರು ವರ್ಷಗಳೇ ಕಳೆದಿದೆ. ಇದರಿಂದ ಮಳೆ ಬಂದಾಗ ಇಲ್ಲಿನ ಸುತ್ತಮುತ್ತಲಿನ ಮನೆಗಳಿಗೆ ನೀರು ನುಗ್ಗಿ ತುಂಬಾ ತೊಂದರೆಯಾಗುತ್ತಿದೆ. ಇದರ ಬಗ್ಗೆ ಸಂಬಂಧಪಟ್ಟ ಮಹಾನಗರಪಾಲಿಕೆ ಸದಸ್ಯರಿಗೆ ದೂರು ನೀಡಿದಾಗ ಹೊಸ ಪೈಪ್‌ಲೈನ್ ಅಳವಡಿಸಲು 18 ಲಕ್ಷ ರೂ.ಗಳ ಟೆಂಡರ್ ಆಗಿದೆ. ಆದರೆ ಆ ಅನುದಾನದ ಹಣ ಇನ್ನೂ ಬಿಡುಗಡೆಯಾಗಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣೆ ಮುಗಿದು ಹತ್ತು ದಿನದ ನಂತರ ಹೊಸ ಪೈಪ್‌ಲೈನ್ ಅಳವಡಿಸುವ ಕಾರ್ಯ ಆರಂಭವಾಗಲಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದು ಕಳೆದ ಮೂರು ವರ್ಷಗಳ ಸಮಸ್ಯೆ. ಸುಮ್ಮನೆ ಏನಾದರೂ ಇಲ್ಲಸಲ್ಲದ ಕಾರಣ ಹೇಳಿ ಮುಂದೂಡುತ್ತಲೇ ಬರುತ್ತಿದ್ದಾರೆ. ಮೊನ್ನೆ ಜೋರಾಗಿ ಮಳೆ ಬಂದು ಮನೆಗಳಿಗೆ ನೀರು ನುಗ್ಗಿ ಅನಾಹುತವಾಗಿದೆ. ಮಳೆ ಬರುವ ಸೂಚನೆ ಕಂಡುಬಂದರೆ ರಾತ್ರಿ ವೇಳೆ ಸರಿಯಾಗಿ ನಿದ್ರೆಯೇ ಬರುವುದಿಲ್ಲ. ಆದ್ದರಿಂದ ಕಾರ್ಪೊರೇಷನ್ ಆಯುಕ್ತರು ಅನುದಾನದ ಹಣವನ್ನು ಬಿಡುಗಡೆ ಮಾಡಿ, ಈ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಚಳಚರಂಡಿ ಸಮಸ್ಯೆಯನ್ನು ಆದಷ್ಟು ಬೇಗ ಪರಿಹರಿಸಿಕೊಡುತ್ತಾರೆಂದು ಆಶಿಸೋಣವೇ?

–ಜೆ.ಪಿ.ಹರೀಶ್, ವಿ.ವಿ. ಮೊಹಲ್ಲಾ, ಮೈಸೂರು

ಮಳೆಯಿಂದ ನೊಂದ ಕುಟುಂಬಗಳಿಗೆ ಪರಿಹಾರ ನೀಡಿ

ಮಾನ್ಯರೆ,

ರಾಜ್ಯದಲ್ಲಿ ಎಡೆಬಿಡದೆ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಹಲವಾರು ಬಡಾವಣೆಗಳ ನೂರಾರು ಮನೆಗಳು ಜಲಾವೃತಗೊಂಡು ಶಿಥಿಲಗೊಂಡಿವೆ. ಮಳೆಯಿಂದ ರೈತರು ಬೆಳೆದ ಬೆಳೆ ನಾಶವಾಗಿದೆ. ಇದರಿಂದ ರೈತರು ಸಂಕಷ್ಟವನ್ನು ಎದುರಿಸುವಂತಾಗಿದೆ. ಅಲ್ಲದೆ ಬೆಲೆ ಏರಿಕೆ ಬಿಸಿಯಿಂದ ರೈತರು ಮತ್ತು ಜನಸಾಮಾನ್ಯರು ಜೀವನ ನಿರ್ವಹಣೆ ಮಾಡಲು ಹೆಣಗಾಡುವಂತಾಗಿದೆ. ಕೂಡಲೇ ಸರ್ಕಾರ ನೊಂದ ಕುಟುಂಬಗಳಿಗೆ ಪರಿಹಾರ ನೀಡಬೇಕೆಂದು ಮನವಿ.

–ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ರಸ್ತೆ ರಿಪೇರಿ ಮಾಡಿಸಿ, ಜೀವ ಉಳಿಸಿ

ಮಾನ್ಯರೆ,

ಮೈಸೂರಿನ ವಿದ್ಯಾರಣ್ಯಪುರಂ, ವಾರ್ಡ್ ನಂಬರ್ 61, ಕಂಸಾಳೆ ಮಹಾದೇವಯ್ಯ ವೃತ್ತದ ರಸ್ತೆ ಗುಂಡಿಮಯವಾಗಿದ್ದು, ವಾಹನಗಳ ಸಂಚಾರ ದುಸ್ತರವಾಗಿದೆ.



ಸುಮಾರು ಮೂರ್ನಾಲ್ಕು ತಿಂಗಳಿನಿಂದ ಈ ರಸ್ತೆಯಲ್ಲಿ ಇಲ್ಲಿ ಸಂಚರಿಸುವ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದುಕೊಂಡು, ಹಿಡಿಶಾಪ ಹಾಕುತ್ತಾ ಸಂಚರಿಸುತ್ತಿದ್ದಾರೆ. ಪ್ರತಿನಿತ್ಯ ವಾಹನ ಸವಾರರು ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ. ಯುಜಿಡಿ ಪೈಪ್‌ಲೈನ್‌ಗಾಗಿ ರಸ್ತೆಯನ್ನು ಅಗೆದು ಗುಂಡಿಯನ್ನು ಅರ್ಧಂಬರ್ಧ ಮುಚ್ಚಲಾಗಿದೆ. ಆಯತಪ್ಪಿ ಅನೇಕ ಜನರು ಬಿದ್ದ ಸಾಕಷ್ಟು ನಿದರ್ಶನಗಳಿವೆ. ದೂರದೃಷ್ಟಿ ಇಲ್ಲದ ಕಾಮಗಾರಿಗಳಿಂದಾಗಿ ಅನೇಕ ರಸ್ತೆಗಳು ಹಾಳಾಗಿವೆ. ಈ ವೃತ್ತದ ಎದುರಿಗೆ ರಾಮಕೃಷ್ಣ ಆಸ್ಪತ್ರೆ ಇದ್ದು, ರೋಗಿಗಳು ಬರಲು ತುಂಬಾ ತೊಂದರೆಯಾಗುತ್ತಿದೆ. ಸೆಂಟ್ ಮೇರಿಸ್ ಶಾಲೆ ಮಕ್ಕಳು ಸೇರಿದಂತೆ ಸಾಕಷ್ಟು ಜನರು ಸಂಚರಿಸುವುದರಿಂದ ಹಾಗೂ ಈ ವೃತ್ತವು ಅನೇಕ ರಸ್ತೆಗಳಿಗೆ ಸಂಪರ್ಕ ಕಲ್ಪಿಸುವುದರಿಂದ ವಾಹನಗಳ ಸಂಚಾರ ದಟ್ಟಣೆಯಾಗಿರುತ್ತದೆ. ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಮಳೆ ಬಂದರಂತು ರಸ್ತೆ ಗುಂಡಿಗಳು ನೀರು ತುಂಬಿ ಓಡಾಡುವುದೇ ಅಪಾಯಕಾರಿಯಾಗಿದೆ. ಜೂನ್ 21ಕ್ಕೆ ವಿಶ್ವ ಯೋಗ ದಿನದಂದು ಆಗಮಿಸುವ ಪ್ರಧಾನಿ ಮೋದಿಯವರಿಗೆ ರಸ್ತೆಯ ದುರವಸ್ಥೆಯ ದರ್ಶನವಂತು ಆಗುವುದಿದೆ. ಅಷ್ಟರೊಳಗೆ ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳಾಗಲಿ, ಪಾಲಿಕೆ ಅಧಿಕಾರಿಗಳಾಗಲಿ ಶೀಘ್ರವೇ ಸ್ಪಂದಿಸಿ ರಸ್ತೆಯನ್ನು ರಿಪೇರಿ ಮಾಡಿಸಿಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.

ಸೇವಾ ಶುಲ್ಕ ರದ್ದು ಸ್ವಾಗತಾರ್ಹ

ಮಾನ್ಯರೆ,

ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಆಹಾರದ ಬಿಲ್ ಜೊತೆಗೆ ಸೇವಾ ಶುಲ್ಕವನ್ನು ಮನಬಂದಂತೆ ವಸೂಲಿ ಮಾಡಲಾಗುತ್ತಿತ್ತು. ಇದರಿಂದ ಗ್ರಾಹಕರ ಹಕ್ಕಿನ ಉಲ್ಲಂಘನೆ ಕೂಡ ಆಗುತ್ತಿತ್ತು. ಆದ್ದರಿಂದ ಇದನ್ನು ತಡೆಯುವ ಸಲುವಾಗಿ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪಿಯೂಶ್ ಗೋಯಲ್ ಆಹಾರದ ಬಿಲ್ ನೊಂದಿಗೆ ಸೇವಾ ಶುಲ್ಕ ವಸೂಲಿ ಮಾಡಬಾರದು ಎಂದು ಸೂಚನೆ ನೀಡಿರುವುದು. ಜೊತೆಗೆ ಈ ಕುರಿತು ಹೊಸ ನಿಯಮ ಜಾರಿಗೆ ತರಲು ಮುಂದಾಗಿರುವುದು ಸ್ವಾಗತಾರ್ಹ. ಇದರಿಂದ ಗ್ರಾಹಕರ ಮೇಲಿನ ಹೊರೆ ಕಡಿಮೆಯಾಗಲಿದೆ. ಹೋಟೆಲ್, ರೆಸ್ಟೋರೆಂಟ್‌ನ ಸೇವೆಯಿಂದ ತೃಪ್ತಿಯಾಗಿ ಗ್ರಾಹಕರೆ ಟಿಪ್ಸ್ ರೂಪದಲ್ಲಿ ಹಣ ನೀಡಿದರೆ ಸ್ವೀಕರಿಸಲು ಅನುಮತಿ ನೀಡಿರುವುದು ಮಾಲೀಕರು ಗಮನಿಸಬೇಕು.

–ಚನ್ನಕೇಶವ ಜಿ, ಕೆ, ತರೀಕೆರೆ



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಸುಸ್ಥಿರ ಪರಿಸರ ನಿರ್ವಹಣೆ: ಮಹಿಳೆಯರ ಭಾಗವಹಿಸುವಿಕೆ ಅತಿ ಅಮೂಲ್ಯ

> "ಪರಿಸರ ಮತ್ತು ಮಹಿಳೆಯರ ನಡುವಣ ಸಂಬಂಧವನ್ನು ವಿಶ್ಲೇಷಿಸುವ ಈ ಬರೆವಣಿಗೆ ಒಂದು ಸಣ್ಣ ಪ್ರಯತ್ನವಷ್ಟೇ. ಅದಕ್ಕೆ ಇನ್ನು ಬಹು ಆಯಾಮಗಳಿವೆ. ಪರಿಸರ ಹಾನಿಯಾದಾಗ ಅದರ ದುಷ್ಪರಿಣಾಮವನ್ನು ಅತ್ಯಂತ ಗಂಭೀರವಾಗಿ ಎದುರಿಸುವವರು ಮಹಿಳೆಯರು. ಸುನಾಮಿಯೇ ಇರಬಹುದು, ಪ್ರವಾಹಗಳೇ ಇರಬಹುದು ಅಥವಾ ನಶಿಸುತ್ತಿರುವ ಪ್ರಾಕೃತಿಕ ಸಂಪನ್ಮೂಲಗಳೇ ಇರಬಹುದು– ಪರಿಸರಕ್ಕೆ ನಷ್ಟವಾದಾಗ ಮಹಿಳೆಯರ ಬದುಕು ದುಸ್ತರವಾಗುತ್ತದೆ. ಆದ್ದರಿಂದಲೇ ಸುಸ್ಥಿರ ಪರಿಸರ ನಿರ್ವಹಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತ್ಯಗತ್ಯ.

ಮಾನವ ಜೀವನದ ಗುಣಮಟ್ಟ ಹೆಚ್ಚಬೇಕಾದರೆ ಸುರಕ್ಷಿತ ಪರಿಸರ ಅತಿ ಮುಖ್ಯವಾದ ಅಗತ್ಯಗಳಲ್ಲಿ ಒಂದು. ಪ್ರಾಕೃತಿಕ ಸಂಪನ್ಮೂಲಗಳ ಸುಸ್ಥಿರ ರಕ್ಷಣೆ ಹಾಗೂ ನಿರ್ವಹಣೆಯಾದಾಗ ಮಾತ್ರ ಸಮಕಾಲೀನ ಸಮಾಜವಷ್ಟೇ ಅಲ್ಲ, ಭವಿಷ್ಯದ ತಲೆಮಾರುಗಳೂ ಪರಿಶುದ್ಧ ಪರಿಸರದಲ್ಲಿ ಬದುಕನ್ನು ಕಟ್ಟಿಕೊಳ್ಳುವ ಕನಸುಗಳನ್ನು ಕಾಣಬಹುದು. ಪರಿಸರವನ್ನು ಸುಸ್ಥಿರ ಎನಿಸುವ ರೀತಿಯಲ್ಲಿ ಬಳಸಿ–ಬೆಳೆಸಿ–ಉಳಿಸಬೇಕಾದರೆ ಮಹಿಳೆಯರ ಸಹಭಾಗಿತ್ವ ಅತ್ಯಗತ್ಯ ಏಕೆಂದರೆ ಮಹಿಳೆಯರು ತಮ್ಮ ಸುತ್ತಣ ಪರಿಸರವನ್ನು ಬಹುಕಾಲದಿಂದ ಜೀವನಾವಶ್ಯಕತೆಗಳನ್ನು ಪೂರೈಸಲು ಬಳಸಿಕೊಂಡು ಬರುತ್ತಿದ್ದಾರೆಯೇ ಹೊರತು, ಅದರ ಸತ್ವವನ್ನು ಹೀರಿ, ನೆಲದ ಸಾಮರ್ಥ್ಯವನ್ನು ಬರಿದು ಮಾಡಿ, ಮುಂದಿನ ಜನಾಂಗವನ್ನು ಹಸಿವು–ದಾರಿದ್ರ್ಯಗಳ ಕೂಪಕ್ಕೆ ತಳ್ಳುವ ಅಭ್ಯಾಸಗಳಿಂದ ಅವರು ದೂರವೇ ಇದ್ದಾರೆ. ಇದು ವಿಶೇಷವಾಗಿ ಆಹಾರ ಸಂಗ್ರಹಣೆ, ಪಶು ಸಂಗೋಪನೆ ಮತ್ತು ಕೃಷಿ ಆಧಾರಿತ ಸಮಾಜಗಳ ಮಹಿಳೆಯರಿಗೆ ಅನ್ವಯಿಸುತ್ತದೆ.

ಜಗತ್ತಿನಾದ್ಯಂತ ಮಹಿಳೆಯರು ನೆರೆಹೊರೆಯ ಪ್ರಾಕೃತಿಕ ಸಂಪನ್ಮೂಲಗಳು ಹಾಗೂ ಸಮುದಾಯಿಕ ಒಡೆತನಕ್ಕೆ ಒಳಪಟ್ಟ ಪ್ರಾಕೃತಿಕ ಸಂಪನ್ಮೂಲಗಳೆರಡನ್ನೂ ರಕ್ಷಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ್ದಾರೆ. ವಿಶ್ವದಾದ್ಯಂತ ಮಹಿಳೆಯರು ನೀರು, ಇಂಧನ ಮೂಲಗಳು, ಆಹಾರ, ಅರಣ್ಯ ಹಾಗೂ ಕೃಷಿ ಭೂಮಿಗಳನ್ನು ನಿರ್ವಹಿಸುತ್ತಲೇ ಬಂದಿದ್ದಾರೆ. ಇನ್ನೂ ಹೆಚ್ಚು ಅಭಿವೃದ್ಧಿ ಹೊಂದದ ಸಮಾಜಗಳಲ್ಲಿ ಮಹಿಳೆಯರು ಶೇಕಡಾ 60–80 ರಷ್ಟು ಆಹಾರವನ್ನು ಉತ್ಪಾದಿಸುವ ಕಾರ್ಯಗಳಲ್ಲಿ ತೊಡಗಿದ್ದಾರೆ. ಕೃಷಿ ಭೂಮಿಯಲ್ಲಿ ಆಹಾರ ಪದಾರ್ಥ ಬೆಳೆಯುವುದಲ್ಲದೆ, ಆ ಆಹಾರವನ್ನು ಸಂಸ್ಕರಿಸಿ, ಕುಟುಂಬ ನಿರ್ವಹಣೆಗಾಗಿ ಬಳಸಿ, ಅದನ್ನು ಸಂರಕ್ಷಿಸುವ ಕೆಲಸಗಳನ್ನು ಮಾಡುವವರು ಕೂಡ ಮಹಿಳೆಯರೇ. ಅವರ ಸಾಮಾನ್ಯ ಜ್ಞಾನ, ಜೀವನಾನುಭವಗಳು ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ಬಗೆಗಿನ ಕಾಳಜಿಗಳು ಪರಿಸರದ ಸಂರಕ್ಷಣೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿವೆ. ಆದರೂ ಪರಿಸರ ಸಂರಕ್ಷಣೆಯ ವಿಚಾರ ಬಂದಾಗ ಅವರ ಕೊಡುಗೆಗೆ ಬಹುತೇಕ ಸಂದರ್ಭಗಳಲ್ಲಿ ಸಲ್ಲಬೇಕಾದ ಮನ್ನಣೆ ದೊರೆಯುತ್ತಿಲ್ಲ ಎಂಬುದು ವಿಪರ್ಯಾಸ.

ಪ್ರಾಕೃತಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತ್ಯವಶ್ಯ, ಏಕೆಂದರೆ ಪರಿಸರ ಸಂಬಂಧಿ ನಿರ್ಧಾರಗಳಿಂದ ಅವರನ್ನು ದೂರವಿಡುವುದಾಗಲಿ, ಲಿಂಗ ಅಸೂಕ್ಷ್ಮ ಅಭಿವೃದ್ಧಿ ಕಾರ್ಯಕ್ರಮಗಳಿಂದ ಅವರ ಬದುಕಿನ ನೆಲೆಗಳ ಮೇಲೆ ಆಗುವ ನಕಾರಾತ್ಮಕ ಪರಿಣಾಮಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಲಿಂಗ ಅಸಮಾನತೆಯ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತದೆ ಎಂದು ಬೀಜಿಂಗ್‌ನ ಒಂದು ಸಂಸ್ಥೆ 1995ರಲ್ಲೇ ಸ್ಪಷ್ಟಪಡಿಸಿತ್ತು. ಪರಿಸರ ರಕ್ಷಣೆಯಲ್ಲಿ ಮಹಿಳಾ ದೃಷ್ಟಿಕೋನಕ್ಕೆ ನೀಡಬೇಕಾದ ಆದ್ಯತೆಯನ್ನು ಸಾಕಾರ ಮಾಡಲು ಮೂರು ಕಾರ್ಯಸೂಚಿಗಳನ್ನು ಈ ಸಂಸ್ಥೆ ಗುರುತಿಸಿತ್ತು. ಅವುಗಳೆಂದರೆ:


1. ಎಲ್ಲ ಮಟ್ಟಗಳಲ್ಲೂ ಪರಿಸರ ಸಂಬಂಧಿ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ಮಹಿಳೆಯರ ಭಾಗವಹಿಸುವಿಕೆ ಕಡ್ಡಾಯವಾಗಬೇಕು.
2. ಸುಸ್ಥಿರ ಅಭಿವೃದ್ಧಿಯ ನೀತಿಗಳು ಮತ್ತು ಕಾರ್ಯಕ್ರಮಗಳಲ್ಲಿ ಲಿಂಗಾಧಾರಿತ ಕಾಳಜಿಗಳನ್ನು ಅಂತರ್ಗತ ಮಾಡಬೇಕು.
3. ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಮಹಿಳೆಯರ ಮೇಲೆ ಪರಿಸರ ಸಂಬಂಧಿ ನೀತಿಗಳ ಪರಿಣಾಮವನ್ನು ಮೌಲ್ಯಮಾಪನ ಮಾಡಲು ಸಾಂಸ್ಥಿಕ ವ್ಯವಸ್ಥೆಗಳನ್ನು ಸ್ಥಾಪಿಸಬೇಕು.

ವಿಶ್ವ ಸಂಸ್ಥೆಯ ಘೋಷಣೆಗಳು ಹಾಗೂ ಪರಿಸರ ಚಳವಳಿಗಳು, ಪರಿಸರ ಸಂಬಂಧಿ ನಿರ್ಧಾರಗಳಲ್ಲಿ ಮಹಿಳೆಯರಿಗೆ ಸಮಪಾಲು ನೀಡಬೇಕು, ಅವರನ್ನು ಭಾಗೀದಾರರಂತೆ ಪರಿಗಣಿಸಬೇಕೇ ಹೊರತು, ಸಾಧಾರಣ ಫಲಾನುಭವಿಗಳಂತಲ್ಲ ಎಂಬ ಸಂದೇಶವನ್ನು ನೀಡಿದ್ದರೂ ಬಹುತೇಕ ಪರಿಸರದ ಚರ್ಚೆಗಳಲ್ಲಿ ಮಹಿಳೆಯರು ಪ್ರಧಾನ ಭೂಮಿಕೆಯಲ್ಲಿಲ್ಲ. ಇದಕ್ಕೆ, ನಮ್ಮ ದೇಶದಲ್ಲೇ, ಅರಣ್ಯ ಸಂರಕ್ಷಣೆಯನ್ನು ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆಯಿಂದಲೇ ಕೈಗೊಳ್ಳಬೇಕೆಂಬ ಆಶಯದಿಂದ ಹೊರ ಹೊಮ್ಮಿದ ಜಂಟಿ ಅರಣ್ಯ ಯೋಜನೆಯೇ ಒಂದು ಜ್ವಲಂತ ನಿದರ್ಶನ. ಈ ಯೋಜನೆ ಕಳೆದ ಶತಮಾನ ಅಂತ್ಯಗೊಳ್ಳುವ ವೇಳೆಗೆ ಜಾರಿಯಾದಾಗಿನಿಂದ ಇಂದಿನವರೆಗೂ ಅರಣ್ಯವನ್ನು ಅವಲಂಬಿಸಿರುವ ಸಮುದಾಯಗಳ ಮಹಿಳೆಯರ ಸ್ಥಳೀಯ ಜ್ಞಾನಕ್ಕೆ ಎಂದೂ ಪ್ರಾಶಸ್ತ್ಯವನ್ನು ನೀಡಲಿಲ್ಲ. ಈ ಯೋಜನೆಯಡಿ ಅಸ್ತಿತ್ವಕ್ಕೆ ಬಂದ ಗ್ರಾಮ ಅರಣ್ಯ ಸಮಿತಿಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಬೇಕೆಂಬ ನಿಯಮವಿರುವುದರಿಂದ ಅವರಿಗೆ ಸದಸ್ಯತ್ವವನ್ನೇನೋ ನೀಡಲಾಯಿತು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಅವರ ಆಯ್ಕೆ, ಇಲಾಖೆ ಅಥವಾ ಸ್ಥಳೀಯ ಪುರುಷ ನಾಯಕರ ನಿರ್ಧಾರವಾಗಿತ್ತೇ ಹೊರತು, ಅವರಲ್ಲನೇಕರಿಗೆ ತಾವು ಸದಸ್ಯರೆಂಬ ಅರಿವೂ ಇರಲಿಲ್ಲ. ಮಹಿಳೆಯರಿಗೇನು ಗೊತ್ತು ಪರಿಸರ, ಜೀವ ವೈವಿಧ್ಯ ಅಥವಾ ಜಲ–ನೆಲದ ವಿಚಾರಗಳು ಎಂಬ ಧೋರಣೆಯೇ ಬಹುತೇಕ ಪರಿಸರ ನೀತಿಗಳನ್ನು ರೂಪಿಸುವಾಗಲಾಗಲೀ, ಅನುಷ್ಠಾನಕ್ಕೆ ತರುವಾಗಲಾಗಲೀ ಅವರನ್ನು ಹೊರಗೆ ಇಟ್ಟಿರುವುದು.

ಪರಿಸರದೊಡನೆ ನಿಕಟ ಸಂಬಂಧವನ್ನು ಹೊಂದಿರುವ ಮಹಿಳೆಯರು ಆ ಪರಿಸರದ ಮೇಲೆ ಅನಾವಶ್ಯಕವಾದ ಒತ್ತಡವನ್ನು ಹೇರುವುದಿಲ್ಲ ಎಂಬುದಕ್ಕೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಂಟಿ ಅರಣ್ಯ ಯೋಜನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಕುರಿತಂತೆ ನಾನು ಕೈಗೊಂಡಿದ್ದ ಸಂಶೋಧನಾ ಅಧ್ಯಯನದ ಭಾಗವಾಗಿ ಏರ್ಪಡಿಸಿದ್ದ ಅರಣ್ಯಾಧಿಕಾರಿಗಳು ಮತ್ತು ಮಹಿಳೆಯರ ನಡುವಿನ ಸಂವಾದದಲ್ಲಿ ಭಾಗಿಯಾಗಿದ್ದ ಗ್ರಾಮ ಅರಣ್ಯ ಸಮಿತಿಗಳ ಮಹಿಳಾ ಸದಸ್ಯರು ವ್ಯಕ್ತಪಡಿಸಿದ ಭಾವನೆಗಳು ಸಾಕ್ಷಿಯಾಗಿವೆ.. ಅರಣ್ಯದಿಂದ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆಗೆ ಪರವಾನಗಿಯನ್ನು ಹೊರಗಿನ ಗುತ್ತಿಗೆದಾರರಿಗೆ ನೀಡಲಾಗಿದ್ದು, ಅವರಲ್ಲನೇಕರು ಗಿಡಗಳಿಂದ ಸೊಪ್ಪು ಅಥವಾ ಇತರ ಉತ್ಪನ್ನಗಳನ್ನು ಕೀಳುವಾಗ ಗಮನದಲ್ಲಿಡಬೇಕಾದ ಅಂಶಗಳಿಗೆ ಗಮನ ನೀಡುತ್ತಿರಲಿಲ್ಲ. ಆದ್ದರಿಂದ ಭವಿಷ್ಯದಲ್ಲಿ ಅದು ಆ ಗಿಡ–ಮರಗಳ ಇಳುವರಿಯ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿತ್ತು. ಸಂವಾದದಲ್ಲಿ ಭಾಗವಹಿಸಿದ್ದ ಮಹಿಳೆಯೊಬ್ಬರು ಕೇಳಿದ ಪ್ರಶ್ನೆಯೇನೆಂದರೆ ಕೇವಲ ಲಾಭ ಗಳಿಕೆಯ ದೃಷ್ಟಿಯಿಂದ ನಮ್ಮ ಪ್ರಾಕೃತಿಕ ಸಂಪತ್ತನ್ನು ಬಳಕೆ ಮಾಡಿಕೊಳ್ಳುವವರಿಗೆ ನಮ್ಮ ಮುಂದಿನ ತಲೆಮಾರುಗಳ ಬಗ್ಗೆಯಾಗಲಿ, ನಮ್ಮ ಸಸ್ಯ ಸಂಪನ್ಮೂಲಗಳ ಬಗ್ಗೆಯಾಗಲಿ ಕಾಳಜಿಯೂ ಇಲ್ಲ, ಸಾಮಾನ್ಯ ಜ್ಞಾನವೂ ಇಲ್ಲ. ನಮಗೇ ಈ ಅವಕಾಶಗಳನ್ನು ಕೊಟ್ಟರೆ 'ಯಾವ ಪದಾರ್ಥವನ್ನು ಯಾವಾಗ ಕೀಳಬೇಕು, ಹೇಗೆ ಕೀಳಬೇಕು ಹಾಗೂ ಎಷ್ಟು ಕೀಳಬೇಕು'–ಈ ಎಲ್ಲ ವಿಚಾರಗಳತ್ತ ನಾವು ಗಮನ ಹರಿಸುತ್ತೇವೆ. ನಮ್ಮ ಕಾಳಜಿ ಇರುವುದು ಕೇವಲ ಹಣ ಗಳಿಕೆಯಲ್ಲ, ನಮ್ಮ ಜೀವ ವೈವಿಧ್ಯವನ್ನು ರಕ್ಷಿಸಿ ಸಸ್ಯ ಸಂಪತ್ತು ಭವಿಷ್ಯದಲ್ಲೂ ವೃದ್ಧಿಯಾಗಬೇಕು ಎನ್ನುವುದರತ್ತ ಎಂಬ ಅವರ ಮಾತುಗಳು ಸುಸ್ಥಿರ ಪರಿಸರ ಸಂರಕ್ಷಣೆಯ ಬಗ್ಗೆ ಅವರಿಗಿದ್ದ ಕಾಳಜಿಯನ್ನು ತೋರಿದವು. ಅವರ ಜೀವನಾನುಭವಕ್ಕೆ, ಪರಿಸರವನ್ನು ಮಾರುಕಟ್ಟೆಯಾಗಿ ಪರಿವರ್ತಿಸಿರುವ ನವ–ಬಂಡವಾಳಶಾಹಿ ಶಕ್ತಿಗಳಿಂದ ಉಳಿಸುವ ಶಕ್ತಿ ಇದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಜಂಟಿ ಅರಣ್ಯ ಯೋಜನೆಯಡಿಯಲ್ಲಿ ಸೃಷ್ಟಿಯಾದ ನೆಡುತೋಪುಗಳಲ್ಲಿ ಹಾಕಿದ ತೇಗ ಮತ್ತು ಅಕೇಸಿಯಾ ವಾಣಿಜ್ಯದ ದೃಷ್ಟಿಯಿಂದ ಭವಿಷ್ಯದಲ್ಲಿ ಹೆಚ್ಚು ಇಳುವರಿಯನ್ನು ನೀಡುತ್ತದೆಂಬ ವಾದವನ್ನು ಮಂಡಿಸಲಾಯಿತು. ಆದರೆ ಸ್ಥಳೀಯ ಜನ ಸಮುದಾಯಗಳ ಬದುಕಿನಲ್ಲಿ ಯಾವ ಬದಲಾವಣೆಗಳನ್ನೇನೂ ಅವು ತರಲಿಲ್ಲ. ಈ ಸಸ್ಯಗಳನ್ನು ಕ್ರಿಮಿ–ಕೀಟಗಳಿಂದ ರಕ್ಷಿಸಲು ರಾಸಾಯನಿಕ ಔಷಧಿಗಳನ್ನು ಸಿಂಪಡಿಸಿದ್ದರಿಂದ ಆ ಪ್ರದೇಶಗಳಲ್ಲಿ ಹೇರಳವಾಗಿದ್ದ ಝರಿ ತೊರೆಗಳು ವಿಷಪೂರಿತವಾಗಿ, ಅವುಗಳಲ್ಲಿದ್ದ ಜಲಚರಗಳು ಸಾಯಲಾರಂಭಿಸಿದವು. ಸ್ಥಳೀಯ ಬಡ ಜನತೆಯ ಆಹಾರ ಮೂಲವೊಂದು ನಾಶವಾಗಿದ್ದೇ ಅಲ್ಲದೆ, ಆಹಾರ ಸಂಗ್ರಹಣೆಯ ಪ್ರಮುಖ ಹೊರೆ ಹೊತ್ತಿದ್ದ ಮಹಿಳೆಯರು ಆಹಾರವನ್ನು ಅರಸಿ ವಾಸಸ್ಥಾನಗಳಿಂದ ದೂರ–ದೂರ ಹೋಗಬೇಕಾಯಿತು. ನಿರ್ಜನ ಪ್ರದೇಶಗಳಲ್ಲಿ ಹಾಗೆ ಹೋದಾಗ ಪ್ರಾಣಿಗಳು ಅಥವಾ ಹೊರ ಪ್ರದೇಶಗಳಿಂದ ಅಕ್ರಮವಾಗಿ ಅರಣ್ಯದೊಳಗೆ ನುಸುಳಿದ್ದ ಕೆಲ ಪಾನಮತ್ತ ಪುರುಷರು ಹದಿಹರೆಯದ ಅಥವಾ ಯುವ ಮಹಿಳೆಯರ ಮೇಲೆ ಆಕ್ರಮಣ ಮಾಡಲು ಪ್ರಯತ್ನಿಸಿದ ಘಟನೆಗಳೂ ವರದಿಯಾದವು. ಪರಿಸರದ ಸಂರಕ್ಷಣೆಗಾಗಿ ಅಸ್ತಿತ್ವಕ್ಕೆ ತಂದ ಯೋಜನೆಯನ್ನು ಲಿಂಗ ಸೂಕ್ಷ್ಮ ಆಯಾಮಗಳಿಂದ ನೋಡದೆ ಹೋದರೆ, ಹೇಗೆ ಅನಿರೀಕ್ಷಿತ ಪರಿಣಾಮಗಳನ್ನು ಮಹಿಳೆಯರು ಎದುರಿಸಬೇಕು ಎಂಬುದಕ್ಕೆ ಇದೊಂದು ನಿದರ್ಶನ.

ಪರಿಸರ ಮತ್ತು ಮಹಿಳೆಯರ ನಡುವಣ ಸಂಬಂಧವನ್ನು ವಿಶ್ಲೇಷಿಸುವ ಈ ಬರೆವಣಿಗೆ ಒಂದು ಸಣ್ಣ ಪ್ರಯತ್ನವಷ್ಟೇ. ಅದಕ್ಕೆ ಇನ್ನು ಬಹು ಆಯಾಮಗಳಿವೆ. ಪರಿಸರ ಹಾನಿಯಾದಾಗ ಅದರ ದುಷ್ಪರಿಣಾಮ ವನ್ನು ಅತ್ಯಂತ ಗಂಭೀರವಾಗಿ ಎದುರಿಸುವವರು ಮಹಿಳೆಯರು. ಸುನಾಮಿಯೇ ಇರಬಹುದು, ಪ್ರವಾಹಗಳೇ ಇರಬಹುದು ಅಥವಾ ನಶಿಸುತ್ತಿರುವ ಪ್ರಾಕೃತಿಕ ಸಂಪನ್ಮೂಲಗಳೇ ಇರಬಹುದು–ಪರಿಸರಕ್ಕೆ ನಷ್ಟವಾದಾಗ ಮಹಿಳೆಯರ ಬದುಕು ದುಸ್ತರವಾಗುತ್ತದೆ. ಆದ್ದರಿಂದಲೇ ಸುಸ್ಥಿರ ಪರಿಸರ ನಿರ್ವಹಣೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಅತ್ಯಗತ್ಯ.



ವಿಧಾನ ಪರಿಷತ್ ಅಭ್ಯರ್ಥಿ ಆಯ್ಕೆಗೆ 'ಮನಿ' ಮಾನದಂಡ: ವಾಟಾಳ್ ನಾಗರಾಜ್ ವಿಷಾದ

> ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಮಾಡುವಂತಹ ರಾಜಕೀಯ ಪಕ್ಷಗಳು ಒಟ್ಟಿಗೆ ಸೇರಿ ಆತ್ಮಾವಲೋಕನ (Introspection) ಮಾಡಿಕೊಳ್ಳಬೇಕು. ಪ್ರಜಾಪ್ರಭುತ್ವದ, ಸಂವಿಧಾನದ ಉಳಿವಿಗಾಗಿ ಇದರ ಬಗ್ಗೆ ಗಂಭೀರವಾದ ಚರ್ಚೆ ನಡೆಸಬೇಕಿದೆ. ಕೇವಲ ಮೇಲ್ಮನೆ ಮಾತ್ರವಲ್ಲ, ಕೆಳಮನೆ ವಿಧಾನ ಸಭೆಗೂ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗಲೂ ಒಂದು ಮಾನದಂಡ ವನ್ನು ಅನುಸರಿಸಿದರೆ ವಿಧಾನಸಭೆ ಹಾಗೂ ವಿಧಾನ ಪರಿಷತ್‌ಗೆ ಅರ್ಹತೆ ಇರುವಂತಹ ಸದಸ್ಯರನ್ನು ನಾವು ಆಯ್ಕೆ ಮಾಡಬಹುದು. ಈ ಕೆಲಸವನ್ನು ಕೇಂದ್ರ ಸರ್ಕಾರ ಎಲ್ಲಾ ರಾಜಕೀಯ ಪಕ್ಷಗಳ ಸಹಕಾರ ಹಾಗೂ ಸಮನ್ವಯದಿಂದ ಮಾಡುವುದು ಜರೂರಾಗಿದೆ. –ವಾಟಾಳ್ ನಾಗರಾಜ್

ಮೈಸೂರು, ಜೂ.8–ವಿಧಾನ ಪರಿಷತ್ ಚುನಾವಣೆಗೆ ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆ ವಿಷಯದಲ್ಲಿ ಮನಿಯನ್ನೇ (ಹಣ) ಮಾನದಂಡವಾಗಿ ಪರಿಗಣಿಸುತ್ತಿರುವುದರಿಂದ ಮೇಲ್ಮನೆ ವಿಧಾನ ಪರಿಷತ್‌ನ ಘನತೆ, ಗಾಂಭೀರ್ಯ ಹಾಗೂ ಚರ್ಚೆಯ ಗುಣಮಟ್ಟ ಅಧೋಗತಿಗಿಳಿದಿದೆ. ಇದು ಹಿರಿಯ ಕನ್ನಡ ಚಳುವಳಿಗಾರರೂ ಆದ ವಾಟಾಳ್ ಪಕ್ಷದ ಮಾಜಿ ಶಾಸಕ ವಾಟಾಳ್ ನಾಗರಾಜ್ ನೋವಿನ ನುಡಿ.

ಎಸ್. ನಿಜಲಿಂಗಪ್ಪ, ಕಡಿದಾಳು ಮಂಜಪ್ಪ, ಖಾದ್ರಿ ಶಾಮಣ್ಣ ಮುಂತಾದವರು ವಿಧಾನ ಪರಿಷತ್ ಸದಸ್ಯರಾಗಿದ್ದವರು. ಅನುಭವಿಗಳು, ವಿದ್ಯಾವಂತರು, ಸಾಧಕರು, ಸಮಾಜಸೇವಾ ಧುರೀಣರು ಆಗಿರುತ್ತಿದ್ದರು. ಆಗ ಮೇಲ್ಮನೆ ಪರಿಷತ್ ಹೊಂದಿದ್ದಂತಹ ಘನತೆ, ಗೌರವಗಳನ್ನು ಗಮನಿಸಿದರೆ ನೋವಾಗುತ್ತದೆ. ಆಗ ನಡೆಯುತ್ತಿದ್ದಂತಹ ಮೌಲ್ಯಯುತ ಹಾಗೂ ಅರ್ಥಪೂರ್ಣ ಚರ್ಚೆಗಳು, ನೀಡುತ್ತಿದ್ದಂತಹ ಸಲಹೆಗಳು ಮುಂತಾದವುಗಳ ಪರ್ಯಾಲೋಚನೆ ನಡೆಸಿದರೆ ದುಃಖವಾಗುತ್ತದೆ. ಹಾಲಿ ದಕ್ಷಿಣ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯಲ್ಲಿ ವಾಟಾಳ್ ಪಕ್ಷದ ಅಭ್ಯರ್ಥಿಯಾಗಿ ಕಣದಲ್ಲಿರುವ ವಾಟಾಳ್ ನಾಗರಾಜ್ 'ಮೈಸೂರು ಮಿತ್ರ'ನಲ್ಲಿ ಪ್ರಸಕ್ತ ಚುನಾವಣಾ ರಾಜಕಾರಣದ ಅಧೋಗತಿಗೆ ಬೇಸರವನ್ನು ವ್ಯಕ್ತಪಡಿಸಿದ್ದಾರೆ.

ವಿಧಾನ ಪರಿಷತ್ ಹಾಗೂ ವಿಧಾನಸಭೆ ಚುನಾವಣೆಗೆ ರಾಜಕೀಯ ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಯಾವ ಮಾನದಂಡವನ್ನೂ ಅನುಸರಿಸುತ್ತಿಲ್ಲ. ಹಾಗಾಗಿ ಅದರಲ್ಲೂ ಮೇಲ್ಮನೆ ಪರಿಷತ್‌ಗಿದ್ದ ಘನತೆ, ಗೌರವಗಳು ಮಣ್ಣು ಪಾಲಾಗಿವೆ. ಪದವೀಧರರು, ಶಿಕ್ಷಕರು, ಸ್ಥಳೀಯ ಆಡಳಿತ ಸಂಸ್ಥೆಗಳ ಕ್ಷೇತ್ರ ಹಾಗೂ ವಿಧಾನಸಭೆಯಿಂದಲೂ ಪ್ರಜ್ಞಾವಂತ ಮತದಾರರಿಂದ ಆಯ್ಕೆಯಾಗಬೇಕಾಗಿರುವ ಅಭ್ಯರ್ಥಿಗಳು ಅರ್ಹತೆಯುಳ್ಳವರು, ಸಂವಿಧಾನದ ಆಶಯವನ್ನು ಅರ್ಥೈಸಿಕೊಂಡವರೂ ಆಗಿರಬೇಕು. ಅಂತಹ ಅಭ್ಯರ್ಥಿಗಳನ್ನು ಯಾವುದೇ ಆಸೆ–ಆಮಿಷಗಳಿಗೆ (ಹಣ, ಅಧಿಕಾರ, ವರ್ಗಾವಣೆ, ಹೆಂಡ ಇತ್ಯಾದಿ) ಒಳಗಾಗದೇ ಮತ ಹಾಕಿ ಗೆಲ್ಲಿಸಬೇಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ನಾವು ಕಂಡಂತೆ(ಅನುಭವಿಸಿದಂತೆ), ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ, ಅವರು ಮಾಡುವ ಆಡಳಿತದ ರೂಪು–ರೇಷೆ ಸುಮಾರಿಗೆ ಒಂದೇ ರೀತಿಯದ್ದಾಗಿರುತ್ತದೆ. ಅದು, ಅವರು ಹೇಳಿಕೊಂಡು ಬಂದಂತಹ ಸಿದ್ಧಾಂತವನ್ನಾಗಲೀ ಅಥವಾ ವಿಚಾರಗಳನ್ನಾಗಲೀ ಅನುಸರಿಸುವುದೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಒಂದು ರಾಜಕೀಯ ಪಕ್ಷ ಚುನಾವಣಾ ಸಂದರ್ಭ ಕೆಲವು ಆಮಿಷಗಳನ್ನು ಒಡ್ಡಿದರೆ, ಇನ್ನುಳಿದವು ಇನ್ನೂ ಆಕರ್ಷಕವಾದಂತಹ ಅದೇ ರೀತಿಯ ಭರವಸೆಗಳನ್ನು ನೀಡುತ್ತವೆ. ಒಂದು ಪಕ್ಷ 5 ರೂ.ಗೆ 1 ಕೆ.ಜಿ. ಅಕ್ಕಿ ನೀಡುವುದಾಗಿ ಹೇಳಿದರೆ, ಮತ್ತೊಂದು 4 ರೂ.ಗೆ, ಮಗದೊಂದು 3 ರೂ.ಗೆ ಅಕ್ಕಿ ನೀಡುವುದಾಗಿ ಆಶ್ವಾಸನೆ ನೀಡುತ್ತಾ ಹೋಗುತ್ತವೆ. ಕೊನೆಗೆ ನಮ್ಮ ರಾಜ್ಯದಲ್ಲೇ 1 ರೂ.ಗೆ 1 ಕೆ.ಜಿ. ಅಕ್ಕಿ ನೀಡುವುದಾಗಿ ಹೇಳಿ ಮತದಾರರಿಂದ ಮತ ಹಾಕಿಸಿಕೊಂಡ ಉದಾಹರಣೆಯೂ ನಮ್ಮ ಮುಂದಿದೆ.

ಇತ್ತೀಚಿನ ದಿನಗಳಲ್ಲಿ ರಾಜಕೀಯ ಪಕ್ಷಗಳಿಂದ ಆಮಿಷ ತೋರುವ ಪರಿ ಯಾವ ಮಟ್ಟಿಗೆ ಹೋಗಿದೆ ಎಂದರೆ ಹಣ ನೀಡಿ ಓಟು ಖರೀದಿಸಲು ಪೈಪೋಟಿಗಿಳಿದಿವೆ. ವಿಧಾನ ಪರಿಷತ್‌ಗೆ ಕೆಲವು ಕ್ಷೇತ್ರಗಳಿಂದ ಆಯ್ಕೆಯಾಗಲು ಸಾವಿರ–ಸಾವಿರ ಕೊಡುವ ಮಟ್ಟಕ್ಕೂ ಬಂದು ನಿಂತಿದೆ. ಉದಾಹರಣೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಸ್ಪರ್ಧಿಸಿದವರು ಒಂದು ಓಟಿಗೆ 10 ರಿಂದ 50 ಸಾವಿರದವರೆಗೂ ನೀಡಿದ್ದಾರೆ ಎಂಬುದನ್ನು ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡಿದ್ದನ್ನು, ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು, ಜನ ಮಾತನಾಡುತ್ತಿದ್ದುದನ್ನು ನೋಡಿದ್ದೇವೆ, ಓದಿದ್ದೇವೆ, ಕೇಳಿದ್ದೇವೆ. ಈ ರೀತಿಯಲ್ಲಿ ಮತಗಳನ್ನು ಪಡೆದು ಆಯ್ಕೆಯಾಗಿ ಬಂದರೆ ಮತದಾನದ ಮೌಲ್ಯವೇ ಹಾಳಾಗುತ್ತದೆ. ಕ್ರಮೇಣ ಇದು ನಮ್ಮ ರಾಜಕೀಯ ವ್ಯವಸ್ಥೆ ಮಾತ್ರವಲ್ಲ, ಪ್ರಜಾಪ್ರಭುತ್ವವನ್ನೇ ದುರ್ಬಲಗೊಳಿಸಿ ಅದು ಕುಸಿದು ಹೋಗುವ ಮಟ್ಟಕ್ಕೆ ತರಲೂಬಹುದು ಎಂದು ವಾಟಾಳ್ ಆತಂಕ ವ್ಯಕ್ತಪಡಿಸಿದರು.

ತಾವು ನಾಲ್ಕು ಬಾರಿ ಶಾಸಕರಾಗಿದ್ದು, ಒಂದು ದಿನವೂ ಅಧಿವೇಶನಗಳಲ್ಲಿ ಕಲಾಪಕ್ಕೆ ಗೈರು ಹಾಜರಾಗದೆ ಇರುವುದರ ಬಗ್ಗೆ ಸಭಾಧ್ಯಕ್ಷರಾಗಿದ್ದ ಡಿ.ಬಿ. ಚಂದ್ರೇಗೌಡ ಪ್ರಶಂಸೆ ವ್ಯಕ್ತಪಡಿಸಿದ್ದರು. ನೆಹರು ಬಿಟ್ಟರೆ ಕಲಾಪಗಳಲ್ಲಿ ಹಾಜರಾತಿಯಲ್ಲಿ ದಾಖಲೆ ಬರೆದಿದ್ದೀರಿ ಎಂದು ಹೇಳಿದ್ದನ್ನು ವಾಟಾಳ್ ಸ್ಮರಿಸಿಕೊಂಡರು.

ಮುಡಾ ಅಧ್ಯಕ್ಷ ರಾಜೀವ್‌ರ 'ಹಸಿರು ಮೈಸೂರು' ವೃಕ್ಷ ಆಂದೋಲನಕ್ಕೆ ಮುಖ್ಯಮಂತ್ರಿ ಚಾಲನೆ

ಮೈಸೂರು, ಜೂ.8(ಎಂಕೆ)– ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ 'ಹಸಿರು ಮೈಸೂರು' ಯೋಜನೆ ಅಂಗವಾಗಿ ಹಮ್ಮಿಕೊಂಡಿರುವ ಲಕ್ಷ ವೃಕ್ಷ ಆಂದೋಲನಕ್ಕೆ ಸಿಎಂ ಬಸವರಾಜ ಬೊಮ್ಮಾಯಿ ಬುಧವಾರ ಚಾಲನೆ ನೀಡಿದರು.

ಮೈಸೂರು–ನಂಜನಗೂಡು ರಸ್ತೆಯಲ್ಲಿರುವ 'ಹಸಿರು ಮೈಸೂರು' ಯೋಜನೆಯ ಸ್ಥಳಕ್ಕೆ ಭೇಟಿ ನೀಡಿದ ಸಿಎಂ, ಗಿಡ ನೆಡುವ ಮೂಲಕ ಪ್ರಸಕ್ತ ವರ್ಷದ ಲಕ್ಷ ವೃಕ್ಷ ಆಂದೋಲನಕ್ಕೆ ಚಾಲನೆ ನೀಡಿದರು. 2019ರಿಂದ ಆರಂಭವಾದ ಲಕ್ಷ ವೃಕ್ಷ ಆಂದೋಲನದಲ್ಲಿ ಮೊದಲ ವರ್ಷ 15 ಸಾವಿರ, 2020 ರಲ್ಲಿ 15 ಸಾವಿರ, 2021 ರಲ್ಲಿ 20 ಸಾವಿರ ಹಾಗೂ ಪ್ರಸಕ್ತ ವರ್ಷ 20 ಸಾವಿರ ಗಿಡಗಳನ್ನು ಮೈಸೂರಿನೆಲ್ಲೆಡೆ ನೆಟ್ಟು ಹಸಿರು ಮೈಸೂರನ್ನಾಗಿ ಮಾಡಲಾಗುತ್ತಿದೆ.



ಈ ವೇಳೆ ಜಿಲ್ಲಾ ಉಸ್ತುವಾರಿ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ವನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಧರ್ಮಸ್ಥಳ ಮಂಜುನಾಥ ಕ್ಷೇಮಾಭಿವೃದ್ಧಿ ಸಂಘದ ನಿರ್ದೇಶಕ ಲಕ್ಷ್ಮಣ್ ಹಾಗೂ ರಾಜೀವ್ ಸ್ನೇಹ ಬಳಗದ ಸದಸ್ಯರು ಉಪಸ್ಥಿತರಿದ್ದರು.

ಹಣ ದುರುಪಯೋಗ: ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ವ್ಯವಸ್ಥಾಪಕನ ವಿರುದ್ಧ ಪ್ರಕರಣ ದಾಖಲು

ಮಂಡ್ಯ, ಜೂ.8– ಇಲ್ಲಿನ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಹಿಂದಿನ ವ್ಯವಸ್ಥಾಪಕರ ವಿರುದ್ಧ ಹಣ ದುರುಪಯೋಗಪಡಿಸಿಕೊಂಡ ಆರೋಪದ ಮೇರೆಗೆ ಪ್ರಕರಣ ದಾಖಲಾಗಿದೆ.

ಹಾಲಿ ಉತ್ತರ ಕನ್ನಡ ಜಿಲ್ಲೆಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ವ್ಯವಸ್ಥಾಪಕರಾಗಿದ್ದು, ಈ ಹಿಂದೆ ಮಂಡ್ಯ ಜಿಲ್ಲಾ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರಾಗಿದ್ದ ಎನ್.ಜಿ.ಚನ್ನಿಗರಾಯ(59) ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಗಂಗಾ ಕಲ್ಯಾಣ ಯೋಜನೆಯಡಿ ವಿದ್ಯುತ್ ಸಂಪರ್ಕಕ್ಕೆ ನಿಗಮದಲ್ಲಿ ಠೇವಣಿ ಇಟ್ಟಿದ್ದ 36,170 ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಸಂಬಂಧ ಲೋಕಾಯುಕ್ತ ಪೊಲೀಸರು ತನಿಖೆ ನಡೆಸಿ ಪೀಠೋಪಕರಣಗಳ ಖರೀದಿಗೆಂದು ಈ ಹಣವನ್ನು ಖರ್ಚು ಮಾಡಿರುವುದಾಗಿ ನಮೂದಿಸಲಾಗಿದೆಯಾದರೂ, ನಿಗಮದಲ್ಲಿ ಯಾವುದೇ ಪೀಠೋಪಕರಣ ಖರೀದಿಸಿರುವುದು ಕಂಡು ಬಂದಿಲ್ಲ. ಚನ್ನಿಗರಾಯ ಅವರು ಈ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ವರದಿ ನೀಡಿದ್ದರು.

ಇದರನ್ವಯ ಉಪ ಲೋಕಾಯುಕ್ತರು ಚನ್ನಿಗರಾಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಸೂಚಿಸಿದ ಹಿನ್ನೆಲೆಯಲ್ಲಿ ನಿಗಮದ ಹಾಲಿ ವ್ಯವಸ್ಥಾಪಕ ವಿನೋದ್ ಕುಮಾರ್ ಅವರು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡ್ಯ ಸೆಂಟ್ರಲ್ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ

ಆಯ್ಕೆ ಮಾಡಲಾಗಿದ್ದು, ಮೈಸೂರಿನಲ್ಲಿ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡಲಾಗುವುದು. ಬಿಯಾಂಡ್ ಬೆಂಗಳೂರು ಅನ್ವಯ 2ನೇ ಹಂತದ ನಗರಗಳಾದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಗುಲ್ಬರ್ಗಾ ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮೈಸೂರಿಗೆ ಕೈಗಾರಿಕೋದ್ಯಮಿಗಳ ಆಕರ್ಷಣೆಗೆ ಕೈಗಾರಿಕಾ ಟೌನ್‌ಶಿಪ್ ಮಾಡಲು ತೀರ್ಮಾನಿಸಲಾಗಿದೆ. ಕೈಗಾರಿಕೆಗಳ ಬೆಳವಣಿಗೆಯಲ್ಲಿ ಮೈಸೂರು ಪ್ರಮುಖ ಪಾತ್ರವಹಿಸುತ್ತದೆ. ರಾಜ್ಯದಲ್ಲಿ ಪದವಿಗಳನ್ನು ನೀಡುವ ಜತೆಗೆ ಕೌಶಲ್ಯವುಳ್ಳ ಮಾನವ ಸಂಪನ್ಮೂಲ ವ್ಯಕ್ತಿಗಳನ್ನು ರೂಪಿಸುವ ಕೆಲಸ ಮಾಡಬೇಕಾಗಿದೆ. ಒಂದೂವರೆ ಲಕ್ಷ ಜನರಿಗೆ ಉದ್ಯಮಿಯಾಗು-ಉದ್ಯೋಗ ನೀಡು ಯೋಜನೆಯಡಿ ತರಬೇತಿ ಕೊಡಿಸುವ ಕೆಲಸ ಆರಂಭಿಸಲಾಗಿದೆ. ಕೇಂದ್ರ ಸರ್ಕಾರದ ಮುದ್ರಾ ಯೋಜನೆಯಡಿ ದೇಶದಲ್ಲಿ ಆರು ಕೋಟಿ, ಕರ್ನಾಟಕದಲ್ಲಿ 12 ಲಕ್ಷ ಜನರಿಗೆ ಉದ್ಯೋಗ ನೀಡಿ ಅನುಕೂಲ ಮಾಡಿಕೊಡಲಾಗಿದೆ. ಕೃಷಿ, ಸೇವಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ಹೊಸ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡ ಮೊದಲ ರಾಜ್ಯ ಕರ್ನಾಟಕವಾಗಿದೆ. ಬೇರೆ ಬೇರೆ ದೇಶಗಳಲ್ಲಿ ಶಿಕ್ಷಣ ಪದ್ಧತಿಯನ್ನು ಬದಲಿಸಿಕೊಂಡ ಪರಿಣಾಮ ಅಭಿವೃದ್ಧಿಗೆ ಕಾರಣವಾಗಿದೆ. ನೂತನ ಶಿಕ್ಷಣ ನೀತಿಯಲ್ಲಿ ಆತನಿಗೆ ಇಷ್ಟವಾದ ವಿಷಯಕ್ಕೆ ಬದಲಾಯಿಸಿಕೊಳ್ಳಲು ಅವಕಾಶವಿದೆ. ಔದ್ಯೋಗಿಕ ನೀತಿ ಮುಖ್ಯ. ಮೊದಲು ಆಸ್ತಿ, ಹಣವಿದ್ದವರಿಗೆ ಬೆಲೆ ಇರುತ್ತಿತ್ತು. ಈಗ ಜ್ಞಾನ ಹೊಂದಿದವರಿಗೆ ಮಾತ್ರ ಬೆಲೆ ಸಿಗುತ್ತಿದೆ. ನಮ್ಮ ಸರ್ಕಾರ ಶಿಕ್ಷಣ, ಆರೋಗ್ಯ, ಮಹಿಳಾ ಕ್ಷೇತ್ರಕ್ಕೆ ಒತ್ತು ನೀಡಿದೆ ಎಂದು ಸ್ಪಷ್ಟಪಡಿಸಿದರು.

ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಚಿವರಾದ ಎಸ್.ಟಿ.ಸೋಮಶೇಖರ್, ಸಿ.ನಾರಾಯಣಗೌಡ, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಬಿ.ಹರ್ಷವರ್ಧನ, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ರಾಜ್ಯ ಕಾರ್ಯದರ್ಶಿ ಜಗದೀಶ್ ಹಿರೇಮನಿ, ಮೈಸೂರು ನಗರ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಜಿಲ್ಲಾ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಕರ್ನಾಟಕ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮಹಾಪೌರರಾದ ಸುನಂದ ಪಾಲನೇತ್ರ, ಕರ್ನಾಟಕ ವಚನ ಬಾಲಮಂದಿರ ಅಧ್ಯಕ್ಷೆ ಚಿಕ್ಕಮ್ಮ ಬಸವರಾಜು, ಮೈಸೂರು ಗ್ರಾಮಾಂತರ ಉಸ್ತುವಾರಿ ಅಶ್ವಥ್ ನಾರಾಯಣ್, ಮೈಸೂರು ನಗರ ಉಸ್ತುವಾರಿ ಹಿರೇಂದ್ರ ಷಾ,ನಗರ ಪ್ರಧಾನ ಕಾರ್ಯದರ್ಶಿಗಳಾದ ವಾಣೀಶ್ ಕುಮಾರ್, ವಿ.ಸೋಮಸುಂದರ್, ಹೆಚ್.ಜಿ.ಗಿರಿಧರ್, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮದ ಮಾಜಿ ಅಧ್ಯಕ್ಷ ಆರ್.ರಘು ಕೌಟಿಲ್ಯ, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಜರ ಕೊಡುಗೆಗಳಿವೆ...

ಅಂತ ಕೇಳಿದರು. ಅದಕ್ಕೆ ನಾನು ಮಹಾರಾಜರ ಕಾಲದಲ್ಲಿ ಆರಂಭಿಸಿದ ಸಂಸ್ಥೆಗಳು, ವೈದ್ಯಕೀಯ, ಇಂಜಿನಿಯರಿಂಗ್ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಕಾರಣವಾಗಿದೆ ಎಂಬ ಉತ್ತರ ನೀಡಿದೆ. ದೊಡ್ಡ ಪ್ರಮಾಣದ ಸಂಸ್ಥೆಗಳನ್ನು ಕಟ್ಟಿದ ಹಿನ್ನೆಲೆಯಲ್ಲಿ 500 ಫಾರ್ಚೂನ್ ಕಂಪನಿಗಳಲ್ಲಿ ಕರ್ನಾಟಕದಲ್ಲಿ ನಾಲ್ಕು ನೂರು ಇವೆ. ಆರ್‌ಎನ್‌ಡಿ ಸೆಂಟರ್ ಇರುವುದು ಬೆಂಗಳೂರಿನಲ್ಲಿ ಮಾತ್ರ. ಯಾವುದೇ ಇತಿಹಾಸವನ್ನು ಬರೆಯಲು ಮುಂದಾದರೆ ಮೈಸೂರು ಮತ್ತು ಇಲ್ಲಿನ ಮಹಾರಾಜರ ಕೊಡುಗೆ ಇದೆ. ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಮೈಸೂರು ಪ್ರಮುಖ ಪಾತ್ರ ವಹಿಸುತ್ತದೆ. ವಿಮಾನ ನಿಲ್ದಾಣ ಮೇಲ್ದರ್ಜೆಗೆ ಏರಿಸಲು 320 ಕೋಟಿ ರೂ.ಗಳ ಅನುದಾನ ಬಿಡುಗಡೆಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ದೇಶದಲ್ಲೇ ಹೊಸ ಶಿಕ್ಷಣ ನೀತಿಯನ್ನು ಪ್ರಥಮ ಬಾರಿಗೆ ಅನುಷ್ಠಾನಗೊಳಿಸಿದ ರಾಜ್ಯ ಕರ್ನಾಟಕ. ಅಂತಾರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಮಕ್ಕಳು ಪೈಪೋಟಿ ನೀಡುವ ರೀತಿಯಲ್ಲಿ ಅವರಿಗೆ ಶಿಕ್ಷಣ ದೊರೆಯಬೇಕು. ಅದಕ್ಕೆ ಪೂರಕವಾಗಿ ಹೊಸ ಶಿಕ್ಷಣ ನೀತಿ ರೂಪಿಸಲಾಗಿದೆ. 21ನೇ ಶತಮಾನ ಜ್ಞಾನದ ಶತಮಾನವಾಗಿದೆ. ಈ ಹಿಂದೆ ಭೂಮಿ, ಬಂಡವಾಳ ಇದ್ದವರು ದೇಶವನ್ನು ಆಳುತ್ತಿದ್ದರು. ಆದರೆ ಇದೀಗ ಜ್ಞಾನ ಇರುವವರು ದೇಶವನ್ನು ಆಳುತ್ತಾರೆ. ನಮ್ಮ ಮಕ್ಕಳನ್ನು ಜ್ಞಾನವಂತರನ್ನಾಗಿಸಲು ಹಾಗೂ ಕೌಶಲ್ಯದಿಂದ ಕೂಡಿದ ವ್ಯಕ್ತಿಗಳನ್ನಾಗಿಸಲು ಸರ್ಕಾರ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ರಾಜ್ಯದಲ್ಲಿ 7 ಸಾವಿರ ಶಾಲಾ ಕೊಠಡಿಯನ್ನು ಹೊಸದಾಗಿ ನಿರ್ಮಾಣ ಮಾಡಲಾಗುತ್ತಿದ್ದು, ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಕೊಠಡಿ ಏಕಕಾಲದಲ್ಲಿ ನಿರ್ಮಾಣವಾದ ಉದಾಹರಣೆ ಇಲ್ಲ ಎಂದರು.

ಆರು ಪಥ ರಸ್ತೆಯಾಗಿ ಮೇಲ್ದರ್ಜೆಗೆ

ಆಗಮಿಸಿದ ಕೇಂದ್ರ ಸಚಿವರನ್ನು ಖಾಸಗಿ ಹೋಟೆಲ್‌ನಲ್ಲಿ ಭೇಟಿ ಮಾಡಿದ ಸಂಸದ ಪ್ರತಾಪ್ ಸಿಂಹ, ಮೈಸೂರು ನಗರ ಮತ್ತು ಜಿಲ್ಲೆ ಹಾಗೂ ನೆರೆ ಜಿಲ್ಲೆಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ಕೋರಿ ಮನವಿ ಸಲ್ಲಿಸಿದರು. ಇದಕ್ಕೆ ಕೇಂದ್ರ ಸಚಿವರು ಒಪ್ಪಿಗೆ ನೀಡಿದರು. ಮೈಸೂರು-ನಂಜನಗೂಡು ಹೆದ್ದಾರಿಯಲ್ಲಿ ಮಂಡಕಳ್ಳಿ ಮೈಸೂರು ವಿಮಾನ ನಿಲ್ದಾಣವೂ ಇದೆ. ಈ ವಿಮಾನ ನಿಲ್ದಾಣದಿಂದ ಹಲವು ವಿಮಾನಗಳು ಹಾರಾಟ ನಡೆಸುತ್ತವೆ. ಇದಲ್ಲದೆ, ರನ್‌ವೇ ವಿಸ್ತರಿಸುವ ಯೋಜನೆಯೂ ಇದೆ. ಜೊತೆಗೆ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಯೂ ಇದೆ. ಜೊತೆಗೆ ಊಟಿ ಮತ್ತು ಕೋಝಿಕ್ಕೋಡ್ ಕಡೆಗೆ ಕೈಗಾರಿಕಾ, ವಾಣಿಜ್ಯ ವಾಹನಗಳು ಮತ್ತು ಪ್ರವಾಸಿಗರ ವಾಹನಗಳು ಈಗಾಗಲೇ ಇಲ್ಲಿ ಸಂಚರಿಸುತ್ತಿವೆ. ಹಾಗಾಗಿ 6 ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಬೇಕೆಂದು ಸಂಸದರು ಕೋರಿದ್ದರು. ಇದನ್ನು ಸಚಿವರು ಅನುಮೋದಿಸಿದ್ದಾರೆ. ಮೈಸೂರು ನಗರದ ಕುಕ್ಕರಹಳ್ಳಿ ಕೆರೆ ಬಳಿ ಬೋಗಾದಿ ರಸ್ತೆಯಲ್ಲಿರುವ ಮೈಸೂರು-ಚಾಮರಾಜನಗರ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಕೆಳಸೇತುವೆ ನಿರ್ಮಾಣಕ್ಕೂ ಸಚಿವರು ಅನುಮೋದನೆ ನೀಡಿದ್ದಾರೆ. ಚೆನ್ನರಾಯಪಟ್ಟಣ-ಹೊಳೆನರಸೀಪುರ-ಅರಕಲಗೂಡು-ಕೊಡ್ಲಿಪೇಟೆ-ಮಡಿಕೇರಿ-ವಿರಾಜಪೇಟೆ ಮಾರ್ಗವಾಗಿ ಮಾಕುಟ್ಟ (ಕೇರಳ ಬಾರ್ಡರ್) ಸಂಪರ್ಕಿಸುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ಎಂದು ಘೋಷಿಸಿ, ಅಭಿವೃದ್ಧಿಪಡಿಸುವಂತೆ ಸಂಸದರು ಸಲ್ಲಿಸಿದ ಮನವಿಗೆ ಸಚಿವರು ಸಮ್ಮತಿ ಸೂಚಿಸಿದರು. ಅಲ್ಲದೆ, ರಾಷ್ಟ್ರೀಯ ಹೆದ್ದಾರಿ-373ರ ಹಾಸನ-ಬೇಲೂರು ಹಾಗೂ ಎಡೆಗೌಡನಹಳ್ಳಿ-ಬಿಳಿಕೆರೆ ರಸ್ತೆಯನ್ನು 2 ಪಥದಿಂದ 4 ಪಥದ ರಸ್ತೆಯಾಗಿ ಅಭಿವೃದ್ಧಿಪಡಿಸಲು ಸಚಿವರು ಅನುಮೋದನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ-275ರ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಪಟ್ಟಣ ವ್ಯಾಪ್ತಿಯಲ್ಲಿ ಅಂದಾಜು 50 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೂ ಸಚಿವರು ಅನುಮೋದಿಸಿದ್ದಾರೆ. ಸದರಿ ವ್ಯಾಪ್ತಿಯಲ್ಲಿ ಹೆದ್ದಾರಿ ತುಂಬಾ ಕಿರಿದಾಗಿದ್ದು, ಸ್ಥಳೀಯವಾಗಿಯೂ ಸಂಚಾರ ದಟ್ಟಣೆ ಹೆಚ್ಚಿದೆ. ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಪಿರಿಯಾಪಟ್ಟಣ ಪಟ್ಟಣ ವ್ಯಾಪ್ತಿಯಲ್ಲಿ ಸುಗಮ ಸಂಚಾರಕ್ಕಾಗಿ ಸದರಿ ರಸ್ತೆ ಅಗಲೀಕರಣಗೊಳಿಸಿ, ಅಭಿವೃದ್ಧಿಪಡಿಸುವುದು ಅತೀ ಅಗತ್ಯ ಎಂದು ಸಂಸದರು ಸಚಿವರಿಗೆ ಮನವರಿಕೆ ಮಾಡಿಕೊಟ್ಟರು.

ಮೋದಿಯೊಂದಿಗೆ ಯೋಗಾ ಯೋಗ

ಯೋಗ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವಂತೆ ಆದೇಶಿಸಿದ್ದಾರೆ. ಈಗಾಗಲೇ ಸರ್ಕಾರಿ, ಖಾಸಗಿ, ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಯೋಗ ತರಬೇತಿ ಆರಂಭಿಸಲಾಗಿದೆ. ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಯೋಗಪಟುಗಳ ಮಾತ್ರ ಆಯ್ಕೆ ಮಾಡುವುದಾಗಿ ತಿಳಿಸಿರುವುದರಿಂದ ಪ್ರಧಾನಮಂತ್ರಿ ಗಳೊಂದಿಗೆ ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನ ನೀಡುವ ಅವಕಾಶ ಗಿಟ್ಟಿಸಿಕೊಳ್ಳಲು ಮಕ್ಕಳು ಪೈಪೋಟಿಗಿಳಿದಿದ್ದಾರೆ.

ಜೂ.13ರ ನಂತರ ಸ್ಪಷ್ಟಚಿತ್ರಣ: ಡಿಡಿಪಿಐ ರಾಮರಾಜೇ ಅರಸ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಯೋಗ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಸಂಬಂಧ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಂದೇಶ ಬಂದಿದೆ. ಅದಕ್ಕಾಗಿ ಮೈಸೂರು ನಗರ ಶಾಲೆಗಳ ಮುಖ್ಯಸ್ಥರಿಗೆ ವಿದ್ಯಾರ್ಥಿಗಳನ್ನು ಯೋಗ ಕಾರ್ಯಕ್ರಮಕ್ಕೆ ಸಜ್ಜುಗೊಳಿಸುವಂತೆ ಸೂಚಿಸಲಾಗಿದೆ. ಅತ್ಯುತ್ತಮ ಪ್ರದರ್ಶನ ನೀಡುವ ವಿದ್ಯಾರ್ಥಿಗಳನ್ನು ಅಂತಿಮವಾಗಿ ಆಯ್ಕೆ ಮಾಡಲಾಗುತ್ತದೆ. ಎಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಲಭಿಸಲಿದೆ ಎಂದು ಜೂ.13ರ ನಂತರ ಸ್ಪಷ್ಟವಾಗಲಿದೆ. ಆದರೂ ತರಬೇತಿ ನೀಡಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುತ್ತಿದೆ ಎಂದರು.

ಮಹಿಳೆಯರ ದೇಹ ಪತ್ತೆ

ನೀರಿನ ತಡೆಗೋಡೆ ಕೋಡಿಕಟ್ಟೆಯ ಕೆಳಗೆ 30ರಿಂದ 32 ವರ್ಷ ವಯಸ್ಸಿರಬಹುದಾದ ಮಹಿಳೆಯ ದೇಹ ಕಂಡುಬಂದಿದ್ದು, ಆಕೆಯ ಕಾಲುಗಳನ್ನು ಮಂಡಿ ಮೇಲ್ಭಾಗ ಕಟ್ಟಿದ್ದು, ಹೊಟ್ಟೆಯಿಂದ ಕೆಳಭಾಗ ಮಾತ್ರ ದೊರೆತಿದೆ. ಈಕೆ ಬಿಸ್ಕೆಟ್ ಬಣ್ಣದ ಲೆಗ್ಗಿಂಗ್ ಹಾಗೂ ಕೆಂಪು ಬಣ್ಣದ ಚೂಡಿದಾರ್ ಧರಿಸಿದ್ದು, ಚೂಡಿದಾರ್ ಅನ್ನು ಕೂಡ ಹೊಟ್ಟೆಯ ಭಾಗದಲ್ಲಿ ಕತ್ತರಿಸಲಾಗಿದೆ. ಈ ಸಂಬಂಧ ಪಾಂಡವಪುರ ಠಾಣೆಯಲ್ಲಿ ಮಂಗಳವಾರ ಮಧ್ಯಾಹ್ನ 3.30ರಲ್ಲಿ ಪ್ರಕರಣ ದಾಖಲಾಗಿದೆ. ಇನ್ನು ಅರಕೆರೆ ಮಾಡರಹಳ್ಳಿಯಲ್ಲಿ ಸಾರೋಟು ಹಳ್ಳದ ನೀರಿನಲ್ಲಿ 40ರಿಂದ 45 ವರ್ಷ ವಯಸ್ಸಿನ ಮಹಿಳೆ ಮೃತದೇಹ ದೊರೆತಿದ್ದು, ಈ ದೇಹವೂ ಕೂಡ ಪಾಂಡವಪುರ ಠಾಣಾ ಸರಹದ್ದಿನಲ್ಲಿ ದೊರೆತ ದೇಹವನ್ನು ಕತ್ತರಿಸಿದಂತೆಯೇ ಕತ್ತರಿಸಲಾಗಿದೆ ಹಾಗೂ ಕಾಲುಗಳನ್ನು ಕಟ್ಟಲಾಗಿದೆ. ಅರಕೆರೆ ಗ್ರಾಮದ ಕುಮಾರಸ್ವಾಮಿ ಎಂಬುವರ ಭತ್ತದ ಗದ್ದೆಯಲ್ಲಿ ಈ ದೇಹ ದೊರೆತಿದ್ದು, ಈ ಸಂಬಂಧ ಅರಕೆರೆ ಠಾಣೆ ಪೊಲೀಸರು ಮಂಗಳವಾರ ಸಂಜೆ 4.45ರಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಬ್ಬರು ಮಹಿಳೆಯರನ್ನು ಒಂದೇ ಸ್ಥಳದಲ್ಲಿ, ಒಂದೇ ತಂಡ ಹತ್ಯೆ ಮಾಡಿ ಮೃತದೇಹಗಳನ್ನು ಚಿಕ್ಕದೇವರಾಜ ನಾಲೆಯಲ್ಲಿ ಬಿಸಾಕಿದ್ದು, ಈ ದೇಹಗಳು ನೀರಿನಲ್ಲಿ ಕೊಚ್ಚಿಕೊಂಡು ಬಂದಿರಬಹುದು ಎಂದು ಶಂಕಿಸಲಾಗಿದೆ. ಶ್ರೀರಂಗಪಟ್ಟಣ ಉಪ ವಿಭಾಗದ ಡಿವೈಎಸ್ಪಿ ಸಂದೇಶ್‌ಕುಮಾರ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ಮೃತದೇಹಗಳು ಸ್ವಲ್ಪ ಕೊಳೆತ ಸ್ಥಿತಿಯಲ್ಲಿದ್ದು, ಈ ಮಹಿಳೆಯರನ್ನು ಮೂರ್‍ನಾಲ್ಕು ದಿನಗಳ ಹಿಂದೆ ಹತ್ಯೆ ಮಾಡಿರಬಹುದು ಎಂದು ಅಂದಾಜಿಸಿ, ಕಳೆದ ಒಂದು ವಾರದಿಂದೀಚೆಗೆ ನಾಪತ್ತೆಯಾಗಿರುವ ಮಹಿಳೆಯರ ವಿವರಗಳನ್ನು ಪೊಲೀಸರು ಕಲೆ ಹಾಕುತ್ತಿದ್ದಾರೆ. ಮೃತದೇಹಗಳ ಚಿತ್ರಸಮೇತ ಎಲ್ಲಾ ವಿವರಗಳನ್ನು ಪೊಲೀಸರು ರಾಜ್ಯದ ಎಲ್ಲಾ ಠಾಣೆಗಳಿಗೂ ರವಾನಿಸಿದ್ದಾರೆ. ಪ್ರಮುಖವಾಗಿ ಮಂಡ್ಯ, ಹಾಸನ, ಮೈಸೂರು ಹಾಗೂ ರಾಮನಗರ ಜಿಲ್ಲಾ ಪೊಲೀಸರಿಗೆ ಈ ಸಂಬಂಧ ನಿಗಾ ವಹಿಸುವಂತೆ ಕೋರಲಾಗಿದೆ. ಠಾಣಾ ವ್ಯಾಪ್ತಿಗಳಲ್ಲಿ ಸದರಿ ವಯಸ್ಸಿನ ಮಹಿಳೆಯರು ನಾಪತ್ತೆಯಾಗಿದ್ದು, ಪ್ರಕರಣ ದಾಖಲಾಗದೇ ಇರುವ ಬಗ್ಗೆಯೂ ಗಮನಹರಿಸಲು ಶ್ರೀರಂಗಪಟ್ಟಣ ಉಪವಿಭಾಗದ ಪೊಲೀಸರು, ಇತರ ಠಾಣೆ ಅಧಿಕಾರಿಗಳನ್ನು ಕೋರಿದ್ದಾರೆ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ ಸುಸಜ್ಜಿತ ಆ್ಯಂಬುಲೆನ್ಸ್ ಕೊಡುಗೆ

ಮೈಸೂರು, ಜೂ. 8(ಆರ್‌ಕೆಬಿ)- ಇತ್ತೀಚೆಗೆ ತಮ್ಮ 80ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ 28 ಲಕ್ಷ ರೂ. ಮೌಲ್ಯದ ಸುಸಜ್ಜಿತ ಆ್ಯಂಬುಲೆನ್ಸ್ ಕೊಡುಗೆಯಾಗಿ ನೀಡಿದರು.

ಆಶ್ರಮಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೂಲಕ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ-ಆರ್‌ಐ) ಪ್ರಾಂಶುಪಾಲರಾದ ಡಾ. ಕೆ.ಆರ್.ದಾಕ್ಷಾಯಿಣಿ ಹಾಗೂ ಚೆಲುವಾಂಬ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಎಂ.ಆರ್.ಸವಿತಾ ಅವರಿಗೆ ಆಶ್ರಮದ ಆವರಣದಲ್ಲಿರುವ ಪ್ರಾರ್ಥನಾ ಮಂದಿರದ ಎದುರು ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಹಸ್ತಾಂತರಿಸಿದರು.



ಮೇ 13ರಂದು ಮೇಕೆದಾಟುವಿನಿಂದ ಆರು ದಿನಗಳ 'ವಿಶ್ವಶಾಂತಿ ಪಾದಯಾತ್ರೆ' ಕೈಗೊಂಡಿದ್ದ ಅವಧೂತ ದತ್ತ ಪೀಠದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಅನಾರೋಗ್ಯದಿಂದ ಬಳಲುತ್ತಿರುವ ಮಹಿಳೆಯರು ಮತ್ತು ಮಕ್ಕಳು ಸಕಾಲಕ್ಕೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಸಿಗದೇ ನರಳುತ್ತಿರುವುದನ್ನು ಕಂಡಿದ್ದರು. ಆಶ್ರಮವನ್ನು ತಲುಪಿದ ಕಿರಿಯ ಸ್ವಾಮೀಜಿಯವರು ಶ್ರೀ ಗಣಪತಿ ಸ್ವಾಮಿಗಳೊಂದಿಗೆ ಗ್ರಾಮೀಣ ಪ್ರದೇಶದ ಜನರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿದರು. ಇದರಿಂದ ಮನನೊಂದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಹಿಳೆಯರು ಮತ್ತು ಮಕ್ಕಳ ಆರೋಗ್ಯಕ್ಕಾಗಿ ಆಂಬ್ಯುಲೆನ್ಸ್ ನೀಡಲು ನಿರ್ಧರಿಸಿದರು. ಅದರಂತೆ ಇಂದು ಆಂಬುಲೆನ್ಸ್ ಹಸ್ತಾಂತರಿಸಲಾಯಿತು.

ಪ್ರಥಮ ಪ್ರಾಶಸ್ತ್ಯದ ಮತ ನೀಡಲು ಮನವಿ

ಮೈಸೂರು,ಜೂ.8(ಪಿಎಂ)- ದಕ್ಷಿಣ ಪದವೀಧರರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ತಮಗೆ ಪದವೀಧರ ಮತದಾರರು ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕೆಂದು ಕಂದಳ್ಳಿ ಮಹೇಶ್ ಮನವಿ ಮಾಡಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ನಾತಕೋತ್ತರ ಪದವೀಧರನಾದ ನಾನು, ವಾರದಲ್ಲಿ 3 ದಿನ ಕೂಲಿ ಕೆಲಸ ಮಾಡುತ್ತೇನೆ. 3 ದಿನ ಸಾಮಾಜಿಕ ಕಾರ್ಯಗಳಲ್ಲಿ ತೊಡಗುತ್ತೇನೆ. ಪದವೀಧರರ ಹಿತ ಕಾಯುವ ಉದ್ದೇಶದಿಂದ ಚುನಾವಣೆಗೆ ಸ್ಪರ್ಧಿಸಿದ್ದೇನೆ. ನನಗೆ ಬೆಂಬಲ ನೀಡಬೇಕೆಂದು ಕೋರಿದರು. ರಾಜ್ಯ ಕಟ್ಟಡ ಕಾರ್ಮಿಕರ ಸಂಘದ ಚಾಮರಾಜನಗರ ಜಿಲ್ಲಾಧ್ಯಕ್ಷ ವಿ.ನಾಗರಾಜು, ಮುಖಂಡರಾದ ಪಿ.ನಾಗೇಂದ್ರ, ಮಹೇಶ್ ಸುದ್ದಿಗೋಷ್ಠಿಯಲ್ಲಿದ್ದರು.



ಬುಧವಾರ ಮೈಸೂರಿಗೆ ಆಗಮಿಸಿದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ, ಪತ್ನಿ ಕಾಂಚನ ಗಡ್ಕರಿ ಹಾಗೂ ಕುಟುಂಬವರ್ಗ ವಿಶ್ವವಿಖ್ಯಾತ ಮೈಸೂರು ಅರಮನೆಗೆ ಭೇಟಿ ನೀಡಿದ್ದರು. ಅವರನ್ನು ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸ್ವಾಗತಿಸಿ, ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ ಉಪಸ್ಥಿತರಿದ್ದರು.

ರೈತ ಸಂಪರ್ಕ ಕೇಂದ್ರ ಕಟ್ಟಡದ ಗೋಡೆ ಕುಸಿದು ಕಾರ್ಮಿಕ ಸಾವು

ವಿರಾಜಪೇಟೆ, ಜೂ.8-ವಿರಾಜಪೇಟೆ ತಾಲೂಕು ಅಮ್ಮತ್ತಿ ಗ್ರಾಮದ ರೈತ ಸಂಪರ್ಕ ಕೇಂದ್ರದ ಕಟ್ಟಡ ದುರಸ್ತಿ ವೇಳೆ ಗೋಡೆ ಕುಸಿದು ಬಿದ್ದು, ಕಾರ್ಮಿಕ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಪಿರಿಯಾಪಟ್ಟಣ ತಾಲೂಕು ನೀಲವಾಡಿ ಗ್ರಾಮದ ಯೋಗೇಶ್(25) ಮೃತಪಟ್ಟವನಾಗಿದ್ದು, ಅಮ್ಮತ್ತಿ ರೈತ ಸಂಪರ್ಕ ಕೇಂದ್ರದ ಬಾತ್‌ರೂಂ ಗೋಡೆಗಳು ಬಿರುಕು ಬಿಟ್ಟ ಕಾರಣ ಅದನ್ನು ದುರಸ್ತಿಪಡಿಸುವ ಕಾಮಗಾರಿಯನ್ನು ಲ್ಯಾಂಡ್ ಆರ್ಮಿಗೆ ನೀಡಲಾಗಿತ್ತು. ಜೂ.6ರಂದು ಮೇಸ್ತ್ರಿ ಧರ್ಮರಾಜು ಅವರು ಯೋಗೇಶ ಸೇರಿದಂತೆ ಇಬ್ಬರು ಹುಡುಗರನ್ನು ಕರೆದುಕೊಂಡು ಬಾತ್ ರೂಂನ ಗೋಡೆ ಒಡೆಯುತ್ತಿದ್ದ ವೇಳೆ ಅದು ಯೋಗೇಶನ ಮೇಲೆ ಕುಸಿದು ಬಿದ್ದಿದೆ. ತೀವ್ರವಾಗಿ ಗಾಯಗೊಂಡ ಆತನಿಗೆ ಅಮ್ಮತ್ತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಮೈಸೂರಿನ ಖಾಸಗಿ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದೊಯ್ಯುವ ಮಾರ್ಗ ಮಧ್ಯೆ ಆತ ಮೃತಪಟ್ಟಿದ್ದಾನೆ. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣಾ ಪೊಲೀಸರು ಲ್ಯಾಂಡ್ ಆರ್ಮಿ ಇಂಜಿನಿಯರ್ ರಂಜಿತ್, ಅವರ ಸಹಾಯಕ ದೀಪಕ್ ಮತ್ತು ಮೇಸ್ತ್ರಿ ಧರ್ಮರಾಜ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದಕ್ಕೆ ಪುತ್ರಿ ಹತ್ಯೆ

ಪೊಲೀಸರಿಗೆ ಆರೋಪಿತ ಪೋಷಕರ ಹೇಳಿಕೆ

ಮೈಸೂರು, ಜೂ. 8(ಆರ್‌ಕೆ)- ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದಳೆಂಬ ಕಾರಣಕ್ಕೆ ಪುತ್ರಿಯನ್ನು ಕತ್ತು ಹಿಸುಕಿ ಕೊಲೆ ಮಾಡಿದ್ದಾರೆಂಬುದು ತನಿಖೆಯಿಂದ ತಿಳಿದು ಬಂದಿದೆ.

ಪಿರಿಯಾಪಟ್ಟಣ ತಾಲೂಕು, ಕಗ್ಗುಂಡಿ ಗ್ರಾಮದಲ್ಲಿ ನಡೆದ ಶಾಲಿನಿ ಹತ್ಯೆ ಪ್ರಕರಣ ಸಂಬಂಧ ಸುದ್ದಿಗಾರರಿಗೆ ಮಾಹಿತಿ ನೀಡಿದ ಎಸ್ಪಿ ಆರ್. ಚೇತನ್, ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದರೆಂಬ ಕಾರಣಕ್ಕೆ ಪುತ್ರಿ ಹತ್ಯೆಗೈದಿರುವುದಾಗಿ ಆರೋಪಿಗಳಾದ ತಂದೆ ಸುರೇಶ್ ಹಾಗೂ ತಾಯಿ ಬೇಬಿ ಅವರು ತಪ್ಪೊಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಪಿರಿಯಾಪಟ್ಟಣ ಠಾಣೆಗೆ ಬಂದು ಶರಣಾದ ಆರೋಪಿಗಳು, ತಮ್ಮ ಪುತ್ರಿಯನ್ನು ಕೊಲೆ ಮಾಡಿದ್ದಾಗಿ ತಿಳಿಸಿದರು. ಆಕೆ ಪ್ರೀತಿಸುತ್ತಿದ್ದ ಯುವಕ ಅನ್ಯ ಕೋಮಿನವನಾಗಿದ್ದರಿಂದ ಮದುವೆಗೆ ನಾವು ಒಪ್ಪಿರಲಿಲ್ಲ. ಅಲ್ಲದೆ ನಮ್ಮ ವಿರೋಧದ ನಡುವೆಯೂ ಧಿಕ್ಕರಿಸಿ ಮನೆಯಿಂದ ಹೋಗಲು ಮುಂದಾಗಿದ್ದಳು. ಕೋಪಗೊಂಡ ನಾವು ಕತ್ತು ಹಿಸುಕಿ ಕೊಲೆ ಮಾಡಿದ್ದಾಗಿ ಅವರು ಹೇಳಿಕೆ ನೀಡಿದ್ದಾರೆ ಎಂದು ಎಸ್ಪಿ ವಿವರಿಸಿದರು. ಈ ಹಿಂದೆ ಯುವತಿ ಪೊಲೀಸ್ ಠಾಣೆಗೆ ಬಂದು ತಾನು ಪ್ರೀತಿಸಿದ ಯುವಕನೊಂದಿಗೆ ಮದುವೆಗೆ ಒಪ್ಪದ ತಂದೆ-ತಾಯಿಯರು, ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾರೆ ಎಂದು ದೂರು ನೀಡಿದ್ದರಿಂದ ಆಕೆಯನ್ನು ಆಪ್ತ ಸಮಾಲೋಚನೆ ನಡೆಸಿದ ಬಳಿಕ ಮೈಸೂರಿನ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಇರಿಸಲಾಗಿತ್ತು ಎಂದು ಅವರು ತಿಳಿಸಿದರು.

ನಂತರ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆಂದು ಮುಚ್ಚಳಿಕೆ ಬರೆದುಕೊಟ್ಟು ಬಾಲಮಂದಿರದಿಂದ ಕರೆದೊಯ್ದಿದ್ದ ಪೋಷಕರು ಆಕೆಯನ್ನು ಹತ್ಯೆ ಮಾಡಿದ್ದಾರೆ. ಆರೋಪಿಗಳನ್ನು ಬಂಧಿಸಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಪ್ರೀತಿಸಿದ ಯುವಕ ಸೇರಿದಂತೆ ಸಾಕ್ಷ್ಯಗಳನ್ನೂ ವಿಚಾರಣೆಗೊಳಪಡಿಸಿ ತನಿಖೆ ನಡೆಸುತ್ತಿದ್ದೇವೆ ಎಂದು ಎಸ್ಪಿ ಚೇತನ್ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರದಲ್ಲಿರುವ ಸುಪ್ರಸಿದ್ಧ ವಿದ್ಯಾಸಂಸ್ಥೆಗೆ ಸೆಕ್ಯೂರಿಟಿ ಗಾರ್ಡ್, ಆಯಾ ಮತ್ತು ಡ್ರೈವರ್‌ಗಳು ಬೇಕಾಗಿದ್ದಾರೆ. PF ಮತ್ತು ESI ಸೌಲಭ್ಯಗಳು ಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
9483670193

ಬೇಕಾಗಿದ್ದಾರೆ
ಮೈಸೂರಿನ ಶ್ರೀನಗರದಲ್ಲಿರುವ (ಜೆಪಿನಗರ ಹತ್ತಿರ) ಸುಪ್ರಸಿದ್ಧ ವಿದ್ಯಾಸಂಸ್ಥೆಗೆ ಸೆಕ್ಯೂರಿಟಿ ಗಾರ್ಡ್, ಆಯಾ ಮತ್ತು ಡ್ರೈವರ್‌ಗಳು ಬೇಕಾಗಿದ್ದಾರೆ. PF ಮತ್ತು ESI ಸೌಲಭ್ಯಗಳು ಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
8183831988

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೇಕಾಗಿದ್ದಾರೆ
ಸಸ್ಯಹಾರಿ ಮತ್ತು ಮಾಂಸಹಾರಿ ಅಡುಗೆ ತಯಾರಕರು ಬೇಕಾಗಿದ್ದಾರೆ. (PF, ESI ವಸತಿ ಸೌಲಭ್ಯ ಲಭ್ಯ) ವಿಕ್ರಂ ಕಾಲೇಜ್ ಆಫ್ ನರ್ಸಿಂಗ್, ಮೈಸೂರು.
8310846772 / 9535096161

WALK IN INTERVIEW
for Science, Maths, Social and Hindi Teacher (B.A, B.Ed / B.Sc, B.Ed) Experienced or Freshers can Walk in. English Fluency is must. Security and Helpers (Family Preferred) (Free Accomodation will be provided) Address - SLD Excellent Public School. Yelachanahalli, KHB Colony, Yelwala.
9538787037 / 9036844557

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. 10am to 9 pm ಸಂಬಳ: 8000 to 10000 ಅಕ್ಬರ್ ರೋಡ್, ಮೈಸೂರು.
9916459786

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ :
9449380528
7026498386

PERMANENT WORK FROM HOME
Above 10th Pass, Job:- Relationship Manager, Telesales, Salary 15,000 to upto 50k Incentives Indias Largest Financial Education Company for More information Please Contact:
8660164209 / 9731852289

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಒಂದು ಚದರಕ್ಕೆ 1,80,000/– *ಷರತ್ತು ಅನ್ವಯ. ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361 / 9380885787

HOUSE FOR RENT
KRS Road, Gokulam 2nd Floor
9900237315
9845963421

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ ಫೋಟೋ & ಬಯೋಡೇಟಾ ವಾಟ್ಸಾಪ್ ಮಾಡಿರಿ ಡಾ.ಗುರೂಜಿ ಮೈಸೂರು
6361740552

ಬೇಕಾಗಿದ್ದಾರೆ
ಬೂಟಿಕ್‌ನಲ್ಲಿ ಕೆಲಸ ಮಾಡಲು ಲೇಡಿಸ್ ಟೈಲರ್ ಬೇಕಾಗಿದ್ದಾರೆ ಮತ್ತು ಲೇಡಿಸ್ ಹೆಲ್ಪರ್ಸ್ ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿ. ಕುವೆಂಪುನಗರ
9844813224

ಜಮೀನು ಬೇಕಾಗಿದೆ
1 ರಿಂದ 10 ಎಕರೆ ಭೂಮಿಯು ಮೈಸೂರು ಸುತ್ತಮುತ್ತ ಬೇಕಾಗಿದೆ.
7892445689
7204627343

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 -21,000 + ESI, PF ವಿದ್ಯಾರ್ಹತೆ 10th, PUC, ITI, Diploma and any Degree. ಇಂದೇ ಸಂಪರ್ಕಿಸಿ:
9035734821

WANTED
Service Technician ITI Holder/ 2nd PUC For Home Appliances Authorized Service Center & Kent RO Water Purifier Service Center
9900237315 / 9845963421

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಮೈಸೂರಿನ ಪ್ರಸಿದ್ಧ ಹೋಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸಲು ಊಟ, ತಿಂಡಿ, ಸೌಲಭ್ಯವಿದೆ. ESI, PF, ಇದೆ ಮತ್ತು ಆಕರ್ಷಕ ಸಂಬಳ ದೊರೆಯುತ್ತದೆ. 12 ಗಂಟೆ ಪಾಳಿಗೆ
6364560079
9900763507

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
1. ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು.
2. ಶಿಶ್ವರಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ. ಸೆಂಟ್ ಮೇರೀಸ್ ಆಸ್ಪತ್ರೆ, ಹಿಲ್ ಫ್ಲಾಕ್ಸ್ ನರ್ಸಿಂಗ್ ಕಾಲೇಜ್ ಹತ್ತಿರ, ಮೈಸೂರು
9916908454

ತಕ್ಷಣ ಬೇಕಾಗಿದ್ದಾರೆ
SERVICERAJU COMPANY
Field Excutive - 2
Tale Agent :- 10 (4 - HOURS)
9844444214

ಹಿಂದಿ ಶಿಕ್ಷಕರು ಬೇಕಾಗಿದ್ದಾರೆ
BA, B.Ed ಆಗಿರಬೇಕು. ಸಂಪರ್ಕಿಸಿ:
8661220628

ತಕ್ಷಣ ಬೇಕಾಗಿದ್ದಾರೆ
ಹೋಟೆಲ್ ಮತ್ತು ಮೆಟ್ಟಿಲ್ಗಳ ವಿಭಾಗದಲ್ಲಿ ಕೆಲಸ ಮಾಡಲು Computer ಅಥವಾ ಡ್ರೈವಿಂಗ್ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸೂಪರ್ ವೈಸರ್: 16,500/- +W/o (8hrs), ಗಾರ್ಡ್ – 15,500/- +W/o (8hrs) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂದರ್ಶನಕ್ಕಾಗಿ ಸಂಪರ್ಕಿಸಿ
9620667819 / 9880727819

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಮೈಸೂರು
8050345574

ಮುಡಾ ಸೈಟು ಬೇಕಾಗಿದೆ
30x40 E/F ಅಥವಾ N/F ಅರವಿಂದನಗರ, ಶಾರದಾದೇವಿನಗರ, ನ್ಯಾಯಾಂಗ ಬಡಾವಣೆ, ಎಸ್.ಬಿ.ಎಂ ಲೇಔಟ್, ರಾಜ ರಾಜೇಶ್ವರಿ ನಗರ, ವಿಜಯನಗರ ಈ ಹಂತ ಸುತ್ತಮುತ್ತ ಮಾಲೀಕರು ನೇರವಾಗಿ ಸಂಪರ್ಕಿಸಿ.
9449529819

TEACHERS TRAINING
NURSERY/ MONTESSORI/ KINDERGARTEN
ನೀವು ಟೀಚರ್ ಆಗಬೇಕೇ ! SSLC ಪಾಸಾಗಿದ್ದರೆ, ತಕ್ಷಣ ಸಂಪರ್ಕಿಸಿ, ತರಬೇತಿ ಪಡೆದ ನಂತರ ಕೆಲಸ PUC & DEGREE PASS OR FAIL APPLY, N T T TRAINING, EXAM & CERTIFICATE, Regs, By Govt of NCT (New Delhi)
9113980741

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣೀಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಸುವರ್ಣ ಯಾತ್ರೆ
ಕಾಶಿ ಪ್ರವಾಸ 7 ದಿನಗಳು 23/07/22 ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಶ್ರೀ ಬಾಬಾ ಬೈದ್ಯನಾಥ ಹಾಗೂ ಇತರೆ ತಮಿಳುನಾಡು ಪ್ರವಾಸ 5 ದಿನಗಳು 26/06/22 9 ನವಗ್ರಹ, ತಂಜಾವೂರು, ಕನ್ಯಾಕುಮಾರಿ ಹಾಗೂ ಇತರೆ
9019462508 / 8970949434

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು ಕೊರಿಯರ್ ಸೌಲಭ್ಯವಿದೆ.
9743217566
9108418233

S.M. GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5200
ಯಾವುದೇ ಬ್ಯಾಂಕ್ ಮತ್ತು ಫೈನಾನ್ಸ್‌ನಲ್ಲಿ ಗಿರವಿ ಇಟ್ಟಿರುವ ಚಿನ್ನಾಭರಣಕ್ಕೆ ಹಣ ಬೇಕೆ ಕೂಡಲೇ ಸಂಪರ್ಕಿಸಿ (T&C)
8050518881

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

HOUSE FOR LEASE
Independent 4 BHK House with Car Parking Facilities is for Lease @ Bannimantap Extension, For Immediate Occupy, Contact -
7406349666

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

WANTED FEMALE TELECALLERS
Language: Kannada & Others
Qualification: SSLC/ PUC/ Degree/ Post Graduation
Salary: Rs10000 to Rs15000 + Incentive
9538688412

ಶ್ರೀ ಮಲೈಮಹದೇಶ್ವರ ಟೂರಿಸ್ಟ್
2-9-2022 15 ದಿನಗಳ 4 ಧಾಮ ಪ್ರವಾಸ ವಿಮಾನ ಮತ್ತು ಬಸ್ಸಿನಲ್ಲಿ ಹರಿದ್ವಾರ ಮಸೂರಿ ಯಮುನೋತ್ರಿ, ಗಂಗೋತ್ರಿ, ಬದ್ರಿನಾಥ್, ಕೇದಾರನಾಥ, ಡೆಹ್ರಾಡೂನ್, ಹೃಷಿಕೇಶ್, ಮೈಸೂರು
29–10–2022 10 ದಿನಗಳ ಕಾಶಿ ಪ್ರವಾಸ ರೈಲಿನಲ್ಲಿ ಮತ್ತು ಬಸ್ಸಿನಲ್ಲಿ ಕಾಶಿ ಗಯಾ, ಬುದ್ಧಗಯಾ [illegible]
ಮೊಬೈಲ್: **9986089777**

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, [illegible] (No. 721414507) [illegible] 23.5.2022 [illegible]
ಸಹಿ/– ಲಕ್ಷ್ಮಮ್ಮ

ಕಳೆದಿದೆ
ಹೆಚ್. ಅಂಜನೇಯ, ನಂ. 90, 5ನೇ ಕ್ರಾಸ್, 1ನೇ ಹಂತ, ಬೃಂದಾವನ ಬಡಾವಣೆ, ಮೈಸೂರು, ಈ ಮೇಲ್ಕಂಡ ಸ್ವತ್ತಿನ ಪತ್ರ ಮತ್ತು ಮಂಜೂರಾತಿ ಪತ್ರ, ಸ್ವಾಧೀನ ಪತ್ರ ಮತ್ತು ಹಕ್ಕುಪತ್ರಗಳು ದಿನಾಂಕ 25.5.2022 ರಂದು ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 99456-87098

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

50,000 ರೂಗಳಿಗೆ 3% ಬಡ್ಡಿ ಸ್ಕ್ಯೂರಿಟಿಗೆ ಚಿನ್ನ ಪಡೆಯಿರಿ
50,000 ರೂ.ಗಳಿಗೆ ತಿಂಗಳಿಗೆ 3% ಬಡ್ಡಿ ಕೊಡಲಾಗುವುದು. ನೀವು ಕೊಟ್ಟಿರುವ ಹಣಕ್ಕೆ 10 ಗ್ರಾಂ ಚಿನ್ನ ಸೆಕ್ಯೂರಿಟಿಯಾಗಿ ಕೊಡಲಾಗುವುದು. ಆಸಕ್ತಿಯುಳ್ಳವರು ಕರೆ ಮಾಡಿ. MNM ಗೋಲ್ಡ್, ಅಶೋಕ ರಸ್ತೆ, ಮೈಸೂರು
9036991977

Solarizer

HYGIENIC HOT WATER EVERY DAY!
Solar Water Heater SALES & SERVICE
Bajaj Finserv Available
SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR SALE
30x40 MUDA
New 4 BHK E/F Door & Site, Pillar Construction at Ramkrishnagar with Kabini Water, Near Andolana Circle - Rs.1.55 Cr. (Brokers Excuse)
8660105902

ಬಾಡಿಗೆಗೆ
ಕುವೆಂಪುನಗರದ ವಿಜಯ ಬ್ಯಾಂಕ್ ಸರ್ಕಲ್ ಬಳಿ ಈಸ್ಟ್ ಆಫ್ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಗ್ರೌಂಡ್ ಫ್ಲೋರ್ 600 ಚ.ಅಡಿಗಳು ಹಾಗೂ 1ನೇ ಮಹಡಿಯಲ್ಲಿ 1000 ಚ.ಅಡಿಗಳು ಸೂಪರ್ ಮಾರ್ಕೆಟ್, ಪಾಲಿ ಕ್ಲಿನಿಕ್, ರೆಸ್ಟೋರೆಂಟ್, ಆಫೀಸ್ ಹಾಗೂ ಕೋಚಿಂಗ್ ಕ್ಲಾಸ್‌ಗಳು ನಡೆಸಲು ಸೂಕ್ತವಾಗಿದೆ.
8105751169 / 9620607138

ಶಿಕ್ಷಕರು ಬೇಕಾಗಿದ್ದಾರೆ
L.K.G, U.K.G ಮಾಂಟೆಸರಿ Hindi, B.Sc, B.Ed, B.A, M.A, PUC, DEd, M.Sc ಸಂದರ್ಶನ: 11/06/2022, ಸಮಯ: ಬೆಳಿಗ್ಗೆ 10 ರಿಂದ 3ರವರೆಗೆ, ಶ್ರೀ ನಂಜುಂಡೇಶ್ವರ ವಿದ್ಯಾಕೇಂದ್ರ, ಗಣಗರಹುಂಡಿ, ಬೋಗಾದಿ, ಮೈಸೂರು.
9686036533 / 9741344055

ಬೇಕಾಗಿದ್ದಾರೆ (VACANCY)
[illegible]
ಮೊಬೈಲ್: **8050905152**
ದೂರವಾಣಿ: **9900889325**
ಇಂಟರ್‌ವ್ಯೂ ಸಮಯ: ಬೆಳಿಗ್ಗೆ 10 ರಿಂದ 11.30 ರವರೆಗೆ CIEPT ಕಾಲೇಜು ಹತ್ತಿರ

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/6– ಕಾಶಿ ವಿಶ್ವನಾಥ್, ಚಾಮುಂಡಿ ಬೈದ್ಯನಾಥ್, ಗಯಾ, ಬುದ್ಧ ಗಯಾ, ಪ್ರಯಾಗರಾಜ್, ಅಯೋಧ್ಯೆ, 12/7– ಮಧ್ಯ ಪ್ರದೇಶ 2 ಜ್ಯೋತಿರ್ಲಿಂಗ, ಉಜ್ಜಯನಿ ಮಹಾಕಾಳೇಶ್ವರ, ಓಂಕಾರೇಶ್ವರ, ಮಹೇಶ್ವರ, ದೇವಾಸ್, ಇಂದೋರ್ 16/7– ಕೊಣಾರ್ಕ್, ಪುರಿ ಜಗನ್ನಾಥ, ಚಂದ್ರಭಾಗ್ [illegible]
9964527782 / 9591017782

HOUSE FOR RENT
2BHK, 1st Floor, 30x40 Near Pramathi School, Kuvempunagar
9663467364

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ತಕ್ಷಣ ಬೇಕಾಗಿದ್ದಾರೆ
2 Wheeler Service Station ಗೆ ಹುಡುಗರು ಬೇಕಾಗಿದ್ದಾರೆ.
ದಿ ಹೆರಿಟೇಜ್ ಗ್ಯಾರೇಜ್
ಅಗ್ರಹಾರ, ಮೈಸೂರು
9535266600
8073062515

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಡೆಲಿವರಿ ಬಾಯ್ ಮತ್ತು ಸರ್ವೀಸ್ ಎಂಜಿನಿಯರ್ ಕೆಲಸಕ್ಕೆ PUC / SSLC ಮಾಡಿರುವ 25 ವರ್ಷದೊಳಗಿನ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಕಡ್ಡಾಯ. ಸಂಪರ್ಕಿಸಿ:
8073393505

WANTED
Lady Customer Care Executives Age 26-38 Years, Any PUC/ Diploma/Degree International Reputed Matrimony VANAJARAO QUICK MARRIAGES PVT. LTD Saraswathipuram, Mysore-09
9343175000
0821-4245500

S.K.CONSTRUCTION
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan, 3D Elevation Approval Loan ಸಹಿತ Construction ಮಾಡಿಕೊಡುತ್ತೇವೆ.
9620528490

ಜಮೀನು ತಕ್ಷಣ ಮಾರಾಟಕ್ಕಿದೆ
ಪಿರಿಯಾಪಟ್ಟಣದಿಂದ 2 ಕಿಲೋಮೀಟರ್ ವ್ಯಾಪ್ತಿಯೊಳಗೆ ಬಿ.ಎಂ.ರೋಡ್‌ನಲ್ಲಿ ಅತಿಕೆ ತೆಂಗು ಬಾಳೆ ಬೆಳೆಯಿಂದಿಗೆ ಹತ್ತು ಎಕರೆ ಜಮೀನು ತಕ್ಷಣ ಮಾರಾಟಕ್ಕಿದೆ. ಆಸಕ್ತರು ತಕ್ಷಣ ಸಂಪರ್ಕಿಸುವುದು.
9448165451

ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ
ಕಂಪನಿ ಕೆಲಸಕ್ಕೆ ಅನುಭವವುಳ್ಳ ಆಲ್ ರೌಂಡರ್ ಎಲೆಕ್ಟ್ರಿಷಿಯನ್ ಬೇಕಾಗಿದ್ದಾರೆ. ಉತ್ತಮ ಸಂಬಳ ESI ಹಾಗೂ PF ಕೊಡಲಾಗುವುದು. ತಕ್ಷಣ ಸಂಪರ್ಕಿಸಿ: ಹರೀಶ್
9663311557

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ [illegible] (ESI, PF ಸೌಲಭ್ಯ ಇರುತ್ತದೆ)
8050699742 / 7892480649

HOUSE FOR RENT OR LEASE
30x40 2BHK Ground Floor House for Rent or Lease in Ramakrishnanagar, 2nd Block, Mysuru. Contact:
9880845589

ವಧು ಬೇಕಾಗಿದೆ
[illegible]
6366125016

WALK IN INTERVIEW
FOR Science, Maths, Social and Hindi Teacher (B. A.B.Ed / B.Sc, B.Ed) Experienced or Freshers can walk in. English fluency is must. Security and Helpers (Family preferred) (Free Accomodation will be provided) Address- SLD EXCELLENT PUBLIC SCHOOL YELACHANAHALLI, KHB COLONY YELWALA.
9538787037 / 9036844557

30x50 ಸೈಟು @ Rs.25 ಲಕ್ಷ
ತಕ್ಷಣ ನೋಂದಣಿ /ಬ್ಯಾಂಕ್ ಲೋನ್ ಲಭ್ಯ, ತಕ್ಷಣ ಮನೆ ಕಟ್ಟಬಹುದು. ಮೈದನಹಳ್ಳಿಯ ಹತ್ತಿ, ಇಲವಾಲ, ಹುಣಸೂರು ರೋಡ್.
9538583377

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಶಾಲೆಗೆ
* KG Teacher
* ಆಯಾ (Ladies Only) ಹಾಗೂ
* ಶಾಲಾ ವಾಹನಕ್ಕೆ ಚಾಲಕರು ಬೇಕಾಗಿದ್ದಾರೆ
9108002966

ಕಳೆದಿದೆ
ಎಂ.ಸಿ.ಮಹಾದೇವಸ್ವಾಮಿ ರವರ ಅಂದಾಜು 125x115 ಅಡಿ ಅಳತೆಯ ಜಯಲಕ್ಷ್ಮೀಪುರಂ, ಮೈಸೂರು ಇಲ್ಲಿಯ ಸೈಟ್ ನಂ.88ರ ಮೂಲ ಹಂಚಿಕೆ ಪತ್ರ, ಸ್ವಾಧೀನ ಪತ್ರ ಹಾಗೂ ಹಕ್ಕುಪತ್ರ ಕಳೆದಿದ್ದು, ಸಿಕ್ಕಿದವರು ಸಂಪರ್ಕಿಸಿ.
9886069084

ಜಮೀನುಗಳು ಮಾರಾಟಕ್ಕಿವೆ
ಮೈಸೂರು & ನಂಜನಗೂಡು ತಾಲ್ಲೂಕಿನ ಸುತ್ತಮುತ್ತಲಿನಲ್ಲಿ ಜಮೀನು, ಫಾರ್ಮ್ ಜಮೀನುಗಳು ಮತ್ತು ಮುಡಾ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ.
9611320189

TEACHERS REQUIRED
A.K.ACADEMY
Bannimantap 'B' Layout, Mysore- 570015.
(English Medium) -2022-2023
1) High School: 1. B.Sc, B.Ed., (PCMB)
2) High School: B.A. B.Ed., (Hindi)
(Timing 10.30am to1.00pm) Contact:
8861977636

LODGE FOR RENT
"MOHITH LODGE"
Contact:
9845440343
L.Sanjeeva, #89/24, 88/23, C Block, Ananda Layout, Bogadi Ring Road, Mysuru

WANTED COMPUTER TEACHER
Qualification: Diploma in Computer Science
Seventh - day Adventist English High School, Thilaknagar, Mysore - 21, Contact:
9845965122

WANTED
Required ACCOUNTANT for CA Office. (2-3 Year Experience)
Mail resume to
lakshmikanthanmn@gmail.com

ಕೃಷಿ ಭೂಮಿ ಮಾರಾಟಕ್ಕಿದೆ
ನಂಜನಗೂಡು ತಾಲ್ಲೂಕು, ಹುಳಿಮಾವು ಗ್ರಾಮದಲ್ಲಿ 1 1/2 ಎಕರೆ ಕೃಷಿ ಭೂಮಿ ಮಾರಾಟಕ್ಕಿದೆ
9342183694

ಮನೆ ಮಾರಾಟಕ್ಕಿದೆ
ವಾಸಕ್ಕೆ ಯೋಗ್ಯವಾಗಿರುವ ಮುಡಾ ಮನೆ ಮಾರಾಟಕ್ಕೆ ಇದೆ. 17 ಲಕ್ಷ 11x30 ಪೂರ್ವ ದಿಕ್ಕು EWS - 124, ವಿಶ್ವರೂಪ ರಸ್ತೆ, 2ನೇ ಕ್ರಾಸ್, ಕುವೆಂಪುನಗರ ಪೊಲೀಸ್ ಠಾಣೆ ಮುಂಭಾಗ
9980031819

ರೆವಿನ್ಯೂ ಸೈಟ್ ಮಾರಾಟಕ್ಕಿದೆ
26x45
ಪೂರ್ವ * ದಕ್ಷಿಣ ದಿಕ್ಕು
ಲೋಕನಾಯಕನಗರ 1st Stage
9880490690
7019163398

WANTED IMMEDIATELY
MAROOR MOTORS
Authorized Distributor for Maruti Suzuki Genuine Parts Requires Counter Sales Executive, For our Mysore outlet. Qualification- ITI or PUC, Send Your CV to hrmaroor@gmail.com
7259026333

AFFORDABLE HOME LOAN
ಮುಡಾ, ಎ ಖಾತೆ, ನಗರಸಭೆ, ಪಂಚಾಯಿತಿ ಖಾತೆ 9 & 11ಎ ಖಾತೆ ಮನೆ ತೆಗೆದುಕೊಳ್ಳುವುದಕ್ಕೆ, ಕಟ್ಟುವುದಕ್ಕೆ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಪ್ಲಾಟ್ ಪರ್ಚೇಸ್, [illegible]
ಪ್ರಧಾನಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ ರೂ.2,67,000 ಸಬ್ಸಿಡಿ ದೊರೆಯುತ್ತದೆ. [illegible]
9148050015

ಶ್ರೀ ಕನ್ನಿಕಾ ಪರಮೇಶ್ವರಿ ಜ್ಯೋತಿಷ್ಯಾಲಯ
ಪಂಡಿತ್ ಭೀಮರಾವ್
Mob: 9972196728
[illegible]
ವಿಳಾಸ: 806, 3ನೇ ಹಂತ, ಅರಿವು ಆಸ್ಪತ್ರೆ ಹತ್ತಿರ, ಗೋಕುಲಂ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎನ್.ಕೃಷ್ಣಮೂರ್ತಿ
ಮೊ.: 9741806990
[illegible]

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ವಿಶ್ವನಾಥ ಶಾಸ್ತ್ರಿ
ಮೊ.: 9880583804
[illegible] (Divorce) [illegible] (Reliance Smart) [illegible] (KSRTC) [illegible] ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 8 ರಲ್ಲಿ

ಸಿದ್ದು–ಡಿಕೆಶಿ ಭಿನ್ನಾಭಿಪ್ರಾಯ ನಿವಾರಣೆ

ನಾನು, ಕೃಷ್ಣಭೈರೇಗೌಡ, ದಿನೇಶ್‌ಗುಂಡೂರಾವ್ ಮಾತುಕತೆ ಫಲಪ್ರದ: ಚಲುವರಾಯಸ್ವಾಮಿ



ಮಂಡ್ಯ,ಜೂ.8(ಮೋಹನ್‌ರಾಜ್)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಡುವೆ ಇದ್ದ ಸಣ್ಣ–ಪುಟ್ಟ ಭಿನ್ನಾಭಿಪ್ರಾಯ, ಮಾಧ್ಯಮಗಳಿಂದ ಸೃಷ್ಟಿಯಾಗಿದ್ದ ಊಹಾಪೋಹ ಮತ್ತು ಗೊಂದಲಗಳನ್ನು ನಾನು, ಕೃಷ್ಣಭೈರೇಗೌಡ ಹಾಗೂ ದಿನೇಶ್ ಗುಂಡೂರಾವ್ ಪರಸ್ಪರ ಮಾತುಕತೆ ಮೂಲಕ ಬಗೆಹರಿಸಿದ್ದು, ಮಾತುಕತೆ ಫಲಪ್ರದವಾಗಿದೆ ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಬುಧವಾರ ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಬ್ಬರ ನಡುವೆ ಸಣ್ಣಪುಟ್ಟ ಗೊಂದಲವಿತ್ತೇ ವಿನ: ಯಾವುದೇ ದೊಡ್ಡ ಮಟ್ಟದ ಭಿನ್ನಾಭಿಪ್ರಾಯದ ಸಮಸ್ಯೆ ಇರಲಿಲ್ಲ. ಆದರೆ ಮಾಧ್ಯಮಗಳು ಪದೇ ಪದೇ ಸಿದ್ದು, ಡಿಕೆಶಿ ನಡುವೆ ಗೊಂದಲವಿದೆ ಎಂದು ಸೃಷ್ಟಿ ಮಾಡುತ್ತಿದ್ದವು. ಆದ್ದರಿಂದ ನಾವೇ ಕುಳಿತು ಎಲ್ಲಾ ಸಮಸ್ಯೆ ಬಗೆಹರಿಸಿದ್ದೇವೆ ಎಂದರು.

ಮುಖ್ಯಮಂತ್ರಿ ಸ್ಥಾನದಿಂದ ಹೆಚ್.ಡಿ. ಕುಮಾರಸ್ವಾಮಿ ಅವರು ಕೆಳಗಿಳಿದ ಮೇಲೆ ಅಂದಿನಿಂದ ಹಿಂದಿನವರೆಗೂ ಜಾ.ದಳ ಬಿಜೆಪಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಬಂದಿದೆ. ಕಾಂಗ್ರೆಸ್ ಪಕ್ಷ ಕೋಮುವಾದಿಗಳಿಗೆ ಅವಕಾಶ ನೀಡಬಾರದು ಎನ್ನುವ ಕಾರಣಕ್ಕೆ ಕುಮಾರಸ್ವಾಮಿ ಅವರ ಮನೆಗೆ ತೆರಳಿ ಅಧಿಕಾರವನ್ನು ನೀಡಿತ್ತು. ಆದರೆ ಅವರು ಜಿಲ್ಲೆಯ ಅಭಿವೃದ್ಧಿ ಬಗ್ಗೆ ಗಮನಹರಿಸಿಲ್ಲ. ಅವರ ಸ್ವಯಂಕೃತ ಅಪರಾಧದಿಂದ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರು. ಅಂದಿನಿಂದ ಇಲ್ಲಿಯವರೆಗೂ ಅವರು ಬಿಜೆಪಿಯೊಂದಿಗೆ ಒಳ ಒಪ್ಪಂದ ಮಾಡಿಕೊಂಡು ಬಂದಿದ್ದಾರೆ ಎಂದು ತಿಳಿಸಿದರು.

ವಿಧಾನಪರಿಷತ್ ಸಭಾಪತಿ ಸ್ಥಾನ, ಮಂಡ್ಯ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನ ಹೀಗೆ ಹಲವು ವಿಚಾರಗಳಲ್ಲಿ ಜಾ.ದಳ ಒಳ ಒಪ್ಪಂದ ಮಾಡಿಕೊಂಡು ಬಂದಿದೆ. ತುಮಕೂರಿನಲ್ಲಿ ಮುದ್ದಹನುಮೇಗೌಡ ಅವರನ್ನು ಲೋಕಸಭಾ ಸ್ಪರ್ಧೆಗೆ ಇಳಿಯದಂತೆ ತಡೆದು ದೇವೇಗೌಡರಿಗೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ ಅವರು ಪರಾಭವಗೊಂಡರು. ನಂತರ ರಾಜ್ಯ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅವರಿಗೆ ಅಭ್ಯರ್ಥಿಯನ್ನು ಹಾಕದೆ ಅವಕಾಶ ಕಲ್ಪಿಸಿತ್ತು. ಈಗ ನಡೆಯುತ್ತಿರುವ ರಾಜ್ಯ ಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕಾಗಿತ್ತು. ಆದರೆ ಅವರೇ ಅಭ್ಯರ್ಥಿಯನ್ನು ಹಾಕಿದ್ದಾರೆಂದು ನುಡಿದರು.

ಮಧು ಮಾದೇಗೌಡರನ್ನು ಬೆಂಬಲಿಸಿ: ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು.ಜಿ.ಮಾದೇಗೌಡ ಅವರ ಗೆಲುವು ಶತಸಿದ್ಧ. ಈ ಬಾರಿ ಚುನಾವಣೆ ಪ್ರಬಲ ಪೈಪೋಟಿಯಿಂದ ಕೂಡಿದ್ದು, ಈ ಹಿಂದಿನ ಎಲ್ಲಾ ಚುನಾವಣೆಯನ್ನು ಮೀರಿದಂತೆ ಪ್ರಚಾರ ನಡೆಯುತ್ತಿದೆ. ಎಲ್ಲಾ ಪಕ್ಷದ ಪ್ರಮುಖ ನಾಯಕರು ತಮ್ಮ ಅಭ್ಯರ್ಥಿಗಳ ಗೆಲುವಿಗಾಗಿ ಶ್ರಮಿಸುತ್ತಿದ್ದಾರೆ ಎಂದು ನುಡಿದರು.

ಗಾಂಧಿವಾದಿ ಜಿ.ಮಾದೇಗೌಡರು ಚುನಾವಣೆಯಿಂದ ದೂರವುಳಿದು ನಾಡು–ನುಡಿ ನೆಲ–ಜಲ ಭಾಷೆ ವಿಚಾರವಾಗಿ ಹೋರಾಟ ನಡೆಸಿದ್ದಾರೆ. ಇವರ ಸಾಮಾಜಿಕ ಹೋರಾಟವನ್ನು ಜನತೆ ಗುರುತಿಸಿದ್ದಾರೆ. ಪಕ್ಷ ಮತ್ತು ಜಾತಿ ಮೀರಿ ಮಧು.ಜಿ. ಮಾದೇಗೌಡರಿಗೆ ಬೆಂಬಲ ವ್ಯಕ್ತವಾಗುತ್ತಿದೆ. ಹಾಗಾಗಿ ಈ ಬಾರಿ ಶೇ.100ಕ್ಕೆ ನೂರರಷ್ಟು ಗೆಲುವು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ 55 ಸಾವಿರ, ಮಂಡ್ಯದಲ್ಲಿ 47 ಸಾವಿರ, ಹಾಸನದಲ್ಲಿ 23 ಸಾವಿರ ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ 11 ಸಾವಿರ ಪದವೀಧರ ಮತದಾರರಿದ್ದು, ಮೈಸೂರು ಮತ್ತು ಮಂಡ್ಯದ ನಡುವೆ ಉತ್ತಮ ಹೊಂದಾಣಿಕೆ ಇದೆ. ಶಿಕ್ಷಕರ ಮತ್ತು ಪದವಿ ಕ್ಷೇತ್ರದಲ್ಲಿ ಹೊಂದಾಣಿಕೆ ಕಂಡು ಬಂದಿದ್ದು, ಹಾಗಾಗಿ ಮಧು ಅವರ ಗೆಲುವು ನಿಶ್ಚಿತ ಎಂದರು.

ಈಗಾಗಲೇ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಧೃವನಾರಾಯಣ್ ಸೇರಿದಂತೆ ಪಕ್ಷದ ಎಲ್ಲಾ ಹಾಲಿ ಮಾಜಿ ಶಾಸಕರು ಮುಖಂಡರು, ಕಾರ್ಯಕರ್ತರು ಪ್ರವಾಸ ಕೈಗೊಂಡು ಮಧು.ಜಿ.ಮಾದೇಗೌಡರ ಪರ ಪ್ರಚಾರ ಕೈಗೊಂಡಿದ್ದಾರೆ. ಅಲ್ಲದೆ ಈ ಬಾರಿ ಮಾದೇಗೌಡರಿಗಾಗಿ ಮಧು ಜಿ.ಮಾದೇಗೌಡರಿಗೆ ಮತ ಹಾಕುವ ಮೂಲಕ ಮಾದೇಗೌಡರನ್ನು ಗೌರವಿಸಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮಹಿಳಾ ಘಟಕದ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ಯುವ ಘಟಕದ ಜಿಲ್ಲಾಧ್ಯಕ್ಷ ವಿಜಯ್ ಕುಮಾರ್, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸುರೇಶ್‌ಕಂಠಿ, ಮುಖಂಡರಾದ ಡಾ.ಕೃಷ್ಣ, ಅಶೋಕ್, ರುದ್ರಪ್ಪ ಇತರರಿದ್ದರು.

ಹುಚ್ಚಲಗೆರೆ ಗ್ರಾಮದ ಯುವತಿ ನಾಪತ್ತೆ

ಮಂಡ್ಯ,ಜೂ.8– ಹುಚ್ಚಲಗೆರೆ ಗ್ರಾಮದ ಸುಷ್ಮಾ (22) ಜೂ.6ರಂದು ಮಂಡ್ಯಕ್ಕೆ ಹೋಗಿ ಬರುತ್ತೇನೆಂದು ಮನೆಯಲ್ಲಿ ಹೇಳಿ ಹೋದವರು ವಾಪಸ್ ಮನೆಗೆ ಬಾರದೆ ಕಾಣೆಯಾಗಿರುತ್ತಾರೆ ಎಂದು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾಣೆಯಾದ ಯುವತಿಯು 5 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧಾರಣ ಶರೀರ ಹೊಂದಿದ್ದು, ಕಾಣೆಯಾದ ದಿನದಂದು ಕಪ್ಪು ಬಣ್ಣದ ಚೂಡಿದಾರ್ ಮತ್ತು ಬಿಳಿ ಪ್ಯಾಂಟ್ ಧರಿಸಿರುತ್ತಾರೆ. ಸುಳಿವು ಸಿಕ್ಕಲ್ಲಿ ಮಂಡ್ಯ ಗ್ರಾಮಾಂತರ ಠಾಣೆ ದೂ. 08232–224200 ಅಥವಾ ಮೊ.9480804847 ಸಂಪರ್ಕಿಸಬಹುದೆಂದು ಮಂಡ್ಯ ಗ್ರಾಮಾಂತರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಜೂ.21, ಶ್ರೀರಂಗಪಟ್ಟಣದಲ್ಲಿ ಯೋಗ ದಿನಾಚರಣೆ

ಜೂ.18, ಮಂಡ್ಯದಲ್ಲಿ ಪೂರ್ವಾಭ್ಯಾಸ, ಯೋಗ ನಡಿಗೆ

ಮಂಡ್ಯ,ಜೂ.8– ಜಿಲ್ಲೆಯಲ್ಲಿ ಜೂನ್21 ರಂದು ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುತ್ತಿದ್ದು, ಸಕಲ ಸಿದ್ಧತೆಯನ್ನು ಮಾಡಿಕೊಳ್ಳಿ. ಹೆಚ್ಚಿನ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಯೋಗ ದಿನಾಚರಣೆ ಪ್ರಯುಕ್ತ ನಡೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜೂ.21 ರಂದು ಬೆಳಗ್ಗೆ 7 ಗಂಟೆಯಿಂದ ಜಿಲ್ಲಾ ಮಟ್ಟದ ಯೋಗ ಕಾರ್ಯಕ್ರಮ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ಆವರಣದಲ್ಲಿ 45 ನಿಮಿಷಗಳ ಕಾಲ ಕ್ರಿಯಾತ್ಮಕ ಯೋಗಾಭ್ಯಾಸ ಮಾಡುವ ಮೂಲಕ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಗುವುದು ಎಂದರು.



ಯೋಗ ದಿನಾಚರಣೆಯಲ್ಲಿ ಭಾಗವಹಿಸುವಂತಹ ಎಲ್ಲಾ ಯೋಗಪಟುಗಳಿಗೆ ಯೋಗ ಮಾಡಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಿ ಹಾಗೂ ಪಾರ್ಕಿಂಗ್ ವ್ಯವಸ್ಥೆ, ಉಪಹಾರದ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ, ವೈದ್ಯಕೀಯ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಿ ಎಂದರು.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜೂ.18 ರಂದು ಯೋಗಪಟುಗಳ ಸಮ್ಮುಖದಲ್ಲಿ ಪೂರ್ವಾಭ್ಯಾಸ ಮಾಡಿ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಜಾಥಾ (ಯೋಗ ನಡಿಗೆ) ಕಾರ್ಯಕ್ರಮವನ್ನು ನಡೆಯುತ್ತದೆ ಎಂದರು. ಯೋಗ ಸಂಸ್ಥೆಗಳು, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸಂಚಾಲಕರು ಜಿಲ್ಲಾ ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ಘಟಕ, ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಆಯುಷ್ ಯೋಗ ತರಬೇತುದಾರರು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸೇರಿದಂತೆ ಯೋಗ ತರಬೇತುದಾರರು ಇತರರು ಸಾಮೂಹಿಕ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳಿ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ವಿ.ಆರ್. ಶೈಲಜ, ಪಾಂಡವಪುರ ಉಪ ವಿಭಾಗಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಸಂಜಯ್, ಆಯುರ್ವೇದ ವೈದ್ಯಾಧಿಕಾರಿ ಡಾ.ಪುಷ್ಪಾ, ರೆಡ್ ಕ್ರಾಸ್ ಉಪಾಧ್ಯಕ್ಷ ಮೀರಾ ಶಿವಲಿಂಗಯ್ಯ, ಯೋಗ ಶಿಕ್ಷಕರುಗಳಾದ ಶಿವರುದ್ರಸ್ವಾಮಿ, ಶಾಂತ ನಾರಾಯಣ ಶಾಸ್ತ್ರಿ, ಸಾವಿತ್ರಿ, ಸರಸನಂದನ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಇಂದು ಸಾರ್ವಜನಿಕ ದೂರು ಸ್ವೀಕಾರ

ಮಂಡ್ಯ,ಜೂ.8– ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ ವತಿಯಿಂದ ಜೂ.9 ರಂದು ತಾಲೂಕಿನ ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸ ನಿರ್ವಹಣೆಯಲ್ಲಿ ಅನಧಿಕೃತ ವಿಳಂಬ ಹಣಕ್ಕಾಗಿ ಬೇಡಿಕೆ ಮಾಡುತ್ತಿರುವ ಸರ್ಕಾರಿ ನೌಕರರ ವಿರುದ್ಧ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಮತ್ತು ದೂರನ್ನು ಸ್ವೀಕಾರ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಮಂಡ್ಯ ಟೌನ್ ಕಚೇರಿಯಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮದ್ದೂರು ಟೌನ್ ಕಚೇರಿಯಲ್ಲಿ ಮಧ್ಯಾಹ್ನ 3 ರಿಂದ ಸಂಜೆ 4–30 ಗಂಟೆಯವರೆಗೆ ದೂರನ್ನು ಸ್ವೀಕರಿಸಲಾಗುವುದು.

ಸಾರ್ವಜನಿಕ ದೂರುಗಳಿದ್ದಲ್ಲಿ ಮೊ.ಸಂ.9480806224, 9480806279, 9480806280 ಅಥವಾ ದೂ.ಸಂ. 08232–221230 ಸಂಪರ್ಕಿಸಬಹುದೆಂದು ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ಉಪ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೀಟಿ ಬಿಡ್‌ದಾರನಿಗೆ 2 ಲಕ್ಷ ಪರಿಹಾರಕ್ಕೆ ಗ್ರಾಹಕ ಪರಿಹಾರ ವೇದಿಕೆ ಆದೇಶ

ಚಾಮರಾಜನಗರ, ಜೂ.8–ಚೀಟಿ ಬಿಡ್ ಮಾಡಿದ ಗ್ರಾಹಕನಿಗೆ ಹಣ ನೀಡದೇ ಬೇನಾಮಿ ಹೆಸರಿನಲ್ಲಿ ಚೀಟಿ ಹಣ ಪಡೆದು ವಂಚಿಸಿದ ಆರೋಪದ ಮೇರೆಗೆ ಶ್ರೀರಾಂ ಚಿಟ್ ಫಂಡ್ಸ್ ಚಾಮರಾಜನಗರ ಶಾಖೆಯು ಗ್ರಾಹಕನಿಗೆ 2 ಲಕ್ಷ ರೂ. ಪರಿಹಾರ ನೀಡಬೇಕೆಂದು ಚಾಮರಾಜನಗರ ಜಿಲ್ಲಾ ಗ್ರಾಹಕರ ಆಯೋಗ ತೀರ್ಪು ನೀಡಿದೆ.

ಅದು ಮಾತ್ರವಲ್ಲದೆ ಗ್ರಾಹಕ ಪಾವತಿಸಿದ್ದ 95 ಸಾವಿರ ರೂ.ಗಳಿಗೆ 1,50,750 ರೂ.ಗಳಂತೆ ವಾರ್ಷಿಕ ಶೇ.12ರಷ್ಟು ಬಡ್ಡಿಯೊಂದಿಗೆ ಪಾವತಿಸಬೇಕು ಹಾಗೂ 55,700 ರೂ.ಗಳಿಗೆ 2016ರ ಮೇ 28ಕ್ಕೆ ಅನ್ವಯವಾಗುವಂತೆ ವಾರ್ಷಿಕ ಶೇ.12ರಷ್ಟು ಬಡ್ಡಿಯೊಂದಿಗೆ ಪಾವತಿಸಬೇಕು. ನ್ಯಾಯಾಲಯದ ವೆಚ್ಚ 15 ಸಾವಿರ ರೂ.ಗಳನ್ನು ಗ್ರಾಹಕನಿಗೆ ಪಾವತಿಸುವ ಜೊತೆಗೆ ಗ್ರಾಹಕರ ಕಲ್ಯಾಣ ನಿಧಿಗೆ 5 ಸಾವಿರ ರೂ. ಪಾವತಿಸಬೇಕು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ವಿವರ: ಮೈಸೂರಿನ ಅಗ್ರಹಾರ ನಿವಾಸಿ ನಾಗರಾಜ್ ಎಂಬವರು 2013ರ ಜನವರಿ 21ರಂದು ಚಾಮರಾಜನಗರ ಶ್ರೀರಾಂ ಚಿಟ್ ಫಂಡ್ಸ್‌ನಲ್ಲಿ 5 ಲಕ್ಷ ರೂ.ಗಳ ಚೀಟಿ ಹಾಕಿದ್ದರು. ಅವರು 11 ಕಂತುಗಳನ್ನು ಪಾವತಿಸಿದ ನಂತರ ಚೀಟಿಯನ್ನು 1.50 ಲಕ್ಷ ರೂ.ಗಳಿಗೆ 2013ರ ಜುಲೈ 10ರಂದು ಬಿಡ್ ಮಾಡಿದ್ದರು. ಆದರೆ ಚಿಟ್ ಫಂಡ್‌ನವರು ಅವರಿಗೆ ಹಣವನ್ನು ಪಾವತಿಸದೇ ಬೇನಾಮಿ ಹೆಸರಿನಲ್ಲಿ ತಾವೇ ಹಣ ಪಡೆದಿದ್ದರು. ಈ ಸಂಬಂಧ ನಾಗರಾಜ್ ಹಲವಾರು ಬಾರಿ ಚಿಟ್ ಫಂಡ್‌ಗೆ ನೋಟಿಸ್‌ಗಳನ್ನು ಕಳುಹಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೊನೆಗೆ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ಪಡೆದಾಗ ಬಿಡ್ ಅನ್ನು ಬೇನಾಮಿ ಹೆಸರಿನಲ್ಲಿ ಚಿಟ್ ಫಂಡ್‌ನವರೇ ಪಡೆದಿರುವುದು ಗೊತ್ತಾಗಿದೆ. ಈ ಸಂಬಂಧ ಅವರು 2016ರ ಜೂನ್ 6ರಂದು ಚಾಮರಾಜನಗರ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ್ದರು. ಕೊನೆಗೆ ಅವರು 2018ರ ಮೇ 25ರಂದು ಜಿಲ್ಲಾ ಗ್ರಾಹಕರ ಆಯೋಗದಲ್ಲಿ ಪ್ರಕರಣ ದಾಖಲಿಸಿದ್ದರು. 3 ವರ್ಷ, 11 ತಿಂಗಳು, 11 ದಿನ ಸುದೀರ್ಘ ವಿಚಾರಣೆ ನಡೆಸಿದ ಗ್ರಾಹಕ ವೇದಿಕೆಯ ಅಧ್ಯಕ್ಷೆ ಎ.ಕೆ.ನವೀನ್ ಕುಮಾರಿ ಸದಸ್ಯರಾದ ಹೆಚ್.ಎನ್.ಶ್ರೀನಿಧಿ ಮತ್ತು ಎಂ.ವಿ.ಭಾರತಿ ಅವರು, ಗ್ರಾಹಕನಿಗೆ ಪರಿಹಾರ ನೀಡುವಂತೆ ಶ್ರೀರಾಂ ಚಿಟ್ ಫಂಡ್‌ಗೆ ಆದೇಶ ನೀಡಿದ್ದಾರೆ.




ದಕ್ಷಿಣ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ಪರವಾಗಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕೊಳ್ಳೇಗಾಲದಲ್ಲಿ ಮತ ಯಾಚಿಸಿದರು. ಈ ಸಂದರ್ಭದಲ್ಲಿ ವಿ.ಸೋಮಣ್ಣ, ಗೊಂಡಶೆಟ್ಟಿ, ರವೀಂದ್ರ ಚಿಕ್ಕಮರೀಗೌಡ, ಶ್ರೀರಾಂಪುರ ರಮೇಶ್, ಟ್ಯೂಬ್ ಮಹದೇವ್, ನಾಗಣ್ಣ ಹಾಜರಿದ್ದರು.

ಚಾ.ನಗರ ವಿವಿಧೆಡೆ ಸಚಿವ ವಿ.ಸೋಮಣ್ಣ ಮತಯಾಚನೆ

ಚಾಮರಾಜನಗರ, ಜೂ.8(ಎಸ್‌ಎಸ್)– ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಬುಧವಾರ ನಗರದ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ತೆರಳಿ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿ ಶಂಕರ್ ಪರ ಮತಯಾಚಿಸಿದರು.

ಮೈಸೂರಿನಿಂದ ಬುಧವಾರ ನಗರಕ್ಕೆ ಆಗಮಿಸಿದ ಅವರು, ಮೊದಲಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ತೆರಳಿ ಮತದಾರರನ್ನು ಭೇಟಿ ಮಾಡಿ ಮತಯಾಚಿಸಿದರು. ನಂತರ ಮರಿಯಾಲದಲ್ಲಿರುವ ಶ್ರೀ ಮುರುಘ ರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆ, ಸರ್ಕಾರಿ ಮಹಿಳಾ ಕಾಲೇಜು, ಪದವಿ ಕಾಲೇಜು, ಸಿದ್ಧಾರ್ಥ ಕಾಲೇಜು ಸೇರಿದಂತೆ ವಿವಿಧ ಕಾಲೇಜಿಗೆ ತೆರಳಿ ಮತ ಪ್ರಚಾರ ಮಾಡಿದರು.

ಈ ವೇಳೆ ಮಾತನಾಡಿದ ವಿ.ಸೋಮಣ್ಣ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರದಲ್ಲಿ ಒಂದೇ ಒಂದು ಹಗರಣವೂ ಸಹ ಇಲ್ಲ. ದೇಶ, ರಾಜ್ಯ ಹಾಗೂ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಬಿಜೆಪಿಗೆ ತಮ್ಮೆಲ್ಲರ ಪ್ರಥಮ ಪ್ರಾಶಸ್ತ್ಯದ ಮತ ನೀಡಬೇಕು ಎಂದು ವಿನಂತಿಸಿದರು.



ಶಾಸಕ ಎನ್.ಮಹೇಶ್, ಮಾಜಿ ಶಾಸಕ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ನಾಗಶ್ರೀ ಪ್ರತಾಪ್, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಮುಖಂಡರಾದ ಅಮ್ಮನಪುರ ಮಲ್ಲೇಶ್, ಹನುಮಂತಶೆಟ್ಟಿ, ಅಮ್ಮನಪುರ ಶಿವಕುಮಾರ್, ಡಾ.ಎ.ಆರ್.ಬಾಬು, ಆಲೂರು ನಟರಾಜು, ಶಿವಪುರ ಸುರೇಶ್, ಜಿಲ್ಲಾ ಮಾಧ್ಯಮ ಪ್ರಮುಖ್ ಮಂಜುನಾಥ್ ಇತರರಿದ್ದರು.

ವಿಜಯೇಂದ್ರಗೂ–ನನಗೂ ಹೋಲಿಕೆ ಸಲ್ಲದು

ಚಾಮರಾಜನಗರ: ನನಗೆ 71 ವರ್ಷ, ವಿಜಯೇಂದ್ರಗೆ 46 ವರ್ಷ. ವಿಜಯೇಂದ್ರನೊಂದಿಗೆ ನನ್ನನ್ನು ಹೋಲಿಸಬೇಡಿ ಎಂದು ವಸತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ ಹೇಳಿದರು.


ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ ನಿಮಿತ್ತ ಮತಯಾಚಿಸಲು ನಗರಕ್ಕೆ ಆಗಮಿಸಿದ್ದ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ತಮ್ಮ(ಸೋಮಣ್ಣ) ಎದುರು ಬಿಜೆಪಿ ರಾಜ್ಯ ಉಪಾಧ್ಯಕ್ಷ ವಿಜಯೇಂದ್ರ ಮುಂದಿನ ಮುಖ್ಯಮಂತ್ರಿ ಎಂದು ಮೈಸೂರಿನಲ್ಲಿ ಘೋಷಣೆ ಕೂಗಿರುವ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಚಿವರು, 'ಘೋಷಣೆ ಕೂಗಿರುವುದು ನಿನ್ನೆಗೆ ಮುಗಿದ ಅಧ್ಯಾಯ. 2023ಕ್ಕೆ ಚುನಾವಣೆ ಬರುತ್ತದೆ. ಹೈಕಮಾಂಡ್ ಟಿಕೆಟ್ ಕೊಡಬೇಕು. ಯಾರ‍್ಯಾರ ಹಣೆಬರಹ ಏನಿದೆಯೋ ಅದು ಆಗುತ್ತದೆ. ನನಗೆ ಈಗ 71 ವರ್ಷ, ವಿಜಯೇಂದ್ರಗೆ 46 ವರ್ಷ. ನನಗೂ ಅವರಿಗೂ ಹೋಲಿಸಬೇಡಿ. ನಾನು 7 ಬಾರಿ ಆಯ್ಕೆ ಆಗಿದ್ದೇನೆ. ಅವರು(ವಿಜಯೇಂದ್ರ) ಒಂದೂ ಬಾರಿಯೂ ಆಯ್ಕೆ ಆಗಿಲ್ಲ. ಒಂದು ಬಾರಿಯಾದರೂ ಚುನಾವಣೆಯಲ್ಲಿ ಗೆಲ್ಲಲಿ ಬಿಡಿ' ಎಂದರು.

ಸಚಿವರ ಭರವಸೆ ಮೇರೆಗೆ ಅನಿರ್ದಿಷ್ಟಾವಧಿ ಧರಣಿ ಕೈಬಿಟ್ಟ ರೈತರು

ಚಾಮರಾಜನಗರ, ಜೂ.8(ಎಸ್‌ಎಸ್)–ತಾಲೂಕಿನ ಆನೆಮಡುವಿನ ಕೆರೆಗೆ ಉಡಿಗಾಲ ಗ್ರಾಮದ ಚಿಕ್ಕಮೋರಿ ಕಾಲುವೆ ಮೂಲಕ ನೀರು ತುಂಬಿಸುವಂತೆ ಒತ್ತಾಯಿಸಿ ಆ ಭಾಗದ ರೈತರು ಜಿಲ್ಲಾಡಳಿತ ಭವನದ ಎದುರು ನಡೆಸುತ್ತಿದ್ದ ಅನಿರ್ದಿಷ್ಟಾವಧಿ ಧರಣಿಯನ್ನು ಸಚಿವ ವಿ.ಸೋಮಣ್ಣ ಅವರ ಭರವಸೆ ಮೇರೆಗೆ ತಾತ್ಕಾಲಿಕವಾಗಿ ಹಿಂಪಡೆದಲ್ಲದೆ, ಸರ್ಕಾರದ ಗಮನ ಸೆಳೆಯಲು ಗ್ರಾಮದಲ್ಲೇ ಧರಣಿ ನಡೆಸಲು ನಿರ್ಧರಿಸಿ, ತೆರಳಿದರು.

ದಕ್ಷಿಣ ಪದವೀಧರ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಅಭ್ಯರ್ಥಿ ಪರ ಮತಯಾಚನೆಗೆ ನಗರಕ್ಕೆ ಆಗಮಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವರು, ಧರಣಿ ಸ್ಥಳಕ್ಕೆ ಭೇಟಿ ನೀಡಿ ರೈತರ ಮನವಿ ಆಲಿಸಿದರು. ಉಡಿಗಾಲ ಗ್ರಾಮಕ್ಕೆ ಅಧಿಕಾರಿಗಳು ಕರೆದುಕೊಂಡು ಬಂದು ಸಭೆ ನಡೆಸಿ ಸಮಸ್ಯೆ ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದರು. ಇದರಿಂದ ರೈತರು ಧರಣಿ ಕೈಬಿಟ್ಟರು. ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಷಡಕ್ಷರಿ, ಉಪಾಧ್ಯಕ್ಷ ಗುರುಪ್ರಸಾದ್, ವಕೀಲರಾದ ನಾಗರಾಜು, ಪೃಥ್ವಿ, ಎ.ರಮೇಶ್ ಮುಖಂಡರಾದ ಪಟೇಲ್ ಶಿವಮೂರ್ತಿ, ಹಾಲಿನ ನಾಗರಾಜು, ಕುರುಬೂರು ಮಂಜು ಹೆಗ್ಗೊಠಾರ ಶಿವಸ್ವಾಮಿ ಇತರರು ಧರಣಿಯಲ್ಲಿದ್ದರು.

ಚಾಮುಲ್ ಚುನಾವಣೆ; ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ



ಗುಂಡ್ಲುಪೇಟೆ, ಜೂ.8(ಸೋಮ್.ಜಿ)–ಇದೇ ತಿಂಗಳ 14ರಂದು ನಡೆಯಲಿರುವ ಚಾಮರಾಜನಗರ ಹಾಲು ಒಕ್ಕೂಟದ ಆಡಳಿತ ಮಂಡಳಿಯ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಶಾಸಕ ಸಿ.ಎಸ್.ನಿರಂಜನ ಕುಮಾರ್ ಬಿರುಸಿನ ಪ್ರಚಾರ ನಡೆಸಿದರು.

ತಾಲೂಕಿನ ಕೆಬ್ಬೇಪುರ ವಿವಿಧ ನಲವತ್ತಕ್ಕೂ ಹೆಚ್ಚು ಗ್ರಾಮಗಳ ಹಾಲು ಉತ್ಪಾದಕ ಪ್ರತಿನಿಧಿಗಳನ್ನು ಭೇಟಿಯಾಗಿ ಮತಯಾಚಿಸಿದ ಶಾಸಕರು, ರೈತರ ಬಗ್ಗೆ ಕಾಳಜಿ ಹೊಂದಿರುವ ಬಿಜೆಪಿ ಸರ್ಕಾರ ಹತ್ತು ಹಲವು ಕಾರ್ಯಕ್ರಮವನ್ನು ರೈತರಿಗಾಗಿ ಜಾರಿಗೊಳಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅಭ್ಯರ್ಥಿಗಳಿಗೆ ಮತ ನೀಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಈ ವೇಳೆ ಅಭ್ಯರ್ಥಿಗಳಾದ ಸ್ವಾಮಿ, ಸುಜೇಂದ್ರ, ಮುಖಂಡರಾದ ಮಂಗಲ ನಾಗರಾಜು, ಪ್ರಣಯ್, ಮಂಜ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿದ್ದರು.

ಪರಿಸರವಾದಿಗಳ ದ್ವಂದ್ವ ನಿಲುವಿನಿಂದ ಕೊಡಗಿನ ಜನತೆಗೆ ತೊಂದರೆ

ಸಾಮಾಜಿಕ ಕಾರ್ಯಕರ್ತ ಚೇರಂಡ ನಂದ ಸುಬ್ಬಯ್ಯ ಆರೋಪ



ಮಡಿಕೇರಿ,ಜೂ.8– ಪರಿಸರವಾದಿಗಳ ದ್ವಂದ್ವ ನಿಲುವಿನಿಂದ ಕೊಡಗಿನ ಜನತೆಗೆ ತೊಂದರೆಯಾಗುತ್ತಿದ್ದು, ಪರಿಸರ ರಕ್ಷಣೆಯ ಜೊತೆಗೆ ಅಭಿವೃದ್ಧಿ ಕೆಲಸಗಳು ನಡೆಯುವಂತಾಗಬೇಕು ಎಂದು ಸಾಮಾಜಿಕ ಕಾರ್ಯಕರ್ತ ಚೇರಂಡ ನಂದ ಸುಬ್ಬಯ್ಯ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿವೃತ್ತ ಕರ್ನಲ್ ಸಿ.ಪಿ. ಮುತ್ತಣ್ಣ ಅವರ ತೋಟದಲ್ಲಿ ನಿಯಮಬದ್ಧವಾಗಿ ಕೆಲವು ಮರಗಳನ್ನು ಕಡಿಯಲಾಗಿದೆ. ಯಾವುದೇ ಅಕ್ರಮ ಮಾಡಿಲ್ಲ ಎಂದು ಸಮರ್ಥಿಸಿಕೊಂಡಿದ್ದು, ಇದಕ್ಕೆ ನಮ್ಮ ಆಕ್ಷೇಪಗಳು ಇಲ್ಲ. ಆದರೆ, ಇತರರು ತಮ್ಮ ಅಗತ್ಯಕ್ಕೆ ತಮ್ಮ ತೋಟದಲ್ಲಿ ಮರಗಳನ್ನು ಕಡಿಯುವ ವೇಳೆಯಲ್ಲಿ ಆಕ್ಷೇಪ ವ್ಯಕ್ತಪಡಿಸುವ ಮೂಲಕ ದ್ವಂದ್ವ ನೀತಿ ಅನುಸರಿಸುವುದು ಸರಿಯಾದ ಕ್ರಮವಲ್ಲ ಎಂದರು.

400 ಕೆ.ವಿ ವಿದ್ಯುತ್ ಲೈನ್ ಸಂಪರ್ಕ ಕಲ್ಪಿಸುವ ವಿಚಾರದಲ್ಲಿ ತಾನು ಕಾರ್ಪೊರೇಷನ್ ಏಜಂಟರಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಆರೋಪ ಮಾಡಿರುವ ಕರ್ನಲ್ ಮುತ್ತಣ್ಣ ಅವರು, ದಾಖಲೆಗಳು ಇದ್ದರೆ ಒದಗಿಸಲಿ, ನಾನು ಈ ರೀತಿ ಪ್ರಚಾರ ಮಾಡಿ ಯಾರಿಗಾದರೂ ಪರಿಹಾರ ಮೊತ್ತ ಸಿಗಲಿಲ್ಲ ಎಂದಾದರೆ ಈ ಬಗ್ಗೆ ಮಾಹಿತಿ ನೀಡಲಿ. ನಾವು ಮಾಡಿರುವ ಆರೋಪಗಳಿಗೆಲ್ಲದಕ್ಕೂ ನಮ್ಮ ಬಳಿ ದಾಖಲೆಗಳಿವೆ. ಬೇಕಿದ್ದರೆ ಅವರು ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ದಕ್ಷಿಣ ಕೊಡಗಿನ ಬಹುಪಾಲು ಮುಳುಗಡೆಯಾಗುವ ಬರಪೊಳೆ ಯೋಜನೆ ಕರ್ನಲ್ ಮುತ್ತಣ್ಣ ಅವರ ತಂದೆ ಅಂದಿನ ಕೊಡಗು ಸಿ.ರಾಜ್ಯದ ಮುಖ್ಯಮಂತ್ರಿ ಸಿ.ಎಂ. ಪೂಣಚ್ಚ ಅವರು ಶಂಕುಸ್ಥಾಪನೆ ನೆರವೇರಿಸಿದ್ದು, ಅವರ ವಿರುದ್ಧದ ಹೇಳಿಕೆ ನೀಡುವುದು ಸರಿಯಾದ ಕ್ರಮವಲ್ಲ ಎಂದ ನಂದಾ ಸುಬ್ಬಯ್ಯ, ಕರ್ನಲ್ ಮುತ್ತಣ್ಣ ಬರಪೊಳೆ ಇತಿಹಾಸವನ್ನು ಅಧ್ಯಯನ ಮಾಡಿ ವಿಷಯ ತಿಳಿದುಕೊಳ್ಳಲಿ ಎಂದು ಸಲಹೆ ನೀಡಿದರು.

ಕೊಡಗಿಗೆ ರೈಲು ಬೇಡ, ಚತುಷ್ಪಥ ರಸ್ತೆ ಬೇಡ, ಭೂ ಪರಿವರ್ತನೆ ಬೇಡ ಎಂದು ಹೇಳಲು ಇವರಿಗೆ ಕೊಡಗು ಜಿಲ್ಲೆಯ ಗುತ್ತಿಗೆಯನ್ನು ನೀಡಿದವರು ಯಾರು ಎಂದು ಪ್ರಶ್ನಿಸಿದ ಅವರು, ಯಾವುದೇ ಯೋಜನೆಗಳು ಬೇಕು ಎನ್ನುವ ಮೊದಲು ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಬೇಕು. ಬೆರಳೆಣಿಕೆಯಷ್ಟು ಮಂದಿ ತಮ್ಮ ಅಭಿಪ್ರಾಯವನ್ನು ಇತರರ ಮೇಲೆ ಹೇರುವುದು ಸರಿಯಲ್ಲ ಎಂದರು.

ಮತ್ತೋರ್ವ ಸಾಮಾಜಿಕ ಕಾರ್ಯಕರ್ತ ಕೀಪಾಡಂಡ ಮಧು ಬೋಪಣ್ಣ ಮಾತನಾಡಿ, ವನ್ಯ ಪ್ರಾಣಿಗಳ ಮೇಲೆ ಪ್ರೀತಿ ಇರುವವರಿಗೆ ಪರಿಸರದ ಮೇಲೆ ಪ್ರೀತಿ ಇಲ್ಲ. ಅಭಿವೃದ್ಧಿ ದೃಷ್ಟಿಯಿಂದ ರಸ್ತೆ ಬದಿಗಳ ಮರಗಳನ್ನು ತೆರವುಗೊಳಿಸುವುದನ್ನು ಪರಿಸರ ನಾಶ ಎಂದು ಹೇಳುವವರು ತಮ್ಮ ತೋಟದಲ್ಲಿ ಮರಗಳನ್ನು ಕಡಿಯುವಾಗ ಪರಿಸರದ ಬಗ್ಗೆ ಕಾಳಜಿ ಯಾಕಿರಲಿಲ್ಲ ಎಂದು ಪ್ರಶ್ನಿಸಿದರು.

ಸಾಮಾಜಿಕ ಕಾರ್ಯಕರ್ತ ರಮೇಶ್ ಮುದ್ದಯ್ಯ ಮಾತನಾಡಿ, ಇಂದು ಭತ್ತದ ಗದ್ದೆಗಳು ರೆಸಾರ್ಟ್‌ಗಳಾಗಿ ಮಾರ್ಪಟ್ಟಿದ್ದು, ಈ ಬಗ್ಗೆ ಪ್ರಶ್ನಿಸಲು ಯಾರು ಇಲ್ಲ. ಪರಿಸರವಾದಿಗಳ ನಿಲುವುಗಳಿಂದ ಕೊಡಗಿನ ಜನತೆ ಸರ್ಕಾರಿ ಸೌಲಭ್ಯ, ಹಕ್ಕು ಪತ್ರಗಳಿಂದ ವಂಚಿತರಾಗಿದ್ದಾರೆ ಎಂದು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸಾಮಾಜಿಕ ಕಾರ್ಯಕರ್ತರಾದ ಪೊನ್ನಚ್ಚಂಡ ಬೆಳ್ಯಪ್ಪ, ಮುಕ್ಕಾಟೀರ ನಂಜಪ್ಪ, ನಾಪಂಡ ರ‍್ಯಾಲಿ ಉಪಸ್ಥಿತರಿದ್ದರು.

ಹೈಕೋರ್ಟ್ ನ್ಯಾಯಮೂರ್ತಿಯಾಗಿ ಸಿ.ಎಂ.ಪೂಣಚ್ಚ ನೇಮಕ

ಬೆಂಗಳೂರು, ಜೂ.8– ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ವಕೀಲ ಸಿ.ಎಂ.ಪೂಣಚ್ಚ ಅವರು ನೇಮಕಗೊಂಡಿದ್ದಾರೆ. ಈ ಕುರಿತಂತೆ



ರಾಷ್ಟ್ರಪತಿಗಳ ಆದೇಶದಂತೆ ಕಾನೂನು ಮತ್ತು ನ್ಯಾಯ ಸಚಿವಾಲಯ ಅಧಿಸೂಚನೆ ಹೊರಡಿಸಿದೆ. ಎರಡು ವರ್ಷಗಳ ಅವಧಿಗೆ ಪೂಣಚ್ಚ ಅವರನ್ನು ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕ ಮಾಡಲಾಗಿದೆ. ಎರಡು ವರ್ಷಗಳ ಪ್ರೊಬೇಷನರಿ ಅವಧಿ ನಂತರ ಅವರ ಸೇವೆ ಖಾಯಂ ಆಗಲಿದೆ.

ಸುಮಾರು 20 ವರ್ಷಕ್ಕೂ ಅಧಿಕ ವಕೀಲಿಕೆ ಅನುಭವವನ್ನು ಹೊಂದಿರುವ ಅವರ ಹೆಸರನ್ನು ನ್ಯಾಯಮೂರ್ತಿ ಹುದ್ದೆಗೆ ಹಿಂದಿನ ಸಿಜೆ ಎ.ಎಸ್. ಓಕ್ ನೇತೃತ್ವದ ಕೊಲಿಜಿಯಂ ಶಿಫಾರಸು ಮಾಡಿ ಸುಪ್ರೀಂಕೋರ್ಟ್‌ಗೆ ಕಳುಹಿಸಿತ್ತು.

ನಂತರ ಸುಪ್ರೀಂಕೋರ್ಟ್‌ನ ಕೊಲಿಜಿಯಂ ಪೂಣಚ್ಚ ಅವರ ಹೆಸರನ್ನು ನ್ಯಾಯಮೂರ್ತಿ ಹುದ್ದೆಗೆ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಇದೀಗ ಎಲ್ಲ ಪ್ರಕ್ರಿಯೆಗಳು ಮುಗಿದು ಅವರನ್ನು ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಲಾಗಿದೆ.

ನೆಲ್ಯಹುದಿಕೇರಿಯಲ್ಲಿ ಗ್ರಾಮೀಣ ಕ್ರೀಡಾ ಹಬ್ಬದ ಸಂಭ್ರಮ

ಅಂಗನವಾಡಿ ವಾರ್ಷಿಕೋತ್ಸವದ ಅಂಗವಾಗಿ ಸಾಧಕರಿಗೆ ಸನ್ಮಾನ



ಸಿದ್ದಾಪುರ, ಜೂ.8– ಅಂಗನವಾಡಿ ಕೇಂದ್ರದ ವಾರ್ಷಿಕೋತ್ಸವದ ಅಂಗವಾಗಿ ನಡೆದ ಗ್ರಾಮೀಣ ಕ್ರೀಡಾಹಬ್ಬ ವಿವಿಧ ಕಾರ್ಯಕ್ರಮಗಳೊಂದಿಗೆ ಸಡಗರದಿಂದ ನೆಲ್ಯಹುದಿಕೇರಿ ಕುಂಬಾರಗುಂಡಿಯ ಅವರಣದಲ್ಲಿ ನಡೆಯಿತು .

ನೆಲ್ಯಹುದಿಕೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಾಬು ವರ್ಗಿಸ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಅ ಎಂಬ ಮೊದಲ ಅಕ್ಷರ ಕಲಿಯಲು ಗ್ರಾಮೀಣ ಭಾಗದಲ್ಲಿ ತೆರೆದ ಅಂಗನವಾಡಿ ಕೇಂದ್ರದಲ್ಲಿ ಕಲಿತ ಅಂದಿನ ಪುಟಾಣಿ ಮಕ್ಕಳು ಇಂದು ವಿವಿಧ ಹುದ್ದೆಗಳಲ್ಲಿ ಮುನ್ನಡೆಯುತ್ತಿದ್ದಾರೆ. ಅಕ್ಷರ ಕಲಿತ ಅಂಗನವಾಡಿ ಕೇಂದ್ರದ ವಾರ್ಷಿಕೋತ್ಸವವನ್ನು ಹಳೆ ವಿದ್ಯಾರ್ಥಿಗಳು ಹಾಗೂ ಊರಿನ ಪೋಷಕರೆಲ್ಲರೂ ಒಂದಾಗಿ ಸೇರಿ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ವಾರ್ಷಿಕೋತ್ಸವವ ಆಚರಿಸಲಾಗುತ್ತಿದೆ ಎಂದರು

ಹದಿನೈದು ವರ್ಷಗಳ ಹಿಂದೆ ರಾಂಬೋ ಸಂಘದ ಕಟ್ಟಡದಲ್ಲಿ ನಡೆಯುತ್ತಿದ್ದ ಅಂಗನವಾಡಿ ಕೇಂದ್ರ. ಇದೀಗ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಯೋಜನೆಗಳ ಮೂಲಕ ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ಅಂಗನವಾಡಿ ಕಟ್ಟಡ ಉದ್ಘಾಟನೆಗೊಂಡಿದೆ ಎಂದರು.

ಅಂಗನವಾಡಿ ಬಾಲವಿಕಾಸ ಸಮಿತಿಯ ಸದಸ್ಯೆ ಗ್ರೇಸಿ ಮಣಿ ಮಾತನಾಡಿ, ಮ್ಯೂಸಿಕಲ್ ಚೇರ್, ಪಾಸ್ ಇಂದ ಬಾಲ್, ಐಸ್ ಕ್ರೀಂ ತಿನ್ನುವ ಸ್ಪರ್ಧೆ, ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ, ಹಗ್ಗ ಜಗ್ಗಾಟ, ಅದೃಷ್ಟದ ಬಾಲ್, ಕಣ್ಣು ಕಟ್ಟಿ ಬಕೆಟ್‌ಗೆ ನೀರು ಹಾಕುವ ಸ್ಪರ್ಧೆ, ಛದ್ಮವೇಶ, ನಿಧಾನದ ನಡಿಗೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.

ಸಾಧಕರಿಗೆ ಸನ್ಮಾನ: ಗ್ರಾಪಂ ಅಧ್ಯಕ್ಷ ಸಾಬು ವರ್ಗೀಸ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅನಿಲ್ ಕುಮಾರ್, ಅಂಗನವಾಡಿ ಶಿಕ್ಷಕಿ ಮುತ್ತಮ್ಮ, ಅಂಗನವಾಡಿ ಕಟ್ಟಡಕ್ಕೆ ಜಾಗ ದಾನ ಮಾಡಿದ ಮೇದಪ್ಪ ಪ್ರಮುಖರಾದ ಶೀಬಾ, ಪ್ರೇಮ, ಅಜೀಶ್,ಅಸ್ಕರ್, ಸಮೀರ್, ಅಸ್ಮ, ಮಹಮ್ಮದ್ ಅಲಿ, ರಾಜಣ್ಣ ಸೇರಿದಂತೆ ಹಲವರನ್ನು ಸೇವಾ ಸಾಧನೆಗಾಗಿ ಗೌರವಿಸಲಾಯಿತು.

ಈ ಸಂದರ್ಭ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ದಮಯಂತಿ, ಸದಸ್ಯರುಗಳಾದ ಎ.ಕೆ. ಹಕೀಂ, ಅಫ್ಸಲ್, ಹನೀಫ, ಮುಸ್ತಫಾ, ಸುಜಾತಾ , ಸಿಂದು, ಪ್ರಮೀಳಾ, ಸುಹಾದ, ಸಫೀಯ,ಅಂಗನವಾಡಿ ಬಾಲ ವಿಕಾಸ ಸಮಿತಿಯ ಅಧ್ಯಕ್ಷೆ ಸರೀತಾ, ಸದಸ್ಯರಾದ ಸತ್ಯ, ಸುನೀರ್, ಶಾಲಿನಿ, ರಾಧಾ, ಅರತಿ, ಸತ್ಯವತಿ' ವಸಂತ್ ಕುಮಾರ್ ಹೊಸ ಮನೆ ಸೇರಿದಂತೆ ಮತ್ತಿತರರು ಹಾಜರಿದ್ದರು.



ವಿಶ್ವ ಪರಿಸರ ದಿನದ ಅಂಗವಾಗಿ ಭಾರತೀಯ ಜನತಾ ಪಕ್ಷದ ಗುಡ್ಡೆಹೊಸೂರು ಶಕ್ತಿ ಕೇಂದ್ರದ ವತಿಯಿಂದ ಗ್ರಾಮದ ರಸ್ತೆಯ ಬದಿಯಲ್ಲಿ ಕಸ ತೆಗೆಯುವ ಸ್ವಚ್ಛತಾ ಆಂದೋಲನಕ್ಕೆ ಶಾಸಕ ಅಪ್ಪಚ್ಚುರಂಜನ್ ಚಾಲನೆ ನೀಡಿದರು. ಈ ಸಂದರ್ಭ ಶಕ್ತಿ ಕೇಂದ್ರದ ಕುಡೆಕ್ಕಲ್ ನಿತ್ಯಾನಂದ, ಪ್ರವೀಣ್, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ನಂದಿನಿ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಪುಷ್ಪ ನಾಗೇಶ್, ಗ್ರಾಪಂ ಸದಸ್ಯರುಗಳು ಭಾಗವಹಿಸಿದ್ದರು.

ಮೈಸೂರು ಜಿಲ್ಲೆ ಮಲೇರಿಯಾ ಮುಕ್ತವಾಗಿಸಲು ಶ್ರಮಿಸಿದವರಿಗೆ ಸನ್ಮಾನ

2025ರೊಳಗೆ ಭಾರತ ಮಲೇರಿಯಾ ಮುಕ್ತವಾಗಿಸಲು ಕ್ರಮ

- ಸೊಳ್ಳೆಗಳಿಂದ ಪಾರಾಗಿ, ಮಲೇರಿಯಾ ಬರದಂತೆ ತಡೆಯಿರಿ
- ಮೈಸೂರಲ್ಲಿ 5 ವರ್ಷಗಳಿಂದ ಮಲೇರಿಯಾ ಶೂನ್ಯ ಪ್ರಕರಣ
- ಸೊಳ್ಳೆಗಳ ಉತ್ಪತ್ತಿ ತಡೆಗೆ ಆರೋಗ್ಯ ಇಲಾಖೆಯಿಂದ ಕ್ರಮ



ಮೈಸೂರು: ಡಿಹೆಚ್ಒ ಕಚೇರಿಯಲ್ಲಿ ಬುಧವಾರ ನಡೆದ 'ಮಲೇರಿಯಾ ವಿರೋಧಿ ಮಾಸಾಚರಣೆ' ಕಾರ್ಯಕ್ರಮದಲ್ಲಿ ನಿವೃತ್ತ ಅಧಿಕಾರಿಗಳು, ನಿವೃತ್ತ ಸಿಬ್ಬಂದಿ ಹಾಗೂ ಹಾಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಸಿಬ್ಬಂದಿಗಳನ್ನು ಗೌರವಿಸಲಾಯಿತು.

ಮೈಸೂರು, ಜೂ.8 (ಎಂಟಿವೈ)– ಮೈಸೂರು ಜಿಲ್ಲೆಯನ್ನು ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಕಳೆದ 30 ವರ್ಷದಿಂದ ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಹಾಗೂ ಹಾಲಿ ಸೇವೆ ಸಲ್ಲಿಸುತ್ತಿರುವ 10 ಮಂದಿ ಹಿರಿಯ ಸಿಬ್ಬಂದಿಗಳನ್ನು ಸನ್ಮಾನಿಸುವ ಮೂಲಕ ಅವರ ಸೇವೆಯನ್ನು ಸ್ಮರಿಸಲಾಯಿತು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಆವರಣದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ ವತಿಯಿಂದ ಆಯೋಜಿಸಿದ್ದ 'ಮಲೇರಿಯಾ ವಿರೋಧಿ ಮಾಸಾಚರಣೆ' ಕಾರ್ಯಕ್ರಮದಲ್ಲಿ ನಿವೃತ್ತ ಅಧಿಕಾರಿಗಳು, ನಿವೃತ್ತ ಸಿಬ್ಬಂದಿ ಹಾಗೂ ಹಾಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಸಿಬ್ಬಂದಿಗಳನ್ನು ಗೌರವಿಸಲಾಯಿತು.

ನಿವೃತ್ತ ಅಧಿಕಾರಿಗಳಾದ ಜಯಪಾಲ್, ಜವರು, ಎನ್.ಕೆಂಪನಂಜೇಗೌಡ, ಎ. ತಿಮ್ಮಣ್ಣಚಾರಿ, ದುಲ್ಲಕ್ಕ, ಎಂ.ಶ್ರೀನಿವಾಸ್, ವಾಸಿಮ್ ಅಕ್ರಮ್, ನಂಜುಂಡಸ್ವಾಮಿ, ನಾರಾಯಣ್ ಹಾಗೂ ವಾಹನ ಚಾಲಕ ಎಲ್.ಮಹದೇವ (ಗನ್ನಿ) ಅವರನ್ನು ಇಲಾಖೆ ಹಿರಿಯ ಅಧಿಕಾರಿಗಳು ಸನ್ಮಾನಿಸುವ ಮೂಲಕ ಮೈಸೂರು ಜಿಲ್ಲೆಯಲ್ಲಿ ಮಲೇರಿಯಾ, ಕಾಲರಾ, ಡೆಂಗ್ಯೂ, ಚಿಕುನ್‌ಗುನ್ಯಾ ಸೇರಿದಂತೆ ಇನ್ನಿತರ ಸಾಂಕ್ರಾಮಿಕ ರೋಗಗಳು ಹರಡುವಿಕೆ ತಡೆಗೆ ಶ್ರಮಿಸಿರುವ ನಿಮ್ಮ ಸೇವೆ ಇನ್ನಿತರ ಸಿಬ್ಬಂದಿಗೆ ಪ್ರೇರಣೆಯಾಗಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಮಾತನಾಡಿ, ಪ್ರತಿವರ್ಷ ಜೂನ್ ತಿಂಗಳಲ್ಲಿ ಮಲೇರಿಯಾ ವಿರೋಧಿ ಮಾಸವನ್ನು ಆಚರಿಸಲಾಗುತ್ತಿದೆ. ಜೂ.1 ರಿಂದ 30ರವರೆಗೂ ಮಲೇರಿಯಾ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಗುತ್ತದೆ. ಜೂನ್ ತಿಂಗಳನ್ನೇ ಯಾಕೆ ಆಯ್ಕೆ ಮಾಡಿಕೊಂಡಿದ್ದಾರೆ ಎಂದರೆ, ಮಾನ್ಸೂನ್ ಹಾಗೂ ಮಳೆಗಾಲ ಆರಂಭವಾಗುವ ತಿಂಗಳಾಗಿದೆ. ಈ ಹಿನ್ನೆಲೆಯಲ್ಲಿ ಮಳೆ ನೀರು ನಿಲ್ಲುವ ಸ್ಥಳಗಳಲ್ಲಿ ಮಲೇರಿಯಾ ಹರಡುವ ಪ್ಲಾಸ್ಮೋಡಿಯಂ ಸ್ಪಿಶಿಸ್‌ಗಳು ಹೆಚ್ಚಾಗುತ್ತವೆ. ಅಲ್ಲದೆ, ಮಲೇರಿಯಾ ರೋಗ ಹರಡುವ ಅನಾಫಿಲಿಸ್ ಸೊಳ್ಳೆಗಳು ಸಂತಾನೋತ್ಪತ್ತಿ ಮಾಡುತ್ತವೆ. ಅವುಗಳು ಮಳೆ ನೀರು ನಿಲ್ಲುವ ಜಾಗದಲ್ಲಿ ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಇದರಿಂದ ಈ ಸೊಳ್ಳೆಗಳ ಸಂಖ್ಯೆ ಹೆಚ್ಚಾಗಿ, ಜನರಿಗೆ ಕಚ್ಚುವುದರಿಂದ ಮಲೇರಿಯಾ ಕಾಯಿಲೆ ಹರಡುತ್ತಿದೆ. ಈ ನಿಟ್ಟಿನಲ್ಲಿ ಎಲ್ಲರಲ್ಲೂ ಮಲೇರಿಯಾ ಬಗ್ಗೆ ಜಾಗೃತರಾಗಬೇಕು ಎಂಬ ಅರಿವು ಮೂಡಿಸಲು ತಿಂಗಳಿಡೀ ವಿವಿಧ ಕಾರ್ಯಕ್ರಮ ನಡೆಸಲಾಗುತ್ತದೆ. ಮಲೇರಿಯಾದ ಲಕ್ಷಣ ಜ್ವರ ಆಗಿರುವುದರಿಂದ ಜನರು ಸೊಳ್ಳೆಗಳಿಂದ ರಕ್ಷಣೆ ಪಡೆಯುವುದರೊಂದಿಗೆ ಜ್ವರ ಕಾಣಿಸಿಕೊಂಡರೆ ತಕ್ಷಣವೇ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

> ಈ ಹಿಂದೆ ಮಲೇರಿಯಾದಿಂದ ಸಾಕಷ್ಟು ಸಾವು ಸಂಭವಿಸಿದ್ದವು. ಹಲವು ಮಂದಿ ಊರನ್ನೇ ತೊರೆದಿದ್ದ ನಿದರ್ಶನಗಳಿವೆ. ಮಲೇರಿಯಾದಿಂದಾಗಿ ಹೊಟ್ಟೆ ಊದಿಕೊಂಡು ಯಾತನೆ ಪಡುತ್ತಿದ್ದರು. ಮಲೇರಿಯಾದಿಂದ ಆಗುತ್ತಿದ್ದ ದುಷ್ಪರಿಣಾಮವನ್ನು ಅವಲೋಕಿಸಿ ಸಿಡಬ್ಲ್ಯು, ಇನ್ನಿತರ ಖಾಯಿಲೆಗಳಂತೆ ಮಲೇರಿಯಾವನ್ನು ಆರೋಗ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿ, 3–4 ದಶಕಗಳಿಂದ ಶ್ರಮಿಸಿದ್ದಕ್ಕೆ ಇಂದು ಮೈಸೂರು ಜಿಲ್ಲೆಯಲ್ಲಿ ಮಲೇರಿಯಾ ನಿಯಂತ್ರಣದಲ್ಲಿದೆ. –ಡಾ.ಪ್ರಸಾದ್, ಡಿಹೆಚ್ಒ

ಕಾರ್ಯಕ್ರಮ ಉದ್ಘಾಟಿಸಿದ ಆರೋಗ್ಯ ಇಲಾಖೆ ಜಂಟಿ ನಿರ್ದೇಶಕ ಡಾ. ಉದಯಕುಮಾರ್ ಮಾತನಾಡಿ, ಮಲೇರಿಯಾ ಹರಡಲು 2–3 ಸೊಳ್ಳೆಗಳೇ ಸಾಕು. ಅವುಗಳು ನಿಂತ ನೀರಿನಲ್ಲಿ ಮೊಟ್ಟೆಯಿಟ್ಟು ಸಂತಾನೋತ್ಪತ್ತಿ ಮಾಡುತ್ತವೆ. ಇದರಿಂದ ಮಲೇರಿಯಾ ವ್ಯಾಪಕವಾಗಿ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ನಾನು 2017–18ರಲ್ಲಿ ಹುಣಸೂರಲ್ಲಿ ಕೆಲಸ ಮಾಡುವಾಗ ಮಲೇರಿಯಾ ಸೋಂಕು ಪತ್ತೆಯಾಗಿತ್ತು. ಜ್ವರದಿಂದ ಬಳಲುತ್ತಿದ್ದ ಹಲವರಲ್ಲಿ ಪ್ಲಾಸ್ಮೋಡಿಯಾ ವೈರಸ್ ಅಂಶ ಪತ್ತೆ ಹಚ್ಚಿದ್ದೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಕಳೆದ 5 ವರ್ಷದಿಂದ ಮಲೇರಿಯಾ ಪ್ರಕರಣ ಶೂನ್ಯ ಎಂದು ಸುಮ್ಮನಿರಬಾರದು. ಜನರಲ್ಲಿ ಜಾಗೃತಿ ಮೂಡಿಸಬೇಕು. ಮಲೇರಿಯಾ ತೊಲಗಿಸಬೇಕು. 'ಶೂನ್ಯ ಮಲೇರಿಯಾ ನನ್ನಿಂದ ಪ್ರಾರಂಭ' ಘೋಷಣೆಯೊಂದಿಗೆ ಆಚರಣೆ ಮಾಡುವ ಮೂಲಕ ಈ ಕೆಟ್ಟ ಖಾಯಿಲೆ ಹರಡದಂತೆ ಕಟ್ಟೆಚ್ಚರ ವಹಿಸಬೇಕು. 'ಬೈಟ್ ದ ಫೈಟ್' ಎಂಬಂತೆ ಸೊಳ್ಳೆ ಕಚ್ಚುವಿಕೆಯಿಂದ ಪಾರಾಗಬೇಕು. ಸೊಳ್ಳೆಯನ್ನು ಕೊಲ್ಲಲು ಹಲವು ವಿಧಾನಗಳಿವೆ. ಈಗಾಗಲೇ ಮೈಸೂರು ಜಿಲ್ಲೆಯಲ್ಲಿನ ಎಲ್ಲಾ ಆರೋಗ್ಯ ಕೇಂದ್ರಗಳಲ್ಲೂ ಲಾರ್ವಾಹಾರಿ ಮೀನು ಸಾಕಲು ನೀರಿನ ತೊಟ್ಟಿ ನಿರ್ಮಿಸಲಾಗಿದೆ. ಈ ವಿಧಾನವು ಸೊಳ್ಳೆಗಳ ಉತ್ಪತ್ತಿ ಕಡಿವಾಣ ಹಾಕಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲೆಯನ್ನು 2025ರೊಳಗೆ ಮಲೇರಿಯಾ ಮುಕ್ತ ಜಿಲ್ಲೆಯಾಗಿ ಮಾರ್ಪಡಿಸಬೇಕು. ಅಕ್ಕ-ಪಕ್ಕದ ಜಿಲ್ಲೆಗಳೂ ಮಲೇರಿಯಾ ಮುಕ್ತವಾಗಬೇಕು. ಆ ನಂತರ ಮೈಸೂರು ವಿಭಾಗ ಮಲೇರಿಯಾ ಮುಕ್ತವಾಗಲು ಪಣತೊಡಬೇಕು. 2025 ರೊಳಗೆ ಭಾರತ ಮಲೇರಿಯಾ ಮುಕ್ತ ದೇಶವಾಗಿಸಬೇಕೆಂದು ಆರೋಗ್ಯ ಇಲಾಖೆ ಹಲವು ಕಾರ್ಯಕ್ರಮ ರೂಪಿಸಿದೆ. ಅದಕ್ಕೆ ಸಾರ್ವಜನಿಕರು ಸಹಕಾರ, ಇಲಾಖೆ ಸಿಬ್ಬಂದಿ ಶ್ರಮ ಅಗತ್ಯ ಎಂದು ಅಭಿಪ್ರಾಯಪಟ್ಟ ಅವರು, ಈಗಾಗಲೇ ವಿಶ್ವದಲ್ಲಿ 9 ದೇಶಗಳು ಮಲೇರಿಯಾ ಮುಕ್ತ ದೇಶ ಎಂದು ಘೋಷಿಸಲ್ಪಟ್ಟಿವೆ. ಅದರಲ್ಲಿ ಶ್ರೀಲಂಕಾವೂ ಮಲೇರಿಯಾ ಮುಕ್ತ ರಾಷ್ಟ್ರವಾಗಿದೆ. ಅಲ್ಲಿ ಮನೆ ಮುಂದೆ ನೀರು ನಿಂತರೆ ಅಕ್ಕಪಕ್ಕದ ಮನೆಯವರು ಕೇಸ್ ಹಾಕುತ್ತಾರೆ. ಎರಡು ವರ್ಷ ಜೈಲು ಶಿಕ್ಷೆ ನೀಡಲಾಗುತ್ತದೆ. ಜೈಲಲ್ಲಿ ಆರೋಗ್ಯ ಇಲಾಖೆಯಿಂದ ಅರಿವಿನ ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ತಿಳಿಸಿದರು.

ಡಿಹೆಚ್ಒ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ಜಿಲ್ಲೆಯಲ್ಲಿ 15 ವರ್ಷದ ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಮೈಸೂರು–ಮಂಡ್ಯ ಗಡಿ ಭಾಗವಾದ ಬ್ಲಫ್, ಶಿಂಷಾ, ಕೆ.ಆರ್.ನಗರ–ಕೆ.ಆರ್.ಪೇಟೆ ಗಡಿಯಾದ ಭೇರ್ಯದಲ್ಲಿ ಮಲೇರಿಯಾ ಪ್ರಕರಣಗಳ ಸಂಖ್ಯೆ ಹೆಚ್ಚಾಗಿ ಕಂಡು ಬರುತ್ತಿತ್ತು. ಕಳೆದ 5 ವರ್ಷದಿಂದ ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳ ಸಂಖ್ಯೆ ಶೂನ್ಯಕ್ಕೆ ಕುಸಿದಿದೆ. ಇದಕ್ಕೆ ಇಲಾಖೆ ಕೈಗೊಂಡ ಹಲವು ಸುಧಾರಣೆಗಳು ಕಾರಣ. ಅದರ ಜೊತೆಗೆ ಇಲಾಖಾ ಸಿಬ್ಬಂದಿಗಳ ಶ್ರಮವೂ ಹೆಚ್ಚಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಶಿವಪ್ರಕಾಶ್, ಆರ್‌ಸಿಹೆಚ್ಒ ಡಾ.ಜಯಂತ್, ಡಾ.ಸಿರಾಜ್ ಅಹ್ಮದ್, ಕಾಲರಾ ನಿಯಂತ್ರಣಾಧಿಕಾರಿ ಡಾ. ಉಮೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರಾಜೇಶ್ವರಿ, ಡಾ.ವಂಜುಂಡಪ್ರಸಾದ್ ಹಾಗೂ ಇನ್ನಿತರರು ಇದ್ದರು.

ಬ್ಯಾಂಕ್‌ನಲ್ಲಿ ಅಡವಿಟ್ಟ ಮನೆಗೆ ನಕಲಿ ದಾಖಲೆ ಸೃಷ್ಟಿಸಿ ಮಾರಾಟ: ದಂಪತಿ ವಿರುದ್ಧ ಕೇಸ್ ದಾಖಲು

ಮೈಸೂರು, ಜೂ.8– ಬ್ಯಾಂಕ್‌ಗೆ ಅಡಮಾನವಿಟ್ಟಿದ್ದ ಮನೆಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವ ಆರೋಪದ ಮೇರೆಗೆ ಮೈಸೂರಿನ ದಂಪತಿ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ಕುವೆಂಪುನಗರ ಪಡುವಣ ರಸ್ತೆ ನಿವಾಸಿಗಳಾದ ಹರೀಶ್ ಮತ್ತು ಪತ್ನಿ ಜ್ಯೋತಿ ಹರೀಶ್ ಆರೋಪಕ್ಕೆ ಗುರಿಯಾದವರು. ಇವರು ಕುವೆಂಪುನಗರದಲ್ಲಿರುವ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ತಾವು ಜೆ.ಪಿ.ನಗರ ಕೊಪ್ಪಲೂರಿನ ಕಸ್ಟಮ್ಸ್ ಅಂಡ್ ಸೆಂಟ್ರಲ್ ಎಕ್ಸೈಜ್ ನೌಕರರ ಗೃಹ ನಿರ್ಮಾಣ ಸಂಘದ ಬಡಾವಣೆಯಲ್ಲಿ ನಿರ್ಮಿಸಿರುವ ಮನೆಯನ್ನು ಅಡಮಾನವಿಟ್ಟು ಒಟ್ಟು 51.25 ಲಕ್ಷ ರೂ. ಸಾಲ ಪಡೆದ ನಂತರ ಅದೇ ಮನೆಯ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡುವ ಮೂಲಕ ವಂಚಿಸಿದ್ದಾರೆ ಎಂದು ಬ್ಯಾಂಕ್‌ನ ಮ್ಯಾನೇಜರ್ ಬಿ.ಎಲ್. ಪ್ರಸಾದ್ ಕುವೆಂಪುನಗರ ಠಾಣೆಗೆ ಸಲ್ಲಿಸಿದ ದೂರಿನಲ್ಲಿ ತಿಳಿಸಿದ್ದಾರೆ.

ಈ ದಂಪತಿ ಮೊದಲಿಗೆ 2016ರ ಡಿ.27ರಂದು ಮನೆಯ ದಾಖಲಾತಿಗಳನ್ನು ಅಡಮಾನವಿಟ್ಟು ಬಿಎಂಡಬ್ಲ್ಯು ಕಾರು ಖರೀದಿಸಲು 40 ಲಕ್ಷ ರೂ. ಸಾಲ ಪಡೆದಿದ್ದಾರೆ. ಈ ವೇಳೆ ಮನೆಗೆ ಸಂಬಂಧಿಸಿದ ಅಸಲಿ ದಾಖಲೆಗಳನ್ನು ಬ್ಯಾಂಕ್‌ಗೆ ನೀಡಿದ್ದು, ಸಾಲ ಪಡೆದಿರುವ ಬಗ್ಗೆ ಮೈಸೂರು ದಕ್ಷಿಣ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಿದ್ದಾರೆ. ಆನಂತರ ಅದೇ ಆಸ್ತಿ ಮೇಲೆ 2018ರ ಏಪ್ರಿಲ್ 7ರಂದು 1 ಲಕ್ಷ ಮತ್ತು 2019ರ ಏಪ್ರಿಲ್ 16ರಂದು 10.25 ಲಕ್ಷ ಸೇರಿದಂತೆ ಒಟ್ಟು 51.25 ಲಕ್ಷ ರೂ. ಸಾಲ ಪಡೆದಿದ್ದು, ಸಾಲದ ಕಂತು ಪ್ರತಿ ತಿಂಗಳು 1.04 ಲಕ್ಷ ರೂ.ಗಳನ್ನು ಕೆಲವು ತಿಂಗಳು ಮಾತ್ರ ಪಾವತಿಸಿ ನಂತರ ಪಾವತಿಸಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಬ್ಯಾಂಕಿನ ನೋಟಿಸ್‌ಗಳಿಗೂ ಸ್ಪಂದಿಸದ ಕಾರಣ ಬ್ಯಾಂಕ್‌ನವರು ಬಿಎಂಡಬ್ಲ್ಯು ಕಾರಿನ ಬಗ್ಗೆ ಆರ್‌ಟಿಓ ಕಚೇರಿಯಲ್ಲಿ ಪರಿಶೀಲನೆ ಮಾಡಿದಾಗ ಆ ಕಾರಿನ ಮೇಲೆ ಚಾಮುಂಡಿಪುರಂನ ಕರ್ನಾಟಕ ಬ್ಯಾಂಕ್ ಸಾಲ ಇರುವುದಾಗಿ ನಮೂದಾಗಿದೆ. ಇದರಿಂದ ಆಘಾತಗೊಂಡ ಬ್ಯಾಂಕ್‌ನವರು ಅಡಮಾನವಾಗಿಟ್ಟಿದ್ದ ಮನೆಯ ಇಸಿ ಪರಿಶೀಲಿಸಿದರೆ, ಆ ಮನೆಯನ್ನು ಸಿಂಡಿಕೇಟ್ ಬ್ಯಾಂಕ್, ರಾಜರಾಜೇಶ್ವರಿನಗರ ಶಾಖೆಯಲ್ಲಿ ಅಡಮಾನ ಇಟ್ಟಿರುವುದಾಗಿ ನಮೂದಾಗಿರುವುದು ಕಂಡು ಬಂದಿದೆ. ಅಲ್ಲದೇ ಮನೆಯನ್ನು 2020ರ ಫೆಬ್ರವರಿ 5ರಂದು ರಾಘವೇಂದ್ರ ಎಂಬುವರಿಗೆ ಮಾರಾಟ ಮಾಡಿರುವ ದಾಖಲೆಗಳು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಕಂಡು ಬಂದಿದೆ. ಕಾರು ಖರೀದಿಗೆ ಬೆಂಗಳೂರಿನ ನವನೀತ್ ಮೋಟಾರ್ಸ್ ಕಂಪನಿಗೆ ಪೇ–ಆರ್ಡರ್ ನೀಡಿದ್ದ 40 ಲಕ್ಷ ರೂ. ಚೆಕ್ ಅನ್ನು ಕಂಪನಿಗೆ ನೀಡದೇ ಬೆಂಗಳೂರಿನ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯಲ್ಲಿ ನಕಲಿ ಖಾತೆ ತೆರೆದು ನಗದೀಕರಣ ಮಾಡಿಕೊಂಡಿರುವುದು ಪತ್ತೆಯಾಗಿದೆ ಎಂದು ಬ್ಯಾಂಕ್ ಮ್ಯಾನೇಜರ್ ಬಿ.ಎನ್.ಪ್ರಸಾದ್ ನೀಡಿದ ದೂರಿನನ್ವಯ ಕುವೆಂಪುನಗರ ಠಾಣೆ ಪೊಲೀಸರು ಹರೀಶ್ ಮತ್ತು ಜ್ಯೋತಿ ಹರೀಶ್ ದಂಪತಿ ವಿರುದ್ಧ ಭಾರತೀಯ ದಂಡ ಸಂಹಿತೆ 34, 420, 465, 468, 417ರಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಸಮಾಜ ಸೇವಕರೂ ಆದ 44ನೇ ವಾರ್ಡ್ ಮುಖಂಡ ಸುರೇಶ್ ಅವರ ಹುಟ್ಟುಹಬ್ಬ ಹಾಗೂ ಪರಿಸರ ದಿನವನ್ನು ಗಿಡ ನೆಟ್ಟು ಆಚರಿಸಲಾಯಿತು. ಈ ವೇಳೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಪಾಲಿಕೆ ಸದಸ್ಯೆ ಸವಿತಾ ಸುರೇಶ್, ಸಿದ್ಧಲಿಂಗೇಶ್ವರ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹುಚ್ಚೆ ಗೌಂಡರ್, ನಿರ್ದೇಶಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಕಡಿಮೆ ಬೆಲೆ ಕಾರು ಆಮಿಷ: ಓಎಲ್‌ಎಕ್ಸ್ ಜಾಹೀರಾತು ಮೂಲಕ ಗೃಹಿಣಿಗೆ 1.93 ಲಕ್ಷ ರೂ. ವಂಚನೆ

ಮೈಸೂರು, ಜೂ.8– ಕಡಿಮೆ ಬೆಲೆಗೆ ಕಾರು ಮಾರಾಟ ಮಾಡುವುದಾಗಿ ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿ ಗೃಹಿಣಿಗೆ 1.93 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ರಾಮಕೃಷ್ಣನಗರ ನಿವಾಸಿ ಡಿ.ತೇಜಸ್ವಿನಿ ಅರಸ್ ವಂಚನೆಗೊಳಗಾದವರು. ಕಡಿಮೆ ಬೆಲೆಗೆ ಕಾರು ಮಾರಾಟ ಮಾಡುವ ಬಗ್ಗೆ ಓಎಲ್‌ಎಕ್ಸ್‌ನಲ್ಲಿ ಬಂದಿದ್ದ ಜಾಹೀರಾತನ್ನು ನೋಡಿ ಅದರಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದ್ದಾರೆ. ಅವರೊಂದಿಗೆ ಮಾತನಾಡಿದ ವಂಚಕ ತಾನು ಮಿಲಿಟರಿಯಲ್ಲಿ ಕೆಲಸ ಮಾಡುವುದಾಗಿ ತಿಳಿಸಿ, ವಿವಿಧ ಬಾಬ್ತುಗಳು ಎಂದು 1,93,240 ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ ಎಂದು ಮೈಸೂರು ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಹುಮಾನದ ಆಮಿಷ: ರೈತನಿಗೆ 2.52 ಲಕ್ಷ ವಂಚನೆ

ಮೈಸೂರು,ಜೂ.8–ಬಹುಮಾನ ಬಂದಿದೆ ಎಂದು ಪತ್ರ ಕಳುಹಿಸಿ ರೈತರೊಬ್ಬರಿಗೆ 2.52 ಲಕ್ಷ ರೂ. ವಂಚಿಸಿರುವ ಬಗ್ಗೆ ಪಿರಿಯಾಪಟ್ಟಣ ತಾಲೂಕು ಕೊಣಸೂರು ಗ್ರಾಮದಿಂದ ವರದಿಯಾಗಿದೆ.

ಅಲ್ಲಿನ ರೈತ ನಾಗೇಶ್(50) ವಂಚನೆಗೊಳಗಾದವರಾಗಿದ್ದು, ಅವರಿಗೆ ಕಳೆದ ಏಪ್ರಿಲ್ 11ರಂದು Naaptol ಎಂಬ ಸಂಸ್ಥೆ ಹೆಸರಿನಲ್ಲಿ ಪೋಸ್ಟ್ ಬಂದಿದ್ದು, ಅವರಿಗೆ 12.80 ಲಕ್ಷ ರೂ. ಬಹುಮಾನ ಬಂದಿರುವುದಾಗಿ ತಿಳಿಸಲಾಗಿದೆ. ಇದನ್ನು ನಂಬಿದ ಅವರ ಮಗಳು ಪೋಸ್ಟ್‌ನಲ್ಲಿದ್ದ ಮೊಬೈಲ್ ನಂಬರ್‌ಗೆ ಕರೆ ಮಾಡಿದಾಗ ಬಹುಮಾನ ಬಂದಿರುವುದು ಖಚಿತವೆಂದು ನಂಬಿಸಿ ಬಹುಮಾನ ಪಡೆಯಲು ಜಿಎಸ್‌ಟಿ, ಎಲ್‌ಓಸಿ ಹಾಗೂ ಇನ್ಶೂರೆನ್ಸ್ ಶುಲ್ಕ ಪಾವತಿಸಬೇಕು ಎಂದು ವಿವಿಧ ಹಂತಗಳಲ್ಲಿ ಒಟ್ಟು 2,52,800 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ ಎಂದು ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಟೀಂ ಲಿಯೋನ್'ಗೆ ಪುನೀತ್ ಕಪ್



ಮೈಸೂರು, ಜೂ.8(ಎಂಕೆ)– ಮೈಸೂರಿನ ಚಾಮುಂಡಿ ವಿಹಾರ ಸ್ಟೇಡಿಯಂನಲ್ಲಿ ನಟ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಮೈಸೂರು ಜಿಲ್ಲಾ ಅಮೆಚೂರ್ ಅಸೋಸಿಯೇಶನ್ ಹಾಗೂ ಮೈಸೂರು ಸ್ನೇಹಿತರ ಬಳಗದ ವತಿಯಿಂದ ಆಯೋಜಿಸಿದ್ದ 'ಮೈಸೂರು ಪ್ರೊ ಕಬಡ್ಡಿ'(ಪುನೀತ್ ಕಪ್) ಪಂದ್ಯಾವಳಿಯಲ್ಲಿ 'ಟೀಂ ಲಿಯೋನ್' ಚಾಂಪಿಯನ್ ಆಗಿ ಹೊರಹೊಮ್ಮಿತು. ಮೂರು ದಿನಗಳ ಕಾಲ ನಡೆದ ಪಂದ್ಯಾವಳಿಯಲ್ಲಿ ಎಂಕೆ ಮೊಬೈಲ್ಸ್‌ನ ಕಿರಣ್ ಕುಮಾರ್ ಮಾಲೀಕತ್ವದ 'ಟೀಮ್ ಲಿಯೋನ್' ಚಾಂಪಿಯನ್ ಆಗುವ ಮೂಲಕ 'ಪುನಿತ್ ಕಪ್' ಹಾಗೂ 2 ಲಕ್ಷ ರೂ., ನಗದು ಬಹುಮಾನವನ್ನು ಪಡೆದುಕೊಂಡಿತು. ಶಾಸಕ ಎಲ್.ನಾಗೇಂದ್ರ ಮಾಲೀಕತ್ವದ 'ಚಾಮರಾಜ ಚಾಲೆಂಜರ್ಸ್' ತಂಡ ದ್ವಿತೀಯ ಬಹುಮಾನ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಮಾಲೀಕತ್ವದ 'ಫ್ಲೇಮಿಂಗ್ ಈಗಲ್ಸ್' ತಂಡ ತೃತೀಯ ಹಾಗೂ ನಗರಪಾಲಿಕೆ ಮಾಜಿ ಸದಸ್ಯ ಮಾದೇಶ್ ಮಾಲೀಕತ್ವದ 'ಟೀಮ್ ಮೈಸೂರು' ತಂಡ ನಾಲ್ಕನೇ ಬಹುಮಾನ ಪಡೆದುಕೊಂಡಿತು.

ಬಿಜೆಪಿಯ ಧರ್ಮದ ರಾಜಕಾರಣ ಇನ್ನು ನಡೆಯುವುದಿಲ್ಲ

ವರುಣಾ ಕ್ಷೇತ್ರ ಕಾಂಗ್ರೆಸ್ ಮುಖಂಡರ ಸಭೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಕಿಡಿ

ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಗೆಲುವಿಗೆ ಸಹಕರಿಸಲು ಪದವೀಧರ ಮತದಾರರಲ್ಲಿ ಮನವಿ

ಮೈಸೂರು, ಜೂ. 8(ಆರ್‌ಕೆಬಿ)– ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಇದುವರೆಗೆ ಮೂವರು ಸಚಿವರು ರಾಜೀನಾಮೆ ನೀಡಿದ್ದಾರೆ. ಬಿಜೆಪಿ ಧರ್ಮದ ಆಧಾರದಲ್ಲಿ ರಾಜಕಾರಣ ಮಾಡುತ್ತಿದ್ದು, ಇನ್ನು ಮುಂದೆ ಅವರ ಧರ್ಮದ ರಾಜಕಾರಣ ನಡೆಯವುದಿಲ್ಲ ಎಂದು ಮಾಜಿ ಸಂಸದರೂ ಆದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಇಂದಿಲ್ಲಿ ಬಿಜೆಪಿ ವಿರುದ್ಧ ಕಿಡಿಕಾರಿದರು.

ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಕಾಂಗ್ರೆಸ್ ಭವನದಲ್ಲಿ ಬುಧವಾರ ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿರುವ ಕಾಂಗ್ರೆಸ್ ಅಭ್ಯರ್ಥಿ ಮಧು ಮಾದೇಗೌಡ ಅವರ ಪರವಾಗಿ ವರುಣಾ ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು. ಪಠ್ಯಪುಸ್ತಕ ಪರಿಷ್ಕರಣೆ ಮಾಡುವಾಗ ಬಸವಣ್ಣ, ಕುವೆಂಪು, ಡಾ.ಅಂಬೇಡ್ಕರ್ ಸೇರಿದಂತೆ ಅನೇಕ ಸಾಹಿತಿಗಳಿಗೆ ಅವಮಾನ ಮಾಡಿದ್ದಾರೆ, ಚರಿತ್ರೆಯನ್ನೇ ಮರೆಮಾಚುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಉತ್ತರಕರ್ನಾಟಕದಲ್ಲಿ ಅನೇಕ ಸ್ವಾಮೀಜಿಗಳು ಬಸವಣ್ಣನಿಗೆ ಅವಮಾನ ಮಾಡಿದ್ದಾರೆಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಸಭೆಗಳನ್ನು ಮಾಡಿದ್ದಾರೆ, ಬಸವಣ್ಣನವರು ಜಾತೀಯತೆ, ಅಸಮಾನತೆ ವಿರುದ್ಧ ಹೋರಾಟ ಮಾಡಿದವರು. ಈ ಕಾರಣದಿಂದ ಇವರ ವಿಚಾರಗಳನ್ನು ಮರೆಮಾಚಲು ಪಠ್ಯದಿಂದ ಕೈ ಬಿಟ್ಟು, ಪಠ್ಯಪುಸ್ತಕಗಳಲ್ಲಿ ಮನುವಾದವನ್ನು ತುಂಬುವ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು.



ಈ ದೇಶದಲ್ಲಿ ಶಿಕ್ಷಣದಲ್ಲಿ ಏನಾದರೂ ಸಾಧನೆಯನ್ನು ಮಾಡಿದ್ದರೆ ಅದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಂಬುದನ್ನು ಯಾರೂ ಮರೆಯಲು ಸಾಧ್ಯವಿಲ್ಲ ಎಂದ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಮೈಸೂರಿಗೆ ಅತೀ ಹೆಚ್ಚು ಅನುದಾನ ನೀಡಿದ್ದಾರೆ. ಅವರ ಅವಧಿಯಲ್ಲಿ ಒಂದೇ ಒಂದು ಭ್ರಷ್ಟಾಚಾರ ನಡೆಯಲಿಲ್ಲ. ಅನೇಕ ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿದ್ದರು. ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗವನ್ನು ಜಾರಿ ಮಾಡಿದ್ದರು. ಈ ಎಲ್ಲಾ ವಿಚಾರಗಳನ್ನು ಪದವೀಧರ ಮತದಾರರ ಮನ ಮುಟ್ಟುವಂತೆ ತಿಳಿಸಿ ಅವರ ಮತಗಳನ್ನು ಕಾಂಗ್ರೆಸ್‌ಗೆ ದೊರೆಯುವಂತೆ ಮಾಡಬೇಕು ಎಂದು ಪಕ್ಷದ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ವಿದ್ಯಾವಂತ ಪದವೀಧರರು ಉತ್ತಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ: ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಇಲ್ಲಿವರೆಗೂ ಕಾಂಗ್ರೆಸ್ ಪಕ್ಷ ಇಷ್ಟೊಂದು ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ. ಈ ಬಾರಿ ಕೆಪಿಸಿಸಿ ಅಧ್ಯಕ್ಷರು ಮತ್ತು ಶಾಸಕಾಂಗ ಪಕ್ಷದ ನಾಯಕರು ಶಿಕ್ಷಣ ಸಂಸ್ಥೆ ನಡೆಸುವ ಉತ್ತಮ ಅಭ್ಯರ್ಥಿಯನ್ನು ದಕ್ಷಿಣ ಪದವೀಧರ ಕ್ಷೇತ್ರಕ್ಕೆ ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಭ್ರಷ್ಟಾಚಾರ, ದುರಾಡಳಿತ, ಕೇಂದ್ರ ಸರ್ಕಾರದ ವೈಫಲ್ಯಗಳು ಜನರನ್ನು ರೊಚ್ಚಿಗೆಬ್ಬಿಸಿವೆ. ಈ ಚುನಾವಣೆಯಲ್ಲಿ ವಿದ್ಯಾವಂತ ಪದವೀಧರರು ಒಳ್ಳೆಯ ತೀರ್ಮಾನ ತೆಗೆದುಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದರು. ವರುಣಾ ಕ್ಷೇತ್ರದಲ್ಲಿ ಪ್ರತೀ ಪಂಚಾಯಿತಿಯಿಂದ ತಲಾ 5 ಮಂದಿ ಪ್ರಮುಖ ಕಾರ್ಯಕರ್ತರನ್ನು ಪಕ್ಷದ ವತಿಯಿಂದ ನಿಯೋಜನೆ ಮಾಡಿ, ಅವರೆಲ್ಲರೂ ನಾಳೆಯಿಂದಲೇ ವರುಣಾ ಕ್ಷೇತ್ರದಲ್ಲಿರುವ 3500 ಪದವೀಧರ ಮತದಾರರನ್ನು ತಲುಪಿ, ಪಕ್ಷಕ್ಕೆ ಮತ ಸೆಳೆಯುವ ಕೆಲಸ ಮಾಡಲಿದ್ದಾರೆ ಎಂದರು. ಸಭೆಯಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ತಾಪಂ ಮಾಜಿ ಸದಸ್ಯ ಮಂಜುಳಾ, ನಗರ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಮುಖಂಡರಾದ ಶಿವನಾಗಪ್ಪ ಇತರರು ಉಪಸ್ಥಿತರಿದ್ದರು.

> ಹಿಂದಿನ ಚುನಾವಣೆಯಲ್ಲಿ ಆದ ಅನುಭವ ನೋಡಿದರೆ ಯಾರೂ ಇಷ್ಟು ಜನ ಬರುತ್ತಿರಲಿಲ್ಲ. ಬಹಳ ಸೀರಿಯಸ್ಸಾಗಿ ತೆಗೆದುಕೊಂಡಿರಲಿಲ್ಲ. ಈಗ ಕಾಂಗ್ರೆಸ್‌ಗೆ ಉತ್ತಮ ವಾತಾವರಣವಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು ಮತದಾರರನ್ನು ಬೂತ್‌ಗೆ ಕರೆತಂದು ಕಾಂಗ್ರೆಸ್ ಅಭ್ಯರ್ಥಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಅವರ ಮನವೊಲಿಸಬೇಕು.
> –ಹೆಚ್.ಎ.ವೆಂಕಟೇಶ್, ಕೆಪಿಸಿಸಿ ವಕ್ತಾರ

> ಚುನಾವಣೆ ಬಹಳ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಕು. ಮತದಾರರನ್ನು ಖುದ್ದಾಗಿ ಭೇಟಿ ಮಾಡಿ, ಅವರಿಗೆ ಕಾಂಗ್ರೆಸ್ ಆಡಳಿತದಲ್ಲಿ ಆದ ಜನಪರ ಕಾರ್ಯಗಳ ಬಗ್ಗೆ ಮನವರಿಕೆ ಮಾಡಿಕೊಡಬೇಕು. –ಸೂರಜ್ ಹೆಗ್ಡೆ, ಕೆಪಿಸಿಸಿ ಉಪಾಧ್ಯಕ್ಷ

ಬೆಟ್ಟದಪುರದ ಶಾಂತವೀರಮ್ಮನವರ ದೇವಾಲಯ ಇಂದು ಉದ್ಘಾಟನೆ

ಬೆಟ್ಟದಪುರ, ಜೂ.8(ಶಿವದೇವ್)– ಸುಮಾರು ಒಂದು ಕೋಟಿ ರೂ. ವೆಚ್ಚದಡಿ ನಿರ್ಮಾಣವಾಗಿರುವ ಬೆಟ್ಟದಪುರದ ಗ್ರಾಮ ದೇವತೆ ಶಾಂತವೀರಮ್ಮನವರ ದೇವಾಲಯವನ್ನು ಜೂ. 9 ರಂದು ಬೆಟ್ಟದಪುರದ ಚನ್ನಬಸವದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದಾರೆ.



ಗ್ರಾಮದ ಮುಖಂಡರಾದ ಪ್ರಭಾಶಂಕರ್ ಹಾಗೂ ಸತೀಶ್ ಕಶ್ಯಪ್ ಅವರ ನೇತೃತ್ವದಲ್ಲಿ ವಿವಿಧ ಪೂಜಾ ವಿಧಿ–ವಿಧಾನಗಳು, ಹೋಮ ಹವನಗಳು ಹಾಗೂ ದೇವಿ ಪ್ರತಿಷ್ಠಾನ ಪೂಜಾ ಕಾರ್ಯಕ್ರಮಗಳು ಮಂಗಳವಾರದಿಂದ ಆರಂಭವಾಗಿದ್ದು, ದೇವಿಯ ವಿಗ್ರಹವನ್ನು ಬೆಟ್ಟದಪುರದ ಓಂಕಾರೇಶ್ವರ ದೇವಾಲಯದಿಂದ ಶಾಂತವೀರಮ್ಮನವರು ದೇವಾಲಯದವರೆಗೆ ಮೆರವಣಿಗೆ ಮಾಡಿ ಡೊಳ್ಳು ಕುಣಿತ, ಮಹಿಳೆಯರ ಕುಂಭ ಕಳಸದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಪ್ರತಿ ದಿನ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದ ನಂತರ ಅನ್ನದಾನ ಏರ್ಪಡಿಸಲಾಗಿದೆ. ಸಮಿತಿ ಅಧ್ಯಕ್ಷ ಪ್ರಭಾಶಂಕರ್, ಕಾರ್ಯದರ್ಶಿ ದೇವರಾಜು, ಖಜಾಂಚಿ ಸುರೇಶ್ ಹಾಗೂ ಲೋಕೇಶ್, ರಾಜಣ್ಣ, ವಿಗ್ರಹದಾನಿ ಡಿ.ಟಿ.ಗಿರೀಶ್, ಗ್ರಾಪಂ ಅಧ್ಯಕ್ಷರು, ಸದಸ್ಯರು ಹಾಗೂ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು ಎಂದು ಸಮಿತಿ ತಿಳಿಸಿದೆ.

ಇಂದು ಗಣಪತಿ ದೇವಸ್ಥಾನದ ವಾರ್ಷಿಕೋತ್ಸವ

ಬೈಲಕುಪ್ಪೆ, ಜೂ.8(ರಾಜೇಶ್)–ಬೈಲಕುಪ್ಪೆ ಗಣಪತಿ ದೇವಸ್ಥಾನದ 13ನೇ ವರ್ಷದ ವಾರ್ಷಿಕೋತ್ಸವ ಜೂ.9ರಂದು ನಡೆಯಲಿದೆ ಎಂದು ಬೈಲುಕುಪ್ಪೆ ಗಣಪತಿ ದೇವಸ್ಥಾನ ಆಡಳಿತ ಸಮಿತಿ ತಿಳಿಸಿದೆ.



ಬೆಳಿಗ್ಗೆ 8 ಗಂಟೆಗೆ ತೆಂಗಿನಕಾಯಿ ಹೋಮ, ಕಲಾವೃದ್ಧಿ ಹೋಮ, ಗಣಪತಿ ಮೂಲ ಮಂತ್ರ ಹೋಮ, ಗೋಪುರದಲ್ಲಿರುವ ಕಳಸಕ್ಕೆ ಅಭಿಷೇಕ, ನಂತರದಲ್ಲಿ ದೇವರನ್ನು ಅಲಂಕರಿಸಿ ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ನಡೆಯಲಿದೆ. ಬಳಿಕ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಮಿತಿಯವರು ತಿಳಿಸಿದ್ದಾರೆ.

ಕಾಡಾನೆ ಹಾವಳಿ ನಿಯಂತ್ರಿಸಲು ತಂದಿದ್ದ ರೈಲ್ವೆ ಕಂಬಿ ಬೇಲಿ ಸಾಮಗ್ರಿ ವಾಪಸ್

ಕಿಕ್ಕೇರಿಕಟ್ಟೆ ಗ್ರಾಮಸ್ಥರಿಂದ ಪ್ರತಿಭಟನೆ



ಹನಗೋಡು, ಜೂ.8(ಮಹೇಶ್)– ಕಾಡಂಚಿನ ಗ್ರಾಮಗಳಲ್ಲಿ ಕಾಡಾನೆ ಹಾವಳಿ ನಿಯಂತ್ರಿಸಲು ಅರಣ್ಯ ಇಲಾಖೆಯಿಂದ ರೈಲ್ವೆ ಕಂಬಿ ಬೇಲಿ ನಿರ್ಮಾಣಕ್ಕೆ ತಂದಿದ್ದ ಸಾಮಗ್ರಿಗಳನ್ನು ವಾಪಸ್ ಕೊಂಡೊಯ್ಯಲಾಗುತ್ತಿದೆ ಎಂದು ಆರೋಪಿಸಿ ಬುಧವಾರ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಂಚಿನ ಕಿಕ್ಕೇರಿಕಟ್ಟೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಹುಲ್ಲೇಪುರ ಗ್ರಾಮದಿಂದ ಉತ್ತೇನಹಳ್ಳಿ ಗ್ರಾಮದವರೆಗೆ ಒಟ್ಟು 4ಕಿ.ಮೀ. ಕಾಡಾನೆ ತಡೆ ಬೇಲಿ ನಿರ್ಮಾಣ ಕಾಮಗಾರಿಗೆ ಮಂಜೂರಾಗಿದ್ದು, ಈ ಸಂಬಂಧ ಅರಣ್ಯ ಇಲಾಖೆಯಿಂದ ಕಾಮಗಾರಿ ಪ್ರಾರಂಭಿಸಲಾಗಿದೆ. ಆದರೆ, ಬುಧವಾರ ಬೆಳಗ್ಗೆ ಇದ್ದಕ್ಕಿದಂತೆ ಕಾಮಗಾರಿಗೆ ತಂದಿದ್ದ ಸಾಮಗ್ರಿಗಳನ್ನು ನಾಲ್ಕೈದು ಲಾರಿಗಳ ಮೂಲಕ ಜೆಸಿಬಿಯೊಂದಿಗೆ ಲೋಡ್ ಮಾಡಿ ಕೊಂಡೊಯ್ಯಲಾಗುತ್ತಿತ್ತು. ವಿಚಾರ ತಿಳಿದ ಗ್ರಾಮಸ್ಥರು, ಸ್ಥಳಕ್ಕೆ ದೌಡಾಯಿಸಿ ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದರು.

ಬಳಿಕ, ಶಾಸಕ ಹೆಚ್.ಪಿ.ಮಂಜುನಾಥ್ ಅವರಿಗೆ ದೂರವಾಣಿ ಕರೆ ಮಾಡಿ ನಮ್ಮ ಗ್ರಾಮಕ್ಕೆ ಮಂಜೂರಾಗಿರುವ ಕಾಮಗಾರಿಯನ್ನು ಇಲ್ಲಿಂದಲೇ ಪ್ರಾರಂಭಿಸಬೇಕು. ಕಳೆದ ಹತ್ತಾರು ವರ್ಷಗಳಿಂದ ಕಾಡಾನೆ ಹಾವಳಿಯಿಂದ ಬೇಸತ್ತು ಹೋಗಿದ್ದೇವೆ. ಯಾವುದೇ ಕಾರಣಕ್ಕೂ ಇಲ್ಲಿಗೆ ಮಂಜೂರಾಗಿರುವ ಸಾಮಗ್ರಿಗಳನ್ನು ಬೇರೆಡೆ ಸಾಗಿಸಲು ನಾವು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ಗ್ರಾಮಸ್ಥರ ಮನವೊಲಿಸಿದ ಶಾಸಕ ಮಂಜುನಾಥ್ ಮಾತನಾಡಿ, ಈಗಾಗಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದು ಹುಲ್ಲೇಪುರದಿಂದ ಉತ್ತೇನಹಳ್ಳಿವರೆಗೆ ಕಪ್ಪು ಮಣ್ಣಾಗಿದ್ದು, ಕಾಮಗಾರಿ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ಹೊಸ ತಂತ್ರಜ್ಞಾನದಿಂದ ಕೂಡಿದ ರೋಪ್ ವೇ(ಉಕ್ಕಿನ ಹಗ್ಗ) ಬೇಲಿಯನ್ನು ನಿರ್ಮಾಣ ಮಾಡಲಾಗುವುದು. ಉತ್ತೇನಹಳ್ಳಿ ಗ್ರಾಮ ದಿಂದ ಅಳಲೂರು ಗ್ರಾಮದವರಿಗೆ ಬಾಕಿ 4 ಕಿ.ಮೀ. ಕಾಮಗಾರಿಗೆ ಇದೇ ಸಾಮಗ್ರಿ ಬಳಸಲಾಗುತ್ತಿದೆ ಎಂದು ತಿಳಿಸಿದರು.

ಬಳಿಕ, ಹುಣಸೂರು ವಲಯ ಅರಣ್ಯಾಧಿಕಾರಿ ಹನುಮಂತರಾಜು, ಡಿಆರ್‌ಎಫ್‌ಓಗಳಾದ ಸಿದ್ದರಾಜು, ವೀರಭದ್ರಯ್ಯ ಸೇರಿದಂತೆ ಅರಣ್ಯ ಸಿಬ್ಬಂದಿ ಗ್ರಾಮಸ್ಥರನ್ನು ತಮ್ಮ ವಾಹನದಲ್ಲಿ ಕರೆದುಕೊಂಡು ಹೋಗಿ ವೀರನಹೊಸಳ್ಳಿ ಅರಣ್ಯ ವಲಯ ವ್ಯಾಪ್ತಿಯಲ್ಲಿ ನಿರ್ಮಿಸಿರುವ ರೋಪ್ ವೇ ಬೇಲಿಯನ್ನು ತೋರಿಸಿದರು. ಇದೇ ಮಾದರಿಯಲ್ಲಿ ಹುಲ್ಲೇಪುರ ಗ್ರಾಮದಿಂದ ಉತ್ತೇನಹಳ್ಳಿ ಗ್ರಾಮದವರೆಗೆ ಬೇಲಿ ನಿರ್ಮಾಣ ಮಾಡುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು.

ಈ ವೇಳೆ ಗ್ರಾಮದ ಮುಖಂಡರಾದ ಪುಟ್ಟರಾಜ್, ಸಣ್ಣೇಗೌಡ, ರಂಗಣ್ಣ, ಯತೀಶ್, ಸುನೀಲ್, ಪ್ರಕಾಶ್, ಜಗದೀಶ್ ಇತರರಿದ್ದರು.

ಪದವೀಧರರ ಸಮಸ್ಯೆ ಅರಿತ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿ



ಹುಣಸೂರು, ಜೂ.8(ಕೆಕೆ)– ನಾಡಿನ ನೆಲ, ಜಲ, ಭಾಷೆ ಬಗ್ಗೆ ಅತೀವ ಪ್ರಭಾವ ಬೀರಿದ್ದ ಮಂಡ್ಯದ ಜಿ.ಮಾದೇಗೌಡರು ದೇಶಕ್ಕೆ ಮಾದರಿ ರಾಜಕಾರಣಿಯಾಗಿದ್ದು, ಅವರಂತೆ ಅವರ ಪುತ್ರ ಮಧು ಜಿ.ಮಾದೇಗೌಡ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಕೆಲಸ ಮಾಡಿದ್ದು, ವಿಧಾನ ಪರಿಷತ್ತಿನಲ್ಲಿ ಪದವೀಧರರ ಧ್ವನಿಯಾಗಲಿದ್ದು, ಇವರನ್ನು ದಕ್ಷಿಣ ಪದವೀಧರರ ಕ್ಷೇತ್ರದಿಂದ ಗೆಲ್ಲಿಸಬೇಕು ಎಂದು ಶಾಸಕ ಹೆಚ್.ಪಿ.ಮಂಜುನಾಥ್ ಮನವಿ ಮಾಡಿದರು.

ಬಿಳಿಕೆರೆ ಹೋಬಳಿ ವ್ಯಾಪ್ತಿಯ ಹಳೇಬೀಡು, ಬೋಳನಹಳ್ಳಿ, ಹುಸೇನ್‌ಪುರ, ಮನುಗನಹಳ್ಳಿ, ಚಲ್ಲಹಳ್ಳಿ, ಗಾಗೇನಹಳ್ಳಿ, ಚಿಕ್ಕಬೀಚನಹಳ್ಳಿ ಗ್ರಾಪಂಗಳ ವ್ಯಾಪ್ತಿಯ ಪದವೀಧರ ಮತದಾರರ ಮತಯಾಚನೆ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಧರ್ಮ–ಜಾತಿಗಳ ನಡುವೆ ಭಯದ ವಾತಾವರಣ ಉಂಟು ಮಾಡಿ, ಇಂಧನ, ಅನಿಲ ಹಾಗೂ ರಸಗೊಬ್ಬರ ಬೆಲೆಯನ್ನು ಹೆಚ್ಚಿಸಿ ಜನಸಾಮಾನ್ಯರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡೆಗೆ ಚಾಟಿ ಬೀಸುವ ಮೂಲಕ ಪ್ರಬುದ್ಧ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಮೇಶ್, ದೇವರಾಜ್, ನಾರಾಯಣ್, ಕಾರ್ಯಾಧ್ಯಕ್ಷ ಕೆಂಪೇಗೌಡ, ಮುಖಂಡರಾದ ಹಂದನಹಳ್ಳಿ ಸೋಮಶೇಖರ್, ಬಿಳಿಕೆರೆ ಬಸವ ರಾಜ್, ಉದ್ಯಮಿ ನಾಡಪ್ಪನಹಳ್ಳಿ ರಾಜು, ರಾಘು, ಮಾದೇವ್, ಹಗರನಹಳ್ಳಿ ಕುಮಾರ್, ಗಾಗೇನಹಳ್ಳಿ ಕುಮಾರ್, ಬಾಬಣ್ಣ ಶೇಖರ್ ಸೇರಿದಂತೆ ಇತರರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಪರ ಶಾಸಕ ಯತೀಂದ್ರ ಸಿದ್ದರಾಮಯ್ಯ ಪ್ರಚಾರ



ತಗಡೂರು, ಜೂ.8(ಮೋಹನ್)– ನಂಜನಗೂಡು ತಾಲೂಕಿನ ತಗಡೂರು ಸೇರಿದಂತೆ ವಿವಿಧೆಡೆ ಪದವೀಧರ ಮತದಾರರ ಮನೆಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರಿಗೆ ಮತ ನೀಡುವಂತೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದರು.

ಈ ವೇಳೆ ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಗಾರ್ಡನ್ ಮಹೇಶ್, ಸುರೇಶ್, ಬಸವರಾಜ್, ಶ್ರೀಕಂಠ, ಮಹೇಶ್, ಕಾಂತರಾಜ್, ಗ್ರಾಪಂ ಸದಸ್ಯರಾದ ಮಾದಶೆಟ್ಟಿ, ಸಂಪತ್ ಕುಮಾರ್, ಕಾಂತರಾಜ್, ಬಾಲು, ಶಿವರಾಮು, ಸಿದ್ದರಾಜು, ನಾಗಣ್ಣ, ಪುಟ್ಟಣ್ಣ, ಬಸವಣ್ಣ, ದೇವರಾಜಮ್ಮ ಇದ್ದರು.

ಬಿಜೆಪಿ ಅಭ್ಯರ್ಥಿ ಗೆಲುವು ನಿಶ್ಚಿತ: ಮಿರ್ಲೆ ಶ್ರೀನಿವಾಸಗೌಡ ವಿಶ್ವಾಸ



ಭೇರ್ಯ, ಜೂ.8– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣಾ ಪ್ರಚಾರ ಬಿರುಸಿನಿಂದ ಮಾಡಲಾಗುತ್ತಿದ್ದು, ಹೋದೆಲ್ಲೆಡೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ನೂರಕ್ಕೆ ನೂರರಷ್ಟು ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಗೆಲುವು ಸಾಧಿಸಲಿದ್ದಾರೆ ಎಂದು ಜಿಲ್ಲಾ ಬಿಜೆಪಿ ವಕ್ತಾರ ಮಿರ್ಲೆ ಶ್ರೀನಿವಾಸಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿನ ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜಿನಲ್ಲಿ ದಕ್ಷಿಣ ಪದವೀಧರರ ಕ್ಷೇತ್ರದ ಅಭ್ಯರ್ಥಿ ಮೈ.ವಿ. ರವಿಶಂಕರ್ ಪರವಾಗಿ ಚುನಾವಣಾ ಪ್ರಚಾರ ನಡೆಸಿ ಅವರು ಮಾತನಾಡಿದರು. ಈ ವೇಳೆ ಪುರಸಭಾ ನಾಮನಿರ್ದೇಶಿತ ಸದಸ್ಯ ರಂಗಸ್ವಾಮಿ, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಅನೀಲ್‌ಗೌಡ, ಆಶ್ರಯ ಸಮಿತಿ ಸದಸ್ಯ ರಾಮಕೃಷ್ಣ, ಮುಖಂಡರಾದ ಶಿವರಾಮ್, ಜಿ.ಜಿ.ಮಂಜು, ಚನ್ನೇಗೌಡ ಇದ್ದರು.

ಹಂಪಾಪುರ–ಹೊಮ್ಮರಗಳ್ಳಿ ಬಸ್ ನಿಲುಗಡೆಗೆ ಒತ್ತಾಯ

ಹಂಪಾಪುರ, ಜೂ.8(ರಾಜೇಶ್)– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ–ಹೊಮ್ಮರಗಳ್ಳಿ ಗ್ರಾಮದಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳ ನಿಲುಗಡೆಗೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.



ಹೆಚ್.ಡಿ.ಕೋಟೆಯಿಂದ ಹಂಪಾಪುರ–ಹೊಮ್ಮರ ಗಳ್ಳಿ ಮಾರ್ಗವಾಗಿ ಮೈಸೂರಿಗೆ ಪ್ರತಿನಿತ್ಯ 20ಕ್ಕೂ ಹೆಚ್ಚು ಕೆಎಸ್‌ಆರ್‌ಟಿಸಿ ಬಸ್‌ಗಳು ಸಂಚಾರಿಸುತ್ತಿದ್ದು, ಬೆಳಗ್ಗೆ 6.30ರಿಂದ 9.30ರವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 9ಗಂಟೆಯವರೆಗೆ ಬಹುತೇಕ ಬಸ್‌ಗಳು ನಿಲುಗಡೆ ಮಾಡುತ್ತಿಲ್ಲ. ಇದರಿಂದ ಗ್ರಾಮಸ್ಥರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪ್ರತಿನಿತ್ಯ ಪರದಾಡುವಂತಾಗಿದೆ. ಖಾಸಗಿ ವಾಹನಗಳ ಮೊರೆ ಹೋಗುವಂತಾಗಿದೆ. ವಿದ್ಯಾರ್ಥಿಗಳು ಬಸ್‌ಪಾಸ್‌ಗಳನ್ನು ಪಡೆದುಕೊಂಡಿದ್ದರು. ಬಹುತೇಕ ಬಸ್‌ಗಳ ನಿಲುಗಡೆ ಇಲ್ಲದೆ ಇರುವುದರಿಂದ ಅದರ ಅನುಕೂಲವಾಗು ತ್ತಿಲ್ಲ. ನಿಲುಗಡೆ ಮಾಡುವ ಕೆಲವೇ ಬಸ್‌ಗಳಲ್ಲಿ ಅಧಿಕ ಮಂದಿ ಹತ್ತುವುದರಿಂದ ಬಸ್‌ನ ಬಾಗಿಲು ಬಳಿ ನಿಂತು ಪ್ರಯಾಣಿಸುವಂತಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ, ಎಲ್ಲಾ ಸಮಯದಲ್ಲೂ, ಬಸ್‌ಗಳ ನಿಲುಗಡೆ ಮಾಡಬೇಕು. ಇಲ್ಲವಾದರೇ ಮುಂದಿನ ದಿನಗಳ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಹಿರೇಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ನಾಗಮ್ಮ ಅವಿರೋಧ ಆಯ್ಕೆ



ಹೆಚ್.ಡಿ.ಕೋಟೆ, ಜೂ.8(ಮಂಜು)– ತಾಲೂಕಿನ ಹಿರೇಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ನಾಗಮ್ಮ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಬಿಆರ್‌ಸಿ ಕೃಷ್ಣಯ್ಯ, ಪಿಡಿಓ ಸಂತೋಷನಾಗ್ ಕರ್ತವ್ಯ ನಿರ್ವಹಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡ ಹಿರೇಹಳ್ಳಿ ಸೋಮೇಶ್ ಹಾಗೂ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ಮಾಜಿ ಅಧ್ಯಕ್ಷೆ ಕಾವ್ಯಶ್ರೀ, ಉಪಾಧ್ಯಕ್ಷ ಮಂಜು, ಸದಸ್ಯರಾದ ನಾಗೇಶ್, ಮಂಜುನಾಥ್, ಮಾಲ, ಜಯರಾಜು, ಜಯರಾಮ್, ಇಂದ್ರಮ್ಮ, ಚೆನ್ನಮ್ಮ, ಬೆಟ್ಟಯ್ಯ, ನಾಗನಾಯಕ, ನಾಗೇಂದ್ರ, ನಾಗಮ್ಮ, ಕೆಂಪೇಗೌಡ, ನೇತ್ರಾವತಿ, ಬಸವರಾಜು, ಗಿರಿಜಾ, ನಾಗನಾಯಕ, ಮಹದೇವಸ್ವಾಮಿ, ಮುಖಂಡರಾದ ಮಹೇಶ್, ಸುರೇಶ್, ನಿಂಗನಾಯಕ, ಯೋಗೇಶ್, ಮಹೇಂದ್ರ ಕರಿಗೌಡಸ್ವಾಮಿ, ಚಿನ್ನಸ್ವಾಮಿ, ಕರಿನಾಯಕ, ಬೆಟ್ಟಯ್ಯ, ಚಂದ್ರು ಇತರರು ಇದ್ದರು.

ಮಧು ಜಿ.ಮಾದೇಗೌಡ ಪರ ಕಳಲೆ ಕೇಶವಮೂರ್ತಿ ಮತಯಾಚನೆ



ನಂಜನಗೂಡು, ಜೂ.8(ಸುದರ್ಶನ)– ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರ ಪರವಾಗಿ ತಾಲೂಕಿನ ಕಳಲೆ ಗ್ರಾಪಂ ವ್ಯಾಪ್ತಿಯಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮತಯಾಚಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಹೆಡತಲೆ ದೊರೆಸ್ವಾಮಿನಾಯಕ, ಗ್ರಾಪಂ ಸದಸ್ಯರಾದ ಪ್ರಸನ್ನಕುಮಾರ್, ಶಿವಕುಮಾರ್, ಬಾಲಕೃಷ್ಣ, ಹರೀಶ್, ಸಿದ್ದೇಶ್, ಮುಖಂಡರಾದ ಬೈರನಾಯಕ, ರಾಚನಾಯಕ, ಬಂಗಾರನಾಯಕ, ಮಹೇಶ, ರಾಜೇಶ್, ಸುಬ್ಬೆಗೌಡ ಇದ್ದರು.

ಮಧು ಜಿ.ಮಾದೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಲು ಮನವಿ



ಸರಗೂರು, ಜೂ.8(ನಾಗೇಶ್)– ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅವಧಿಯಲ್ಲಿ ಕಾಂಗ್ರೆಸ್ ಜನಪರ ಆಡಳಿತ ನೀಡಿದೆ. ಇದನ್ನು ಜನತೆ ಮರೆತಿಲ್ಲ. ಹಾಗಾಗಿ, ಈ ಬಾರಿಯು ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಗೆಲುವು ನಿಶ್ಚಿತ ಎಂದು ಶಾಸಕ ಅನಿಲ್ ಚಿಕ್ಕಮಾಧು ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಮಂಗಳವಾರ ದಕ್ಷಿಣ ಪದವೀಧರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಪ್ರಚಾರ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಮಧು ಜಿ.ಮಾದೇಗೌಡ ಅವರು ಪದವೀಧರರ ಹತ್ತು–ಹಲವು ಸಮಸ್ಯೆಗಳನ್ನು ಬಗೆಹರಿಸಲಿದ್ದಾರೆ. ಇದರಿಂದಾಗಿ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಬೇಕು ಎಂದು ತಿಳಿಸಿದರು. ಈ ವೇಳೆ ಪಪಂ ಸದಸ್ಯರಾದ ಶ್ರೀನಿವಾಸ್, ಮುಖಂಡರಾದ ಸತೀಶ್‌ಗೌಡ, ಜೆ.ಕೆ.ಜಯರಾಮ್, ಮುಖ್ಯಶಿಕ್ಷಕ ಮಹಮದ್ ಅಂಜುಪಾಷ, ಗಂಗಾಧರ್ ಇತರರು ಇದ್ದರು.

ಮಗಳ ಮೇಲೆ ಲೈಂಗಿಕ ದೌರ್ಜನ್ಯ: ಮನನೊಂದು ತಂದೆ ಆತ್ಮಹತ್ಯೆ

ಹುಣಸೂರು, ಜೂ.8(ಕೆಕೆ)– ಯುವಕನೊಬ್ಬ ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದು, ಇದರಿಂದ ಮನನೊಂದು ಆಕೆಯ ತಂದೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಗ್ರಾಮವೊಂದರಲ್ಲಿ ನಡೆದಿದೆ.

ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿದ್ದ ಬಾಲಕಿಯನ್ನು ಪಕ್ಕದ ಮನೆಯ ಯುವಕನೊಬ್ಬ ಇಲ್ಲಸಲ್ಲದ ಆಸೆ ತೋರಿಸಿ, ಆಕೆಯೊಂದಿಗೆ ವರ್ಷದಿಂದ ಲೈಂಗಿಕ ಸಂಪರ್ಕ ಬೆಳೆಸಿದ್ದಾನೆ. ಮೂರು ದಿನಗಳ ಹಿಂದೆ ಬಾಲಕಿ ಹೊಟ್ಟೆನೋವು ಎಂದು ಬಳಲುತ್ತಿದ್ದಾಗ ಪೋಷಕರು ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಆಗ ಆಕೆ ಗರ್ಭಿಣಿಯಾಗಿರುವುದು ಬೆಳಕಿಗೆ ಬಂದಿದೆ ಎನ್ನಲಾಗಿದೆ.

ಈ ಬಗ್ಗೆ ಪೋಷಕರು ಬಾಲಕಿಯನ್ನು ವಿಚಾರಿಸಿದಾಗ, ಪಕ್ಕದ ಮನೆಯ ಯುವಕ ವರ್ಷದಿಂದ ನನ್ನೊಂದಿಗೆ ಲೈಂಗಿಕ ಸಂಪರ್ಕ ಬೆಳೆಸಿದ್ದು, ಆತನೇ ಕಾರಣ ಎಂದು ತಿಳಿಸಿದ್ದಾಳೆ. ಕೂಡಲೇ, ಪೋಷಕರು ಯುವಕನ ಮನೆಯವರನ್ನು ಕೇಳಿದಾಗ, ಅವರು ಇದಕ್ಕೂ ನಮಗೂ ಸಂಬಂಧವಿಲ್ಲ ವೆಂದು ಗಲಾಟೆ ಮಾಡಿ ಕಳುಹಿಸಿದ್ದಾರೆ ಎನ್ನಲಾಗಿದೆ.

ಮಗಳಿಗಾದ ಅನ್ಯಾಯ ಮತ್ತು ಅವಮಾನದಿಂದ ಅತೀವ ಮನನೊಂದ ಅಪ್ರಾಪ್ತೆಯ ತಂದೆ ಬುಧವಾರ ಮನೆಯಲ್ಲಿ ಯಾರು ಇಲ್ಲದ ವೇಳೆ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಪ್ರಾಪ್ತೆಯ ತಾಯಿ ದೂರು ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಯುವಕ ನಾಪತ್ತೆಯಾಗಿದ್ದು, ಆತನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬಿಜೆಪಿ ಪರ ಮತದಾರರ ಒಲವು

ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ವಿಶ್ವಾಸ



ತಿ.ನರಸೀಪುರ, ಜೂ.8(ಎಸ್‌ಕೆ)– ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತದಾರರು ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತಿರುವ ಬಿಜೆಪಿ ಪಕ್ಷದ ಕಡೆವಾಲುತ್ತಿದ್ದು, ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ತಮಗೆ ಗೆಲುವಿನ ವಿಶ್ವಾಸವಿದೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಹೇಳಿದರು.

ಪಟ್ಟಣದ ಪ್ರತಿಷ್ಠಿತ ವಿದ್ಯೋದಯ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಾಪಕರು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರನ್ನು ಭೇಟಿ ಮಾಡಿ ಮತಯಾಚಿಸಿ ಮಾತನಾಡಿದ ಅವರು, ಕಳೆದ ಮೂರು ತಿಂಗಳಿಂದ ನಿರಂತರವಾಗಿ ಚುನಾವಣೆ ಪ್ರಚಾರದಲ್ಲಿ ತೊಡಗಿಕೊಂಡಿದ್ದೇನೆ. ಇಡೀ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಅರಿತಿದ್ದೇನೆ. ಕ್ಷೇತ್ರದ ಪದವೀಧರ ಪ್ರಜ್ಞಾವಂತ ಮತದಾರರು ತಮಗೆ ಆಶೀರ್ವದಿಸಿದ್ದೇ ಆದಲ್ಲಿ ಪದವೀಧರರು, ನಿರುದ್ಯೋಗಿಗಳು ಹಾಗೂ ಶಿಕ್ಷಕರ ಧ್ವನಿಯಾಗಿ ವಿಧಾನಪರಿಷತ್‌ನಲ್ಲಿ ಕೆಲಸ ಮಾಡಲಿದ್ದೇನೆ ಎಂದರು.

ಚುನಾವಣೆಗೆ ಕೇವಲ ನಾಲ್ಕು ದಿನವಷ್ಟೇ ಬಾಕಿ ಇದೆ. ಮುಖ್ಯಮಂತ್ರಿಗಳು, ಸಚಿವರಾದ ಸೋಮಣ್ಣ, ಡಾ.ಅಶ್ವಥ್ ನಾರಾಯಣ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ವಿಜಯೇಂದ್ರ, ಸುನೀಲ್‌ಕುಮಾರ್ ಮೈಸೂರಿನಲ್ಲಿ ಪಕ್ಷದ ಪರವಾಗಿ ಪ್ರಚಾರ ಮಾಡಿದ್ದಾರೆ. ರಾಜ್ಯದ ಬಿಜೆಪಿ ನಾಯಕರು ಒಂದೊಂದು ಜಿಲ್ಲೆಗಳಲ್ಲಿ ಸಂಚರಿಸಿ ಮತಯಾಚಿಸುತ್ತಿದ್ದು, ಅಭ್ಯರ್ಥಿಯಾಗಿ ನಾನು ಸಹ ಹಲವಾರು ಕಡೆ ಪದವೀಧರರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ ಹೋದ ಕಡೆ ಎಲ್ಲಾ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಈ ವೇಳೆ ವಿದ್ಯೋದಯ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ, ಆಡಳಿತಾಧಿಕಾರಿ ಕೆ.ಪಿ.ಉದಯಕುಮಾರ್, ತಾಲೂಕು ವೀರಶೈವ ನೌಕರರ ಸಂಘದ ಅಧ್ಯಕ್ಷ ಶಂಭುದೇವನಪುರ ಮಟ್ಟಬುದ್ಧಿ, ಉಪನ್ಯಾಸಕ ಕುಮಾರಸ್ವಾಮಿ, ಕಲ್ಮಳ್ಳಿ ಶಿವಕುಮಾರ್, ಪುರಸಭೆ ಸದಸ್ಯ ಎಸ್.ಕೆ.ಕಿರಣ್, ಡಿ.ಎಲ್.ಮಹದೇವಪ್ಪ, ಕೊತ್ತೆಗಾಲ ಕಿಟ್ಟಿ, ಕೆಬ್ಬೇಹುಂಡಿ ಶಿವಕುಮಾರ್, ಮಾಧ್ಯಮ ಪ್ರಮುಖ್ ಮಂಜುನಾಥ್, ಬನ್ನಳ್ಳಿಹುಂಡಿ ಪ್ರಕಾಶ್, ಕುರುಬೂರು ಶಿವು, ತೋಟದಪ್ಪ ಬಸವರಾಜು ಮತ್ತಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಾಕ್ಟರ್ ಸ್ಟ್ರೇಂಜ್ (3ಡಿ)(ಇಂ): ಬೆ.10.40ಕ್ಕೆ, ಬೂಲ್ ಬುಲಾಯ್ಯ (ಹಿಂ): ಮ.1.15ಕ್ಕೆ, ವಿಕ್ರಂ (ತ): ಸಂ.4ಕ್ಕೆ, ಮೇಜರ್ (ತೆ): ರಾ.7.20ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಮೆಟಡೊರ್ (ಕ): ಬೆ.11ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1.45ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.4.05ಕ್ಕೆ, ಪೃಥ್ವಿರಾಜ್ (ಹಿಂ): ರಾ.7.15ಕ್ಕೆ, ರಾ.10ಕ್ಕೆ
ಸ್ಕ್ರೀನ್ 3	ಮೇಜರ್ (ತೆ): ಬೆ.10.15ಕ್ಕೆ, ಕೆಜಿಎಫ್ 2(ಕ): ಮ.1.10ಕ್ಕೆ, ಪೃಥ್ವಿರಾಜ್ (ಹಿಂ): ಸಂ.4.20ಕ್ಕೆ, ಮೇಜರ್ (ಹಿಂ): ರಾ.7ಕ್ಕೆ, ಮೇಜರ್ (ಮ): ರಾ.10ಕ್ಕೆ.
ಸ್ಕ್ರೀನ್ 4	ವಿಕ್ರಂ (ತ): ಬೆ.9.45ಕ್ಕೆ, ಮ. 1ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಟಾಪ್‌ಗನ್ (ಇಂ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಂ (ತ): ಬೆ.11.35ಕ್ಕೆ, ಮ.3.10ಕ್ಕೆ, ಸಂ.6.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.9.40ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಮ.1.10ಕ್ಕೆ, ರಾ.7.15ಕ್ಕೆ, ಮೇಜರ್ (ತೆ): ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸಾಮ್ರಾಟ್ ಪೃಥ್ವಿರಾಜ್ (ಕ): ಬೆ.9.50ಕ್ಕೆ, ರಾ.10.30ಕ್ಕೆ, ಮೆಟಡೊರ್ (ಕ): ಮ.12.45ಕ್ಕೆ, ಮನಸ್ಮಿತ (ಕ): ಮ.3.40ಕ್ಕೆ, ವಿಕ್ರಂ (ತ): ಸಂ.6.55ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.9.55ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಮ.1ಕ್ಕೆ, ಮೇಜರ್ (ಹಿಂ): ಸಂ.6.50ಕ್ಕೆ, ಕೆಜಿಎಫ್ 2(ಕ): ಮ.3.25ಕ್ಕೆ, ಬೂಲ್ ಬುಲಾಯ್ಯ 2(ಹಿಂ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10.30ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.25ಕ್ಕೆ, ಮೆಟಡೊರ್ (ಕ): ಮ.1.15ಕ್ಕೆ.
ಸ್ಕ್ರೀನ್ 2	ವಿಕ್ರಂ (ತ): ಬೆ.10ಕ್ಕೆ, ರಾ.9.30ಕ್ಕೆ, ಮೇಜರ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ವಿಕ್ರಂ (ತ): ಮ.1ಕ್ಕೆ, ಸಂ.4.25ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಮೇಜರ್ (ತೆ): ಬೆ.10.25ಕ್ಕೆ, ಮ.1.20ಕ್ಕೆ, ಸಂ.6.35ಕ್ಕೆ, ಗಜಾನನ ಅಂಡ್ ಗ್ಯಾಂಗ್ (ಕ): ಸಂ.4.15ಕ್ಕೆ, ಮೇಜರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357088

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕೆಜಿಎಫ್ 2(ಕ): ಸಂ.5.35ಕ್ಕೆ, ರಾಜ್ ಸೌಂಡ್ಸ್ ಅಂಡ್ ಲೈಟ್ಸ್ (ತು): ಸಂ.6.05ಕ್ಕೆ, ಮೆಟಡೊರ್ (ಕ): ಬೆ.11.45ಕ್ಕೆ, ಟಾಪ್ ಗನ್ (ಇಂ): ಮ.2.45ಕ್ಕೆ, ಸಾಮ್ರಾಟ್ ಪೃಥ್ವಿರಾಜ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಬೂಲ್‌ಬುಲಯ್ಯ 2(ಹಿಂ): ಮ.12.30ಕ್ಕೆ, ಸಂ.6.40ಕ್ಕೆ, ಮೇಜರ್ (ಹಿಂ): ಮ.1.05ಕ್ಕೆ, ರಾ.7.15ಕ್ಕೆ, ರಾ.9.20ಕ್ಕೆ, ವಿಕ್ರಮ್ (ತ): ಬೆ.8.30ಕ್ಕೆ, ಬೆ.9.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.35ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9ಕ್ಕೆ, ರಾ.10.30ಕ್ಕೆ, ಮೇಜರ್ (ತೆ): ಬೆ.9.25ಕ್ಕೆ, ಸಂ.4.10ಕ್ಕೆ, ರಾ.10.20ಕ್ಕೆ, F3 (ತೆ): ಮ.3.35ಕ್ಕೆ, ಸರ್ಕಾರು ವಾರಿ ಪಾಠ (ತೆ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಿಕ್ರಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೆಜಿಎಫ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿಕ್ರಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮೇಜರ್ (ಹಿಂ)	4 ಪ್ರದರ್ಶನಗಳು
ರಾಜ್‌ಕಮಲ್	
ಪೃಥ್ವಿರಾಜ್ (ಹಿಂ)	4 ಪ್ರದರ್ಶನಗಳು
ಸಂಗಂ	
ವಿಕ್ರಂ (ತ)	4 ಪ್ರದರ್ಶನಗಳು
ಲಿಡೋ	
ಮೇಜರ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಮೇಜರ್ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಮೇಜರ್ (ತೆ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಜಾನನ ಅಂಡ್ ಗ್ಯಾಂಗ್ (ಕ)	4 ಪ್ರದರ್ಶನಗಳು

ರವಿಶಂಕರ್ ಪರ ಶಾಸಕ ಹರ್ಷವರ್ಧನ್ ಪ್ರಚಾರ



ಮಲ್ಕುಂಡಿ, ಜೂ. 8(ಚನ್ನಪ್ಪ)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ನಂಜನಗೂಡು ತಾಲೂಕಿನ ಕುರಿ ಹುಂಡಿ ಗ್ರಾಪಂ ವ್ಯಾಪ್ತಿ ಯ ಕಣ್ಣೆ ನೂರು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಪರವಾಗಿ ಶಾಸಕ ಬಿ.ಹರ್ಷವರ್ಧನ್ ಮತಯಾಚಿಸಿದರು. ಈ ವೇಳೆ ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ಗ್ರಾಪಂ ಅಧ್ಯಕ್ಷೆ ವಿದ್ಯಾ, ಉಪಾಧ್ಯಕ್ಷೆ ಚಂದ್ರಕಲಾ, ಗ್ರಾಪಂ ಸದಸ್ಯ ಗಂಗಾಧರ್ ಹಾಜರಿದ್ದರು.

ಯುವಕ ನಾಪತ್ತೆ



ತಿ.ನರಸೀಪುರ, ಜೂ.8(ಎಸ್.ಕೆ)– ತಾಲೂಕಿನ ಮುಸುವಿನಕೊಪ್ಪಲು ಗ್ರಾಮದ ಮಹೇಶ್(27) ಕಳೆದ ಮಾರ್ಚ್‌ನಿಂದ ಕಾಣೆಯಾಗಿದ್ದಾರೆ. ಗ್ರಾಮದ ಕೆಂಚೇಗೌಡರ ಪುತ್ರನಾದ ಈತ ಮಾ.17ರಂದು ಮನೆಯಿಂದ ಹೊರ ಹೋದವನು, ಇದುವರೆವಿಗೂ ಪತ್ತೆಯಾಗಿಲ್ಲ.

ಚಹರೆ: ಗುಂಡು ಮುಖ, ಎಣೆಗೆಂಪು ಬಣ್ಣ, ಒರಟು ಮೈಕಟ್ಟು, 5.5 ಅಡಿ ಎತ್ತರವಿದ್ದು, ಮನೆಯಿಂದ ಹೋಗುವಾಗ ತುಂಬು ತೋಳಿನ ಷರ್ಟ್ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಈತನ ಬಗ್ಗೆ ಸುಳಿವು ಸಿಕ್ಕರೆ ತಿ.ನರಸೀಪುರ ಪೊಲೀಸ್ ಠಾಣೆ 08227–261227 ಸಂಪರ್ಕಿಸಲು ಕೋರಲಾಗಿದೆ.

ತಂಬಾಕು ಬೆಳೆಗಾರರಿಗೆ ನೆರವಾಗುವಂತೆ ಮನವಿ



ಪಿರಿಯಾಪಟ್ಟಣ, ಜೂ.8(ವೀರೇಶ್)– ತಾಲೂಕಿನಲ್ಲಿ ತಂಬಾಕು ಬೆಳೆಯುವ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಕೂಡಲೇ ಇವರ ನೆರವಿಗೆ ಧಾವಿಸಬೇಕು ಎಂದು ತಂಬಾಕು ಮಂಡಳಿ ನಿರ್ದೇಶಕರಾಗಿ ಆಯ್ಕೆಯಾಗಿರುವ ಮಾಜಿ ಶಾಸಕ ಹೆಚ್.ಸಿ. ಬಸವರಾಜ ಅವರಿಗೆ ಪಿರಿಯಾಪಟ್ಟಣ ಕಲ್ಪವೃಕ್ಷ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ ಮನವಿ ಮಾಡಿದರು. ನೂತನವಾಗಿ ಆಯ್ಕೆಗೊಂಡ ಬಸವರಾಜು ಅವರನ್ನು ಕಲ್ಪವೃಕ್ಷ ಸೊಸೈಟಿಯಿಂದ ಸನ್ಮಾನಿಸಿ ಮಾತನಾಡಿದ ಅವರು, ಮಾರುಕಟ್ಟೆಯಲ್ಲಿ ಈಗಾಗಲೇ ಮೂಲ ಸೌಕರ್ಯಗಳ ಕೊರತೆಯಿಂದಾಗಿ ರೈತರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ರಾಜೇಂದ್ರ, ಒಕ್ಕಲಿಗರ ವೇದಿಕೆ ಅಧ್ಯಕ್ಷ ಎಸ್.ಆರ್.ದಿನೇಶ್‌ಗೌಡ, ಕಿರಂಗೂರು ಮೋಹನ್‌ಗೌಡ, ಕೆ.ಎಲ್.ಸುರೇಶ್, ಶಿವರಾಂ, ಜೆಸಿಬಿ ಕೆಂಪಣ್ಣ ಅಭಿ, ವಿಜಿಕುಮಾರ್ ಇದ್ದರು.

ಉಚಿತ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.8–ನಗರದ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಕುಂಬಾರರ ಸಾರ್ವಜನಿಕ ವಿದ್ಯಾರ್ಥಿನಿಲಯಕ್ಕೆ ಉಚಿತ ವಸತಿ ಸೌಕರ್ಯಕ್ಕಾಗಿ 2022–23ನೇ ಸಾಲಿಗೆ ಕುಂಬಾರ ಜನಾಂಗದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಮಾಹಿತಿಗೆ 9611599514, 6361345314 ಸಂಪರ್ಕಿಸಿ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರ ಕಛೇರಿ, ಕಾ ಮತ್ತು ಪಾ, ಎನ್.ಆರ್.ಮೊಹಲ್ಲಾ ವಿಭಾಗ, ಚಾವಿಸನಿನಿ, ಶ್ರೀ ಹರ್ಷ ರಸ್ತೆ, ಮೈಸೂರು–570001.
ದೂರವಾಣಿ:0821–2431165 ಇ–ಮೇಲ್: eeenrm@cescmysore.org ವೆಬ್‌ಸೈಟ್:www.cescmysore.org

ಸಂಖ್ಯೆ:ಕಾನಿಇಂ(ವಿ)/ಲೆಅ/ಸಲೆಅ/ಹಿಸ/(ಸಿ)/2022–23/472 ದಿನಾಂಕ: 01.06.2022

ಅಂತಿಮ ಮರುಕರೆ ನೋಟೀಸ್

ಶ್ರೀ ಸಚ್ಚಿನ್ ಹೆಬ್ಬಾರಿ, ಕಿರಿಯ ಮಾರ್ಗದಾಳು, ಎಂ.ಪಿ.ಎಲ್ ಶಾಖೆ, ಕೇಂದ್ರ ಉಪ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು ಆದ ನೀವು ನಿಗಮದ ಕೆಲಸಕ್ಕೆ ಆಗಸ್ಟ್–2021 ರಿಂದ ನಿಗಮದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತಾರೆ. ಈ ನಿಮ್ಮ ಗೈರು ಹಾಜರಾತಿಯಿಂದ ನಿಗಮದ ಕೆಲಸಕ್ಕೆ ತೊಂದರೆಯಾಗಿರುತ್ತದೆ. ಅಲ್ಲದೆ, ಈ ನಿಮ್ಮ ಅನಧಿಕೃತ ಗೈರು ಹಾಜರಾತಿಯು ಅಶಿಸ್ತಿನ ನಡವಳಿಯಾಗಿರುತ್ತದೆ. ಈ ಸಂಬಂಧವಾಗಿ ನಿಮ್ಮ ಸೇವಾಪುಸ್ತಕದಲ್ಲಿ ನಮೂದಿಸಲಾಗಿರುವ ವಿಳಾಸ ಶ್ರೀ ಸಚ್ಚಿನ್ ಹೆಬ್ಬಾರಿ, ಕಿರಿಯ ಮಾರ್ಗದಾಳು, ಸುರೋಬಾನ–591127 ಬೆಳಗಾವಿ ಜಿಲ್ಲೆ. ಇಲ್ಲಿಗೆ ಈ ಕಛೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಲೆಅ/ಸಲೆಅ/ಹಿಸ(ಸಿ)ಎನ್.ಆರ್.ಮೊ–ವಿ–2022–23/318–19 ದಿನಾಂಕ:18.04.2022 ರಲ್ಲಿ ಕೆಲಸಕ್ಕೆ ಹಾಜರಾಗಲು ಸೂಚಿಸಿ ಮರುಕರೆ ನೋಟಿಸ್ ನೀಡಲಾಗಿರುತ್ತದೆ. ಸದರಿ ಪತ್ರದಲ್ಲಿನ ಸೂಚನೆಯನ್ವಯ ಏಳು (7) ದಿನಗಳ ಒಳಗಾಗಿ ಲಿಖಿತ ಸಮಜಾಯಿಷಿಯೊಡನೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಹಾಜರಾಗಲು ನೀವು ವಿಫಲರಾಗಿರುತ್ತೀರಿ. ನಿಮ್ಮ ನಡವಳಿಕೆಯು ನಿಗಮದ ಸೇವೆಯಲ್ಲಿ ನೀವು ಮುಂದುವರೆಯಲು ಆಸಕ್ತಿ ಇಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಆದಾಗ್ಯೂ, ನಿಯಮಾನುಸಾರ ನಿಮಗೆ ಅಂತಿಮವಾಗಿ ಈ ಪತ್ರಿಕಾ ಪ್ರಕಟಣೆ ದಿನಾಂಕದಿಂದ 15 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಮ್ಮ ಗೈರುಹಾಜರಿಗೆ ಸೂಕ್ತ ಲಿಖಿತ ಸಮಜಾಯಿಷಿಯೊಂದಿಗೆ ಹಾಜರಾಗುವುದು. ಇಲ್ಲವಾದಲ್ಲಿ, ನಿಮಗೆ ನಿಗಮದ ಸೇವೆಯಲ್ಲಿ ಮುಂದುವರೆಯುವ ಯಾವುದೇ ಇಚ್ಛೆ ಹಾಗೂ ಆಸಕ್ತಿ ಇಲ್ಲವೆಂದು ಪರಿಗಣಿಸಿ ನಿಗಮದಲ್ಲಿ ಚಾಲ್ತಿಯಲ್ಲಿರುವ ಸಿಬ್ಬಂದಿ ಸೇವಾ(ನಡತೆ) ನಿಯಮಗಳು ಹಾಗೂ ನಿಗಮದ ನೌಕರರ ಸಿ.ಡಿ.ಸಿ.ಎ. ನಿಯಮಾವಳಿಗಳನ್ವಯ ಯಾವುದೇ ಮುನ್ಸೂಚನೆ ಇಲ್ಲದೆ ನಿಮ್ಮನ್ನು ನಿಗಮದ ಸೇವೆಯಿಂದ ವಜಾಗೊಳಿಸಲು ಕ್ರಮ ವಹಿಸಲಾಗುವುದು ಎಂದು ಈ ಮೂಲಕ ತಮಗೆ ತಿಳಿಸಲಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ,
ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ, ಮೈಸೂರು.

DIPR/MYS/KAVITA/107/2021-22

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷಿದಾರರು ಈ ಕೆಳಗೆ ಅನುಸೂಚಿಯಲ್ಲಿ ಉದಹರಿಸಿರುವ ಸ್ವತ್ತನ್ನು ಸದರಿ ಸ್ವತ್ತಿನ ಮಾಲೀಕರಾದ ಮಂಡ್ಯ ಸಿಟಿ, ಗಾಂಧಿನಗರ, 2ನೇ ಕ್ರಾಸ್, ಮನೆ ನಂಬರ್ 2291 ರ ನಿವಾಸಿ ಲೇ॥ ಎಸ್.ಎ. ಗಫರ್ ರವರ ಮಗ ಶ್ರೀ ಎಸ್.ಜಿ. ಸುಲ್ತಾನ್ ಸಲಾಹುದ್ದೀನ್ ರವರಿಂದ ಶುದ್ಧ ಕ್ರಯಕ್ಕೆ ಕೊಳ್ಳಲು ಉದ್ದೇಶಿಸಿರುತ್ತಾರೆ. ಸದರಿ ಮಾರಾಟಗಾರರನ್ನು ಹೊರತುಪಡಿಸಿ, ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ವಗೈರೆಗಳುಳ್ಳವರು, ಅನುಸೂಚಿ ಸ್ವತ್ತಿನ ಉದ್ದೇಶಿತ ಕ್ರಯ ವ್ಯವಹರಣೆ ಬಗ್ಗೆ ತಮ್ಮ ಆಕ್ಷೇಪಣೆ ಯಾ ತಕರಾರುಗಳನ್ನು ಪೂರಕ ದಾಖಲೆ ಯಾ ಪುರಾವೆಗಳೊಂದಿಗೆ ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 07 (ಏಳು) ದಿನಗಳೊಳಗಾಗಿ ಈ ಕೆಳಸಹಿದಾರರಿಗೆ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಯಾ ತಕರಾರುಗಳು ಸಲ್ಲಿಕೆಯಾಗದಿದ್ದ ಪಕ್ಷದಲ್ಲಿ, ಅನುಸೂಚಿ ಸ್ವತ್ತಿನ ಉದ್ದೇಶಿತ ವ್ಯವಹರಣೆ ಬಗ್ಗೆ ಯಾರದೇ ಆಗಲೀ ಯಾವುದೇ ರೀತಿಯ ತಕರಾರು ಯಾ ಆಕ್ಷೇಪಣೆಗಳಿರುವುದಿಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಅನುಸೂಚಿ ಸ್ವತ್ತಿನ ಕ್ರಯ ವ್ಯವಹರಣೆಯನ್ನು ಅಂತಿಮಗೊಳಿಸುವರು. ನಿಗಧಿತ ಅವಧಿಯ ನಂತರ ಯಾವುದೇ ಆಕ್ಷೇಪಣೆ ಯಾ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಅನುಸೂಚಿ

ಮಂಡ್ಯ ಸಿಟಿ, ಮಂಡ್ಯ ನಗರಸಭಾ ಆಡಳಿತ ವ್ಯಾಪ್ತಿಗೊಳಪಟ್ಟ ಗುತ್ತಲು ಬಡಾವಣೆ, ಜಯಲಕ್ಷ್ಮೀ ಚಿತ್ರಮಂದಿರದ ಎದುರು ಬರತಕ್ಕೆ ನಗರಸಭಾ ಸ್ವತ್ತಿನ ಸಂಖ್ಯೆ 31–2–13–145L ವಾರ್ಡ್ ನಂಬರ್ 31 ರ ಹಳೇ ಸ್ವತ್ತಿನ ಸಂಖ್ಯೆ 6576, ನಿರ್ಧಾರಣಾ ಸಂಖ್ಯೆ D7/3727/6576 ನೇ ನಂಬರ್ ಖಾತೆಗೆ ಸೇರಿದ ಪೂರ್ತಾ ನಿವೇಶನದ ಅಳತೆ: ಪೂರ್ವ–ಪಶ್ಚಿಮ: 14.78 ಮೀಟರ್‌ಗಳು, ದಕ್ಷಿಣೋತ್ತರ: 42.76 ಮೀಟರ್‌ಗಳು ಅಥವಾ 631.9928 ಚದರ ಮೀಟರ್ ವಿಸ್ತೀರ್ಣವುಳ್ಳ ಪೂರ್ತಾ ವಾಣಿಜ್ಯ ನಿವೇಶನಕ್ಕೆ ಚಕ್ಕುಬಂದಿ:– ಪೂರ್ವಕ್ಕೆ: 31–2–13–145M (ಜಯಮ್ಮ ಕೋಂ ಎನ್.ಬಿ. ಮಾದುರವರ ಅಂಗಡಿ ಮಳಿಗೆಗಳು ಮತ್ತು ವಾಸದ ಮನೆ) ; ಪಶ್ಚಿಮಕ್ಕೆ: 31–2–13–145K (ಖಾಸಗಿ ಸ್ವತ್ತು) ; ಉತ್ತರಕ್ಕೆ: 31–2–521–234 (ಖಾಸಗಿ ಸ್ವತ್ತು) ; ದಕ್ಷಿಣಕ್ಕೆ: ರಸ್ತೆ 13 (ಮಂಡ್ಯ ಮಳವಳ್ಳಿ ರಸ್ತೆ). ಈ ಮಧ್ಯೆ ಇರುವ 631.9928 ಚದರ ಮೀಟರ್ ವಿಸ್ತೀರ್ಣವುಳ್ಳ ಪೂರ್ತಾ ವಾಣಿಜ್ಯ ನಿವೇಶನ.

ಸಹಿ/– ಕೆ. ಬಾಲಕೃಷ್ಣ ಭಟ್, ವಕೀಲರು,
37/A-2, (ಮಹಡಿ ಮೇಲೆ), ಉದಯರವಿ ರಸ್ತೆ, ಕುವೆಂಪುನಗರ, ಮೈಸೂರು
Mob: 88612 68888

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು